Member's Representation

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಆಹಾರದ ವಿಷಯದಲ್ಲಿ ಕೇಳಿದ ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಗಳು ಏನೋ ಹೇಳುವುದಕ್ಕೆ ಪ್ರಯತ್ನ ಮಾಡಿದರು. ಆಗ ಆಹಾರದ ಸಚಿವರು ಎದ್ದು ನಿಂತು ಏನೋ ಉತ್ತರ ಕೊಟ್ಟು ಕುಳಿತರು. 'ಯಾರ್ಡಿ ಸಮಿತಿಯವರು ವರದಿ ಕೊಟ್ಟ ಮೇಲೆ' ಅನುತ್ತಾರೆ—ಇಂತಹ ಬಹಳ ಗಂಭೀರವಾದ ವಿಷಯಗಳ ಮೇಲೆ ಹಾರಿಕೆ ಮಾತುಗಳನ್ನು ಹೇಳಿ ಇವತ್ತು ಈ ಸಭೆಗೆ ಅವಮಾನ ಮಾಡುತ್ತಾರೆ ಎಂದು ನನಗನಿಸುತ್ತದೆ. ಈ ಮನೋಭಾವವನ್ನು ಮಾನ್ಯ ಮುಖ್ಯಮಂತ್ರಿಗಳು ಬಿಡದೇ ಹೋದರೆ ಅವರಿಗೂ ಕ್ಷೇಮವಲ್ಲ, ದೇಶಕ್ಕೂ ಕ್ಷೇಮವಲ್ಲ, ಈ ಸಭೆಗೂ ಕ್ಷೇಮವಲ್ಲ.

BUDGET ESTIMATES FOR 1966-67—DEMANDS FOR GRANTS

Demand No. 1-4. Taxes on Income other than Corporation Tax, etc.

SRI RAMAKRISHNA HEGDE (Minister for Finance).—Mr. Speaker, Sir, on the recommendation of the Governor of Mysore, I beg to move :—

DEMAND No. 1

"That a sum not exceeding Rs. 5,82,000 be granted to the Government to defray the charges which will come in course of payment during the financial year for the period ending 31st day of March 1967, in respect of 'Taxes on Income other than Corporation Tax.'

DEMAND No. 3

"That a sum not exceeding Rs. 24,99,000 be granted to the Government to defray the charges which will come in course of payment during the financial year for the period ending 31st day of March 1967, in respect of 'State Excise Duties'."

DEMAND No. 5

"That a sum not exceeding Rs. 54,79,000 be granted to the Government to defray the charges which will come in course of payment during the financial year for the period ending 31st day of March 1967, in respect of 'Sales Tax'."

DEMAND No. 34

"That a sum not exceeding Rs. 2,89,54,000 be granted to the Government to defray the charges which will come in course of payment during the financial year for the period ending 31st day of March 1967 in respect of 'Pensions and Other Retirement Benefits'.

DEMAND No. 35

" That a sum not exceeding Rs. 1,61,000 be granted to the Government to defray the charges which will come in course of payment during the financial year for the period ending 31st day of March 1967, in respect of 'Territorial and Political Pensions'."

DEMAND No. 36

" That a sum not exceeding Rs. 33,000 be granted to the Government to defray the charges which will come in course of payment during the financial year for the period ending 31st day of March 1967 in respect of 'Privy Purses and Allowances of Indian Rulers'."

DEMAND No. 40

" That a sum not exceeding Rs. 20,69,000 be granted to the Government to defray the charges which will come in course of payment during the financial year for the period ending 31st day of March 1967 in respect of 'Commutation of Pensions'."

DEMAND No. 41

" That a sum not exceeding Rs. 1,12,02,000 be granted to the Government to defray the charges which will come in course of payment during the financial year for the period ending 31st day of March 1967 in respect of 'Other Miscellaneous Compensations and Assignments'."

DEMAND No. 52

" That a sum not exceeding Rs. 20,69,000 be granted to the Government to defray the charges which will come in course of payment during the financial year for the period ending 31st day of March 1967 in respect of 'Payments of Commuted Value of Pensions'."

DEMAND No. 54

" That a sum not exceeding Rs. 14,76,54,000 be granted to the Government to defray the charges which will come in course of payment during the financial year for the period ending 31st day of March 1967 in respect of 'Loans and Advances by State/Union Territory Governments'."

Mr. SPEAKER.—Motion moved :

" That a sum not exceeding Rs. 5,82,000 be granted to the Government to defray the charges which will come in course of

(MR. SPEAKER)

payment during the financial year for the period ending 31st day of March 1967, in respect of 'Taxes on Income other than Corporation Tax'."

With this Demand, Demand Nos. 3, 5, 34, 35, 36, 40, 41, 52 and 54 are deemed to have been moved and all these demands are before the House as also the cut motions.

† ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಅಧ್ಯಕ್ಷರೇ, ಈ ಸಭೆಯ ಮುಂದೆ ಇರತಕ್ಕಂಥ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ಸಭೆಯ ಮುಂದೆ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ ರಾಜ್ಯದ ಎಕ್ಸೈಜ್ ಡ್ಯೂಟೀಸ್, ಇವುಗಳ ಸಂಬಂಧದಲ್ಲಿ ಮತ್ತು ಇದಕ್ಕೆ ಸಂಬಂಧಪಟ್ಟದ್ದೇ ಆದ ಪಾನನಿರೋಧದ ವಿಚಾರದಲ್ಲಿಯೂ ಹಲವು ಮಾತುಗಳನ್ನು ಈ ಸಭೆಯ ಮುಂದೆ ಆಡುವುದಕ್ಕೆ ಪ್ರಯತ್ನ ಪಡುತ್ತೇನೆ. ರಾಜ್ಯಾಂಗದಲ್ಲಿ ವಿದಿತವಾಗಿರತಕ್ಕಂಥ ಕೆಲವು ಸೂತ್ರಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಗಮನದಲ್ಲಿಟ್ಟುಕೊಂಡ ಗಾಂಧೀಜಿಯವರ ಇಷ್ಟಕ್ಕನುಸಾರವಾಗಿ ಇಡೀ ದೇಶದಲ್ಲಿ ಪೂರ್ಣವಾದಂಥ ಪಾನನಿರೋಧವನ್ನು ಜಾರಿಗೆ ತರಬೇಕೆಂಬುದನ್ನು ಕಾಂಗ್ರೆಸ್‌ನ ಒಂದು ತತ್ವವಾಗಿ ಪ್ರತಿಪಾದನೆ ಮಾಡಿಕೊಂಡು ಕಳೆದ 18 ವರ್ಷಗಳಲ್ಲಿ ಒಂದಲ್ಲ ಒಂದು ರೀತಿಯಾಗಿ ಸ್ಪಷ್ಟವಾದಂಥ ನಿಲುವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರ ತೆಗೆದುಕೊಳ್ಳದೇ ಇರತಕ್ಕ ಬಗ್ಗೆ ದೇಶದಲ್ಲಿ ಸಾಕಾದಷ್ಟು ಭಿನ್ನಾಭಿಪ್ರಾಯ ಮತ್ತು ಸಾಕಾದಷ್ಟು ಜಿಗುಪ್ಸೆ ಉಂಟಾಗಿದೆ ಎಂದು ನನಗೆ ಅನಿಸುತ್ತದೆ. ಪಾನನಿರೋಧದ ಬಗ್ಗೆ ನಮ್ಮಲ್ಲಿ ಸಾಕಾದಷ್ಟು ಭಾವನೆಗಳು ಈಗಾಗಲೇ ಬಂದಿವೆ. ದೇಶದಲ್ಲಿ ಪಾನನಿರೋಧವನ್ನು ರದ್ದು ಮಾಡಬೇಕೆಂದು ಎಷ್ಟು ಜನ ಪ್ರಾಮಾಣಿಕವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಅಷ್ಟೇ ಸಂಖ್ಯೆಯಲ್ಲಿ ಪಾನನಿರೋಧವನ್ನು ರದ್ದು ಮಾಡುವುದರಿಂದ ನಾವು ರಾಜ್ಯಾಂಗಕ್ಕೆ ದೊಡ್ಡ ಅಪಚಾರವನ್ನು ಮಾಡುತ್ತಾ ಇದ್ದೇವೆ ಎಂಬ ಭಾವನೆಗಳನ್ನು ಇಟ್ಟುಕೊಂಡಿರತಕ್ಕ ಜನರೂ ಇದ್ದಾರೆ.

[MR. DEPUTY SPEAKER in the Chair].

ಆದರೆ ಈ ಎರಡು ದ್ವಂದ್ವದಲ್ಲಿ ಸಿಕ್ಕಂಥ ರಾಜ್ಯ ಸರಕಾರವು ಒಂದು ಸ್ಪಷ್ಟವಾದ ನಿಲುವನು ತೆಗೆದುಕೊಳ್ಳುವ ಅವಶ್ಯಕತೆ ಈಗ ಹೆಚ್ಚಾಗಿ ಇದೆಯೇ ಇಲ್ಲವೇ ಎಂದು ಪ್ರಶ್ನೆ ಮಾಡಲು ನಾನು ಇಚ್ಛಿಸುತ್ತೇನೆ. ಇದರ ಬಗ್ಗೆ ಇರತಕ್ಕ ನಮ್ಮ ಅಭಿಪ್ರಾಯ ನಿರ್ವಿಕಾರವಾಗಿರಬೇಕು. ಈಗ ದೇಶದಲ್ಲಿ ಹೊಂದಿರತಕ್ಕಂಥ ಪರಿಸ್ಥಿತಿಯ ಹಿನ್ನೆಲೆ ಕಣ್ಣುಮುಂದೆ ಇಟ್ಟುಕೊಂಡು ಈ ಪಾನನಿರೋಧ ನೀತಿಯ ಬಗ್ಗೆ ಒಂದು ಸ್ಪಷ್ಟವಾದ ತೀರ್ಮಾನ ತೆಗೆದುಕೊಳ್ಳಬೇಕು ಎಂದು ನಾನು ಆಶಿಸುತ್ತೇನೆ. ಈ ಸಮಯದಲ್ಲಿ ವಿಧಿಯಿಲ್ಲದೆ ಒಂದು ವಿಚಾರ ನಾನು ಪ್ರಸ್ತಾಪ ಮಾಡಲೇಬೇಕಾಗಿದೆ. ರಾಜ್ಯ ಸರಕಾರದಲ್ಲಿ ಕಳೆದ ನಾಲ್ಕೂವರೆ ವರ್ಷ ಸಚಿವೆಯರಾಗಿದ್ದಂಥ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ರಾಜ್ಯ ಸರಕಾರ ಕೈಕೊಂಡ ಒಂದು ಕಾರ್ಯಕ್ರಮದ ಬಗ್ಗೆ ತಮ್ಮ ವಿರೋಧ ವ್ಯಕ್ತಪಡಿಸುವುದಕ್ಕೆ ಎರಡು ದಶಕಗಳಿಂದ ಯಾವ ಅಭಿಪ್ರಾಯವನ್ನು ಈ ಪ್ರಶ್ನೆಯ ಬಗ್ಗೆ ತಾವು ಇಟ್ಟುಕೊಂಡಿದ್ದರೋ ಆ ತತ್ವಗಳಿಗೆ ಕಟ್ಟುಬಿದ್ದು ತಮ್ಮ ಸಚಿವ ಸ್ಥಾನದಿಂದ ವಿರಮಿಸಿರುವುದನ್ನು ನಾವು ವೀಕ್ಷಿಸಿದ್ದೇವೆ. ನಾವು ಈ ಸಮಯದಲ್ಲಿ ಶ್ರೀಮತಿ ಯಶೋಧರಮ್ಮನವರು ತಮ್ಮ ತತ್ವಕ್ಕೆ ನಿಷ್ಠೆ ತೋರಿಸಿ ಅಧಿಕಾರ ವ್ಯಾಮೋಹದ ಸರಪಣಿಯಿಂದ ದೂರ ಹೋದಂಥ ಅವರನ್ನು ನಾವು ಮುಕ್ತ ಮನಸ್ಸಿನಿಂದ ಸ್ವಾಗತಿಸುತ್ತೇವೆ. ಹಾಗೂ ನಾವು ಅವರನ್ನು ಮನಸಾರೆ ಅಭಿನಂದಿಸುತ್ತೇವೆ. ತತ್ವ ಎಲ್ಲಿಯಾದರೂ ಹೋಗಲಿ, ಎಂದು ತತ್ವ ನಿಷ್ಠೆಯನ್ನು ಗಾಳಿಗೆ ತೂರಿಬಿಟ್ಟು ಅಧಿಕಾರಪಟ್ಟ ಮಾತ್ರ ಉಳಿಯಲಿ ಎನ್ನತಕ್ಕಂಥ ಜನ ಜಾಸ್ತಿ ಇರುವಾಗ ಅಂಥ ಸಾಹಸಕ್ಕೆ ಅವರು ಕೈ ಹಾಕಲಿಲ್ಲ. ತಮ್ಮ ತತ್ವಕ್ಕೆ ಕೊಂಚ ಚ್ಯುತಿ ಬಂದರೆ ಸಾಕು ಇಂಥ ಗುಂಪಿನ ಜೊತೆಯಲ್ಲಿ ಯಾವುದೇ ರೀತಿ ವ್ಯವಹಾರ ಮಾಡಲು ಸಾಧ್ಯವಾಗಲಾರದು ಎಂದು ತಿಳಿದುಕೊಂಡು ಅವರು ಮಂತ್ರಿಮಂಡಲದಿಂದ ಹೊರಗೆ ಬಂದಿದ್ದಾರೆ. ಗಾಂಧೀಜಿಯವರ ತತ್ವವನ್ನು ತಾನೇ ಹಾಕಿಕೊಂಡು ಬಂದಿದ್ದರೂ ಕೂಡ ಆ ತತ್ವಕ್ಕೆ ಇಂದು ತಿಲಾಂಜಲಿ ಒಂದೇ ಸಮನೇ ಕೊಡುತ್ತಾ ಬಂದ ಪಕ್ಷದ ಜೊತೆಗೆ ಅವರು ಯಾವ ಸಂಬಂಧವನ್ನೂ ಇಟ್ಟುಕೊಳ್ಳಬಾರದು ಎಂದು ಅವರಿಗೆ ನಾನು ಸವಿನಯವಾಗಿ ಸೂಚನೆ ಮಾಡಬಯಸುತ್ತೇನೆ. ಇಷ್ಟನ್ನು ಶ್ರೀಮತಿ ಯಶೋಧರಮ್ಮ ದಾಸಪ್ಪನವರ ರಾಜೀನಾಮೆ ಪ್ರಶ್ನೆಯ

ಬಗ್ಗೆ ನನ್ನ ಅಭಿಪ್ರಾಯ ವ್ಯಕ್ತಪಡಿಸಿದ ನಂತರ ಈಗ ನಮ್ಮ ರಾಜ್ಯದ ವಾಸ್ತವಿಕ ಪರಿಸ್ಥಿತಿಯ ಕಡೆಗೆ ಈ ಮಾನ್ಯ ಸಭೆಯ ಸದಸ್ಯರ ಗಮನವನ್ನು ಸೆಳೆಯ ಬಯಸುತ್ತೇನೆ. ಪ್ರಾಮಾಣಿಕವಾಗಿ ಇಂದು ನಾವು ವಾಸ್ತವಿಕತೆಯ ಕಡೆಗೆ ತಿರುಗಿನೋಡಬೇಕಾದ ದಿವಸ ಇದು ಎಂದು ನಾನು ಭಾವನೆ ಮಾಡುತ್ತೇನೆ. ಮುಖ್ಯ ಮಂತ್ರಿಗಳನ್ನು ಹಿಡಿದು ಎಲ್ಲ ಮಾನ್ಯ ಸದಸ್ಯರವರೆಗೆ ಎಲ್ಲರೂ ಈ ದೇಶದಲ್ಲಿ ಇಂದು ಕಳ್ಳಭಟ್ಟಿ ಹಾವಳಿ ವಿಪರೀತವಾಗಿದೆ ಎಂಬುದನ್ನು ಸರ್ವೇಸಾಮಾನ್ಯವಾಗಿ ಒಪ್ಪುತ್ತಾರೆ. ಶ್ರೀಮತಿ ಯಶೋಧರಮ್ಮ ದಾಸಪ್ಪನವರೂ ಒಪ್ಪುತ್ತಾರೆ. ಏತಕ್ಕೆ ವಾಸ್ತವಿಕತೆಗೆ ಕಣ್ಣು ಮುಚ್ಚಿ ಮುಚ್ಚಿಕೊಂಡು ಕುಳಿತಿರುತ್ತಾರೆ ? ಇದು ಬುದ್ಧಿವಂತಿಕೆಯ ಲಕ್ಷಣವಲ್ಲ. ದೇಶಾಭಿಮಾನದ ಲಕ್ಷಣ ವಂತೂ ಅಲ್ಲ. ಈ ಸಂದರ್ಭದಲ್ಲಿ ಒಂದು ವಾದವನ್ನು ನಮ್ಮ ಮುಂದೆ ಅವರು ಇಡುತ್ತಾರೆ. ಆ ವಾದ ಏನು ಅಂದರೆ, ದೇಶದಲ್ಲಿ ಖೂನಿ ನಡೆಯುತ್ತ ಕೋಡ್ ಕಳ್ಳತನ ದರೋಡೆ ನಡೆಯುತ್ತವೆ, ಅಂದ ಮಾತ್ರಕ್ಕೆ ಕ್ರಿಮಿನಲ್ ಪ್ರೊಸಿಜರ್ ಕೋಡ್ ರದ್ದುಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬ ವಾದ ನಮ್ಮ ಮುಂದೆ ಇಡುತ್ತಾರೆ. ನಾನು ಒಂದು ಪ್ರಶ್ನೆ ಮಾಡುತ್ತೇನೆ. ಈ ತತ್ವ ನಿಷ್ಠೆಯ ಬಗ್ಗೆ ನಮಗೆ ಎಳ್ಳಷ್ಟೂ ಸಂಶಯವಿಲ್ಲ. ನಮಗೆ ಅದರ ಬಗ್ಗೆ ಅಪಾರವಾದ ಗೌರವ ಇದೆ. ಆದರೆ ವಾಸ್ತವಿಕತೆಗೆ ನಾವು ಬಹುದೂರ ನಿಂತು ನಮ್ಮದೇ ಆದಂಥ ಒಂದು ಭ್ರಮೆಯ ಪ್ರಪಂಚದಲ್ಲಿ ನಾವು ಯೋಚನೆ ಮಾಡುವ ಗೋಜಿಗೆ ಹೋದರೆ ಇವತ್ತಿನ ಪರಿಸ್ಥಿತಿಗೆ ಮದ್ದನ್ನು ಪಡೆಯುವುದಕ್ಕೆ ಸಾಧ್ಯವೇ ? ರಾಜ್ಯದ ಯಾವ ಕಡೆ ಹೋಗಲಿ, ಪೂರ್ಣವಾಗಿ ಪಾನನಿರೋಧ ಜಾರಿಗೆ ತಂದಿರತಕ್ಕಂಥ ಜಿಲ್ಲೆ ತಾಲ್ಲೂಕಿನ ಯಾವ ಭಾಗದಲ್ಲಿಯೇ ಹೋಗಿ ವಿಚಾರಣೆ ಮಾಡಿದರೆ ಪೋಲೀಸರು ಮತ್ತು ಕಳ್ಳಭಟ್ಟಿ ತಯಾರು ಮಾಡತಕ್ಕಂಥ ಕೆಲವರ ಗ್ಯಾಂಗ್ ಇವರ ನಡುವೆ ಸಂಬಂಧ ಇದೆ. Unholy alliance; unholy contract. But it is only an oral contract which goes on in the name of prohibition. ಇದನ್ನು ದಿನ ನಿತ್ಯ ವ್ಯವಹಾರದಲ್ಲಿ ಕಾಣುತ್ತಿದ್ದೇವೆ, ಕೇಳುತ್ತಿದ್ದೇವೆ, ಪೇಪರಿನಲ್ಲಿ ಓದುತ್ತಿದ್ದೇವೆ. ಈ ನೀತಿಯ ಬಗ್ಗೆ ರಾಜ್ಯಾಂಗದಲ್ಲಿ ಉಲ್ಲೇಖ ವಾಗಿದೆ ಎಂಬುದು ನಿಜ. ನಮ್ಮ ರಾಜ್ಯಾಂಗದಲ್ಲಿ ಇನ್ನೂ ಬೇಕಾದಷ್ಟು ವಿಚಾರಗಳ ಬಗ್ಗೆ ಉಲ್ಲೇಖ ವಾಗಿದೆ. ದೇಶದಲ್ಲಿ ಸಮತಾವಾದ ಜಾರಿಯಲ್ಲಿ ತರಬೇಕು ಎಂದಿದೆ. Equality of opportunities create ಮಾಡಬೇಕು ಎಂಬುದು ಕೂಡ ಅದರಲ್ಲಿ ಉಲ್ಲೇಖವಾಗಿದೆ. ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ನಿವಾರಣೆ ಮಾಡಬೇಕು ಎಂಬುದು ಸಹ ಇದೆ. ಇವುಗಳಿಗೆ ನೀವು ಮರ್ಯಾದೆ ಕೊಟ್ಟಿದ್ದೀರೇನು ? ಅವುಗಳನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗಿದೆಯೇ ಎಂದು ಸರ್ಕಾರ ವನ್ನು ಕೇಳುತ್ತೇನೆ. ಈ ಪ್ರಶ್ನೆ ಇರುವಾಗ ನನಗೆ ಅನಿಸುತ್ತದೆ ಈ ತತ್ವವನ್ನು ಸಾಧಿಸುವುದರಲ್ಲಿ ನೀವು ವಿಫಲರಾಗಿದ್ದೀರಿ. ದೇಶದಲ್ಲಿ ಪಾನನಿರೋಧ ಸಂಪೂರ್ಣವಾಗಿ ಜಾರಿಗೆ ತರುತ್ತೇವೆ ಮತ್ತು ದೇಶದಲ್ಲಿ ಕೆಳ ಮಟ್ಟದಲ್ಲಿರತಕ್ಕಂಥ ಜನರನ್ನು ಬಂಧ ವಿಮೋಚನೆ ಮಾಡುತ್ತೇವೆ ಎಂಬ ಹಿತ ದೃಷ್ಟಿಯ ಮನೋಭಾವನೆ ಇದೆ. ಆದರೆ ಅದು ನಿಜವಾಗಿಯೂ ಯಾವ ಗತಿಯಲ್ಲಿದೆ ಎಂಬುದನ್ನು ನಾವು ಇಂದು ಯೋಚನೆ ಮಾಡಬೇಕಾದ ಕಾಲ ಬಂದಿದೆ. ನಾನು ಕುಡಿಯುವವರನ್ನು ಪ್ರಚೋದಿ ಸುವವನಲ್ಲ. ನಿಮ್ಮಂತೆ ನಾನು ಬೆನ್ನು ತಟ್ಟಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಮದ್ಯ ಪಾನವು ಒಳ್ಳೆಯದಲ್ಲ ಅದು ಕೆಟ್ಟದು ಎಂದು ನಾನು ಹೇಳತಕ್ಕವನು. ಆದರೆ ಒಂದು ವಾದ ಈ ಸಭೆಯ ಮುಂದೆ ಇಡುತ್ತೇನೆ. ಕುಡಿತ ನನ್ನ ದೇಶದಲ್ಲಿ ಯುಗಯುಗಾಂತರದಿಂದ ಬಂದಿದೆ. ರಾಮಾಯಣದಲ್ಲಿ ಕುಡಿತ ಇದೆ, ಮಹಾಭಾರತ ಪುರಾಣದಲ್ಲಿ ಕುಡಿತ ಇದೆ. ಪೂರ್ವಿಕರು ಕೂಡ ಸಾಕಷ್ಟು ಮಾದಕ ಪದಾರ್ಥಗಳನ್ನು ಸೇವನೆ ಮಾಡುತ್ತಿದ್ದರು ಎಂಬುದು ಪುರಾಣದಲ್ಲಿ ಇದೆ. ದೇವತೆಗಳು ಕೂಡ ಉಪಯೋಗಿಸುತ್ತಿದ್ದರು. ಹಾಗಾದರೆ ನಮ್ಮವರು ಏತಕ್ಕೆ ಇವನ್ನು ಉಪಯೋಗ ಮಾಡಬಾರದು ಎಂಬ ಪ್ರಶ್ನೆಗೆ ಉತ್ತರ ಕೊಡುವ ಗೋಜಿಗೆ ಹೋಗದೆ ಇಂದು ಸರಕಾರದ ನೀತಿ ಯಿಂದ ಜನರ ಮೇಲೆ ದೇಶದ ಮೇಲೆ ಆಗಿರತಕ್ಕಂಥ ಪರಿಣಾಮ ಏನಿದೆ. ಸಮಾಜದಲ್ಲಿ ಉಂಟಾಗಿರ ತಕ್ಕಂಥ ಪರಿಣಾಮ ಯಾವ ರೀತಿ ಇದೆ ಎಂಬುದನ್ನು ವಿಚಾರ ಮಾಡೋಣ. ಒಂದು ಪ್ರಶ್ನೆಯನ್ನು ನಾನು ನಮ್ರತೆಯಿಂದ ಕೇಳುತ್ತೇನೆ. ದೇಶದಲ್ಲಿ ಪಾನ ನಿರೋಧ ನೀತಿ ರೂಢಿಸಿಕೊಂಡಮೇಲೆ ಸಮಾಜದಲ್ಲಿ ನೈತಿಕ ಅಧಃಪತನ ಆಗಿರುವುದನ್ನು ನಾವು ನೋಡಿಲ್ಲವೇ ? ನಮ್ಮ ಸಮಾಜದಲ್ಲಿ ನಿತ್ಯ ವ್ಯವಹಾರಗಳಲ್ಲಿ ನೈತಿಕ ಅಧಃಪತನವನ್ನು ನೋಡುತ್ತೇವೆ. ಕೆಲವು ರಾಷ್ಟ್ರಗಳು ಸಂಪೂರ್ಣವಾಗಿ ಪಾನ ನಿರೋಧ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿದರೂಕೂಡ ಈ ಪ್ರಯತ್ನದಲ್ಲಿ ಅವರು ಸಫಲರಾಗಿಲ್ಲ. ಅಮೇರಿಕಾ ದೇಶದಲ್ಲಿ ಅವರು ಸಫಲರಾಗಿಲ್ಲ ಎಂಬ ಉದಾಹರಣೆ ಕೊಡಬಲ್ಲೆ. 1964ನೇ ಇಸವಿಯಲ್ಲಿ ಟೇಕಚಂದ ಕಮಿಟಿಯವರು ಪ್ಲಾನಿಂಗ್ ಕಮಿಷನ್ ಅವರಿಗೆ ಒಂದು ವರದಿ ಬರೆದು ಕೊಟ್ಟರು. ಟೇಕಚಂದ ಕಮಿಟಿಯವರು ದೇಶಾದ್ಯಂತ ಪ್ರವಾಸ ಮಾಡಿ ಸಾಕ್ಷಿಗಳನ್ನು ಸಂಗ್ರಹಿಸಿಕೊಂಡು ಪಾನನಿರೋಧ ಬಹು ಜನರಿಗೆ ಬೇಕಾಗಿದೆಯೇ ಬೇಡವಾಗಿದೆಯೇ, ಎಷ್ಟರ ಮಟ್ಟಿಗೆ ದೇಶದಲ್ಲಿ ಕಳ್ಳಭಟ್ಟಿ ತಯಾರಾಗುತ್ತಿದೆ, ಅದನ್ನು ತಡೆಗಟ್ಟಬೇಕಾದರೆ ಯಾವ ಕ್ರಮ ತೆಗೆದು

(ಶ್ರೀ ಎಸ್. ಎಂ. ಕೃಷ್ಣ)

ಕೊಳ್ಳಬೇಕು ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯುವುದಕ್ಕಾಗಿ ಮತ್ತು ಈ ಸಮಸ್ಯೆಗೆ ಯಾವದೇ ಒಂದು ಪರಿಹಾರ ಸೂಚನೆ ಮಾಡುವುದಕ್ಕಾಗಿ ಟೇಕಚಂದ ಕಮಿಟಿ ನೇಮಕ ಮಾಡಿದರು. ಟೇಕಚಂದ ಕಮಿಟಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಈ ವರದಿ ಕೊಟ್ಟು ಎರಡು ವರ್ಷ ಆದ ಮೇಲೆ ಕೂಡ ಕೇಂದ್ರ ಸರಕಾರವಾಗಲಿ, ಪ್ಲಾನಿಂಗ್ ಕಮಿಷನ್ನಿನವರಾಗಲಿ, ರಾಜ್ಯ ಸರಕಾರವಾಗಲಿ ಈ ವರದಿಯ ಮೇಲೆ ಒಂದು ದೃಢ ನಿರ್ಧಾರ ಪಾನ ನಿರೋಧ ಪ್ರಶ್ನೆಯ ಬಗ್ಗೆ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣ ಏನು ಎಂಬುದನ್ನು ವಿಚಾರ ಮಾಡಬೇಕಾಗಿದೆ. ಸರಕಾರಕ್ಕೆ ಈ ವಿಚಾರದಲ್ಲಿ ಸಾಕಷ್ಟು ಕಳಕಳಿ ಇಲ್ಲವೇ ? ಸರಕಾರ ತತ್ವಕ್ಕೆ ತಿಲಾಂಜಲಿ ಕೊಟ್ಟರೇ ? ಇದರಿಂದ ಒದಗಿಬರ ಬರಬಹುದಾದ ರಾಜಕೀಯ ಪರಿಣಾಮಗಳಿಗೆ ಹೆದರಿ ಯಾವ ಒಂದು ದೃಢ ನಿರ್ಧಾರ ತೆಗೆದು ಕೊಳ್ಳಲ್ಲು ಸಾಧ್ಯವಾಗಿಲ್ಲ. ಒಟ್ಟಿನಲ್ಲಿ ಸರಕಾರ ಸಮಗ್ರವಾಗಿ ಈ ಪಾನನಿರೋಧ ನೀತಿಯ ಬಗ್ಗೆ ಸಂಪೂರ್ಣವಾಗಿ ಪುನರ್‌ವಿಮರ್ಶೆ ಮಾಡತಕ್ಕ ಕಾಲ ಬಂದಿದೆ ಎಂದು ಇಷ್ಟುಮಾತ್ರ ನಾನು ಹೇಳಬಲ್ಲೆ. ಈ ಪಾನ ನಿರೋಧ ಪ್ರಶ್ನೆಯನ್ನು ರಾಜಕೀಯ ಪಕ್ಷದ ಜೊತೆಗೆ ಅಖಿಲ ಭಾರತ ಪ್ರಶ್ನೆಯನ್ನಾಗಿ ಮಾಡಿ ಕೆಲವರು ನೋಡುತ್ತಿದ್ದಾರೆ. ನನಗೆ ಅದು ಅರ್ಥವಾಗುವುದಿಲ್ಲ. ಪ್ರಜಾ ಪ್ರಭುತ್ವದ ಚೌಕಟ್ಟಿನಲ್ಲಿ ಕಾಂಗ್ರೆಸ್ ಪಕ್ಷವು ಈ ದಿವಸ ಆಳುವ ಪಕ್ಷವಾಗಿ ಇಂಡಿಯಾ ದೇಶದ ಎಲ್ಲ ಕಡೆ ಇದೆ. ಕಾಂಗ್ರೆಸ್ ಪಕ್ಷದಲ್ಲಿ ಸಾಕಷ್ಟು ಭಿನ್ನಾಭಿಪ್ರಾಯ ಇದೆ ಎಂಬುದನ್ನು ನಾನು ಮನಗಂಡಿದ್ದೇನೆ. ಕ್ಲಿಷ್ಟ ಸಮಸ್ಯೆಗಳ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯ ರಾಜಕೀಯ ಪಕ್ಷಗಳಲ್ಲಿ ಇರುವುದಕ್ಕೆ ಅವಕಾಶವಿದೆ, ಇರಲಿಕ್ಕೆ ಸಾಕು. ಆಗ್ಗೆ ಮಾತ್ರ ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವ ತಳಹದಿಯ ಮೇಲೆ ಕೆಲಸ ಮಾಡುತ್ತಿವೆ ಎಂಬುದು ಎಲ್ಲರಿಗೂ ದ್ಯೋತಕವಾಗುತ್ತದೆ. ನಮ್ಮ ಪಕ್ಷದಲ್ಲ ಕೂಡ ಒಂದು ವಿಷಯದ ಬಗ್ಗೆ ಒಮ್ಮತದ ಅಭಿಪ್ರಾಯ ಇದೆ. ಕಳೆದ 8—10 ವರ್ಷಗಳಿಂದ ನೀವು ಪಾನ ನಿರೋಧ ನೀತಿ ಈ ರಾಜ್ಯದಲ್ಲಿ ಅನುಸರಿಸಿಕೊಂಡು ಬಂದಿರುವುದು ಸಂಪೂರ್ಣವಾಗಿ ವಿಫಲವಾಗಿದೆ ಎಂಬ ವಿಚಾರದಲ್ಲಿ ನಮ್ಮ ಪಕ್ಷದಲ್ಲಿ ಒಮ್ಮತದ ಅಭಿಪ್ರಾಯವಿದೆ ಎಂದು ಧೈರ್ಯವಾಗಿ ಹೇಳಬಹುದು. ಅರ್ಥಂಬರ್ಥ ನೀತಿ ಅನುಸರಿಸುವುದಕ್ಕೆ ಪ್ರಯತ್ನಮಾಡಿರುವುದರಿಂದ ಜನರಲ್ಲಿ ನೈತಿಕ ಅಧಃಪತನವಾಗಿದೆ. ನಾನು ಅಮೇರಿಕಾ ದೇಶದ ಉದಾಹರಣೆ ಹೇಳಿದೆ. ಟೇಕಚಂದ ಕಮಿಟಿ ವರದಿಯಲ್ಲಿ ಒಂದು ಸ್ವಾರಸ್ಯವಾದ ಮಾತು ಹೇಳಿದ್ದಾರೆ. ಈ ಸಭೆಯ ಅಪ್ಪಣೆ ಪಡೆದು ಆ ವರದಿಯಲ್ಲಿಯ ಕೆಲವು ಮಾತುಗಳನ್ನು ಉದಹರಿಸಲು ಇಚ್ಛಿಸುತ್ತೇನೆ. "Illicit distillation has not only brought in its wake tax free alcoholic beverages, containing harmful substances undermining the health of the drinkers but has introduced gangsterism which is threatening the peace and quiet of the law abiding. Bootlegging and gangsterism go hand in hand in congested localities in large towns" ಇದು ಮಹಾರಾಷ್ಟ್ರ ಅಂದರೆ ಬೊಂಬಾಯಿ ರಾಜ್ಯದಲ್ಲಿ ಹೆಚ್ಚಿನ ಅನರ್ಥ ಮಾಡಿದೆ ಎಂದು ಟೇಕಚಂದ ಕಮಿಟಿ ರಿಪೋರ್ಟಿನಲ್ಲಿ ಅವರು ಹೇಳುತ್ತಾರೆ. ಟೇಕಚಂದ ಕಮಿಟಿ ವರದಿಯಲ್ಲಿ ಹೇಳಿರುವ ಹಾಗೆ 'ಗ್ಯಾಂಗಸ್ಟರ್ಸ್' ·ಬೂಟಲೆಗರ್ಸ್' ಎಂಬ ಒಂದು ವರ್ಗವನ್ನು ಈ ರಾಜ್ಯದಲ್ಲಿ ನಿರ್ಮಾಣ ಮಾಡುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಮಾತನ್ನು ನಾನಾದರೂ ಸಹ ಹೇಳಿ ಈ ಸಭೆಯಲ್ಲಿ ಎಚ್ಚರಿಕೆ ಕೊಡಲು ಇಷ್ಟಪಡುತ್ತೇನೆ. ಹಗಲು ಹೊತ್ತು ರಾತ್ರಿ ಹೊತ್ತು ಈ ವ್ಯವಹಾರ ನಡೆಯುತ್ತಿದೆ. ಒಂದುದಿನ ಮದ್ದೂರಿನಲ್ಲಿ ಬೆಳಿಗ್ಗೆ 10ಗಂಟೆಯಸಮಯದಲ್ಲಿ ಒಬ್ಬಮನುಷ್ಯನು ಸೈಕಲ್ ಮೇಲೆ 20—30 ಬಾಟಲ್ ತೆಗೆದುಕೊಂಡು ಬಂದು ಮಾರುತ್ತಿದ್ದುದನ್ನು ಪೋಲೀಸರು ಪತ್ತೆಹಚ್ಚಿದರು. ಮದ್ದೂರಿನಲ್ಲಿ ಯಾವುದು ನಡೆಯುತ್ತದೆಯೋ ಅದು ರಾಜ್ಯದ ಎಲ್ಲಾ ಕಡೆ ನಡೆಯುವುದಕ್ಕೆ ಸಾಧ್ಯವಿದೆ. ಪ್ರತಿಯೊಂದು ಪೋಲೀಸ್ ಸ್ಟೇಷನ್ನಿನಲ್ಲಿಯ ಕಾನ್‌ಸ್ಟೇಬಲ್ಸಗಳೊಂದಿಗೆ ಈ ಜನರು ಒಂದು ಕಳ್ಳಭಟ್ಟಿ ಸರಾಯಿ ಸಂಘ ನಿರ್ಮಾಣ ಮಾಡಿಕೊಂಡಾರು. ಅವರು ತಮ್ಮ ಹಕ್ಕುಬಾಧ್ಯತೆಗಾಗಿ ಸಂಘ ಸ್ಥಾಪಿಸುವಂಥವರಾದಾರು. ಕಳ್ಳಭಟ್ಟಿ ಸಾರಾಯಿ ಸಂಘ ಎಂದು ಪ್ರಚಾರ ಮಾಡಬಹುದು ಮತ್ತು ಚುನಾವಣೆಗಳನ್ನು ನಡೆಸಬಹುದು ಎಂದು ಎಚ್ಚರಿಕೆ ಕೊಡಲು ಈ ದಿವಸ ಇಚ್ಛಿಸುತ್ತೇನೆ. ಇದೊಂದು ಕ್ಲಿಷ್ಟ ಸಮಸ್ಯೆಯಾಗಿದೆ. ದೊಡ್ಡ ದೊಡ್ಡ ರಾಯರುಗಳನ್ನು ಕೂಡ ಅಂಥವರು ಹಿಡಿದಿಟ್ಟುಕೊಂಡಿದ್ದಾರೆ. ಅವರ ಸಹಾಯದಿಂದ ಜೈಲಿನಿಂದ ಬಿಡಿಸಿಕೊಳ್ಳುವುದಕ್ಕೆ, ಕಾನೂನು ಹಿಡಿತದಿಂದ ವಿಮುಕ್ತರಾಗುವುದಕ್ಕೆ ಪ್ರಯತ್ನ ಮಾಡುತ್ತಾರೆ. It is a lucrative practice. They have not maintained any accounts. They need not pay any tax. They sell at any rate they fix. They drink and spoil their health They are having sanghas which need not

be registered ಇಂಥ ಸಂಘಗಳು ಆಗುತ್ತವೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಮಂಗಳೂರು ಜಿಲ್ಲೆಗೆ ಹೋದಾಗ್ಗೆ ಅಲ್ಲಿ ಜನ ಹೇಳುತ್ತಿದ್ದರು. ಮಂಗಳೂರಿನಲ್ಲಿ ನಡೆಯುವಷ್ಟು ಕಳ್ಳಭಟ್ಟಿ ಉತ್ಪತ್ತಿ ನಮ್ಮ ರಾಜ್ಯದಲ್ಲಿ ಬೇರೆ ಯಾವ ಭಾಗದಲ್ಲಿಯೂ ನಡೆಯುವುದಿಲ್ಲ ಎಂದು ಕೆಲವು ಜನರು ಹೇಳುತ್ತಿದ್ದರು. ಶ್ರೀಮಾನ್ ಕೊಳ್ಕೆಬೈಲ್ ಅವರ ಅಭಿಪ್ರಾಯ ಏನು ಇದೆ ನನಗೆ ಗೊತ್ತಿಲ್ಲ. ಮಂಗಳೂರು ಜಿಲ್ಲೆಯ ಪಕ್ಕದ ಜಿಲ್ಲೆಯಲ್ಲಿರತಕ್ಕ ಶ್ರೀ ರಾಮಕೃಷ್ಣ ಹೆಗ್ಗಡೆಯವರ ಅಭಿಪ್ರಾಯ ಏನು ಇದೆ ನನಗೆ ಗೊತ್ತಿಲ್ಲ. ಆದರೆ ಶ್ರೀ ಕೊಳ್ಕೆಬೈಲ್ ಅವರ ಅಭಿಪ್ರಾಯವು ಸರ್ವಮಾನ್ಯತೆ ಪಡೆದದ್ದು ನನಗೆ ಗೊತ್ತಿದೆ. ನಾನು ಅಮೇರಿಕಾ ದೇಶದ ದೃಷ್ಟಾಂತ ಹೇಳುತ್ತಿದ್ದೆನು.

10-00 A.M.

ಒಂದೆರಡು ಮಾತುಗಳನ್ನು ಕಳ್ಳಭಟ್ಟಿ ಮಾರತಕ್ಕಂಥವನು ಏನು ಅಭಿಪ್ರಾಯಪಡುತ್ತಾನೆ ಎನ್ನುವುದನ್ನು ಈ ಉದಾಹರಣೆಯ ಮೂಲಕ ಅವನ ಭಾಷೆಯಲ್ಲಿ ಹೇಳಬೇಕೆಂದು ಅಧ್ಯಕ್ಷರ ಅಪ್ಪಣೆ ಕೇಳುತ್ತೇನೆ. ಅಲೆಕೆಪೋನ್ ಎನ್ನುವನು ದೊಡ್ಡ ಕಳ್ಳಭಟ್ಟಿ ತಯಾರು ಮಾಡತಕ್ಕಂಥ ಒಂದು ಗ್ಯಾಂಗಿನ ಲೀಡರ್. ಆತನನ್ನು ಹಿಡಿಯಬೇಕೆಂದು ಅಮೇರಿಕಾ ಸರ್ಕಾರ ಬೇಕಾದಷ್ಟು ಪ್ರಯತ್ನ ಪಟ್ಟು ಕೊನೆಗೆ ಅದು ಏನೋ ಒಂದು ರೀತಿಯಲ್ಲಿ ನಡೆಯಿತು. ಆತ ಏತಕ್ಕೋಸ್ಕರ ಮಾಡುತ್ತಿದ್ದ ಎನ್ನುವುದನ್ನು ಈ ರೀತಿ ವಿವರಣೆ ಕೊಡುತ್ತಾನೆ :

> "I make my money by supplying a public demand. If I break the law, my customers who number hundreds of the best people in Chicago are as guilty as I am. The only difference between us is that I sell and they buy. Everybody calls me a racketeer. I call myself a businessman. When I sell liquor, it is boot legging. When my patrons serve it on a silver tray at Lake Shore Drive, it is hospitality."

ಅಲೆಕೆಪೋನ್ ಅಮೇರಿಕಾದ ಬಗ್ಗೆ ಏನು ಮಾತನ್ನು ಹೇಳಿದನೋ ಅದು ನಮ್ಮ ರಾಜ್ಯಕ್ಕೂ ಅನ್ವಯಿಸುತ್ತದೆ. ಮದ್ದೂರಿನಲ್ಲಿ ಒಬ್ಬ ಕಳ್ಳಭಟ್ಟಿ ಮಾಡಿ ಮಾರಿದರೆ ಆತನನ್ನು ಪೋಲೀಸಿನವರು ಹಿಡಿದು ಮಂಡ್ಯದ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕೇಸ್ ಹಾಕಿ ಅವನಿಗೆ ಹತ್ತು ರೂಪಾಯಿ ದಂಡ ಹಾಕುತ್ತಾರೆ. ಆದರೆ ಅದರ ಹಿಂದಿನ ರಾತ್ರಿ ಆತನು ಒಂದು ಸಾವಿರ ರೂಪಾಯಿ ಸಂಪಾದನೆ ಮಾಡಿರುತ್ತಾನೆ. ಬೆಂಗಳೂರು ನಗರದಲ್ಲಿ ಅಲೆಕ್‌ಪೋನ್ ಹೇಳಿದಂತೆ ಲೆಕೆಷೋರ್ ಡ್ರೈವ್‌ನಲ್ಲಿ ಏನು ಬೇಕಾದರೂ ಮಾಡಬಹುದು. ಬೆಂಗಳೂರಿನಲ್ಲಿ ಯಾರು ಎಷ್ಟು ಬೇಕಾದರೂ ಕುಡಿದು ಓಡಾಡಬಹುದು. ಕುಡಿದು ಉನಮತ್ತರಾಗಿ ಇರಬಹುದು. ಇದು ಎಂಥಹ ಅಪಹಾಸ್ಯ ! ಇದು ಎಂತಹ ಅಪಹಾಸ್ಯವಾದ ನೀತಿಯಾಗಿದೆ! ನಿಮ್ಮಲ್ಲಿ ಸಾಕಷ್ಟು ನಿಷ್ಠೆಯ ಅಭಾವವಿದೆ. ಪಾನನಿರೋಧವನ್ನು ಎಲ್ಲಾ ಪೂರ್ತಿಯಾಗಿ ನಾವು ಒಪ್ಪಿದ್ದೇವೆ. ಇದರಿಂದ ಏನೇ ಕಷ್ಟ ಬರಲಿ, ಏನೇ ನಷ್ಟವಾಗಲಿ, ನಮ್ಮ ಆರ್ಥಿಕ ಪರಿಸ್ಥಿತಿ ಕುಸಿದು ಬಿದ್ದು ಹೋದರೂ ಸರಿಯೆ, ನಿಷ್ಠೆಗೆ ಅಂಟಿಕೊಂಡಿರುವ ಜನ ಅನ್ನತಕ್ಕಂಥ ಶ್ರದ್ಧೆ ಇದ್ದರೆ ಇದನ್ನು ಸಂಪೂರ್ಣವಾಗಿ ರಾಜ್ಯದಲ್ಲಿ ಈ ಪಾನನಿರೋಧವನ್ನು ರೂಡಿಸುವುದಕ್ಕೆ ನಾಳೆಯೇ ಒಂದು ಮಸೂದೆಯನ್ನು ಈ ಸಭೆಯ ಮುಂದೆ ತೆಗೆದುಕೊಂಡು ಬನ್ನಿ. ನಿಮಲ್ಲಿ ಸಾಕಾದಷ್ಟು ಕಳಕಳಿಯ ತತ್ವ ಇಲ್ಲದೇ ಹೋದರೆ ನಾಳೆಯೇ ಪಾನನಿರೋಧವನ್ನು ನಮ್ಮ ರಾಜ್ಯದಲ್ಲಿ ಸಂಪೂರ್ಣವಾಗಿ ರದ್ದುಮಾಡಬೇಕೆಂದು ಒತ್ತಾಯಪೂರ್ವಕವಾಗಿ ಸರ್ಕಾರದಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಇದು ಬಹಳ ಕಷ್ಟವಾದ ಕೆಲಸ. ಏಕೆಂದರೆ, ನಿಮಗೆ ಕಾಂಗ್ರೆಸ್ ಹೈಕಮಾಂಡ್ ಇದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಇದೆ. ಕೇಂದ್ರ ಸಂಸತ್ತಿನಲ್ಲಿ 119 ಜನ ಸದಸ್ಯರು ಸಹಿ ಹಾಕಿ ಕೊಟ್ಟಿದ್ದಾರೆ, ಈ ಎಲ್ಲಾ ಕಷ್ಟಗಳನ್ನು ನಾವು ಬಲ್ಲೆವು. ಆದರೆ ಕಷ್ಟಗಳೆಲ್ಲವನ್ನು ಎದುರಿಸಿ ಬಹಳ ದಿಟ್ಟವಾದ ಹೆಜ್ಜೆಯನ್ನು ಇಡುವ ಧೈರ್ಯ ನಿಮಲ್ಲಿ ಎಲ್ಲಿಯವರೆಗೆ ಇಲ್ಲವೊ, ಅಂಥಹ ಜನ ಈ ರಾಜ್ಯಕ್ಕೆ ಸ್ಪಷ್ಟವಾದ ನಾಯಕತ್ವವನ್ನು ಒದಗಿಸಬಲ್ಲದೇ ಎಂಬುದು ಈಗ ಇರತಕ್ಕಂಥ ಪ್ರಶ್ನೆ. ಈ ಅನುಮಾನವಲ್ಲಿ ನೀವು ಮೊನ್ನೆತಾನೆ ಸ್ವಲ್ಪ ಸಡಿಲ ಮಾಡುತ್ತೇವೆಂದು ಹೇಳಿದಿರಿ, ಯಾರ ಒತ್ತಾಯಕ್ಕೆ ಮಣಿದು ಹೇಳುತ್ತೀರಿ ? ಇದರಿಂದ ಹೆಚ್ಚು ಹಣ ನಮ್ಮ ರಾಜ್ಯದ ಬೊಕ್ಕಸಕ್ಕೆ ಬರುತ್ತದೆ ಎಂದು ಇರಬೇಕು. ಕೆಲವು ಜನ ಮಾನ್ಯಸದಸ್ಯರು ಈ ಸಭೆಯ ಮುಂದೆ ಸ್ಪಷ್ಟಪಡಿಸಿದ್ದಾರೆ. ಈ ಪಾನನಿರೋಧವನ್ನು ರದ್ದುಮಾಡುವುದರಿಂದ ನಮ್ಮ ರಾಜ್ಯಕ್ಕೆ ಕನಿಷಪಕ್ಷ 15 ಕೋಟಿ ರೂಪಾಯಿಗಳ ವರಮಾನ ಬರು

(ಶ್ರೀ ಎಸ್. ಎಂ. ಕೃಷ್ಣ)

ತ್ತದೆಂದು. ಇದನ್ನು ಹೇಳುವಾಗ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ ಒಂದು ಸಾರಿ ಈ ಡಿಫೆನ್ಸ್ ಕೌನ್ಸಿಲ್ ಮೀಟಿಂಗಿನಲ್ಲಿ ಒಬ್ಬ ಟಾಡಿ ಕಂಟ್ರಾಕ್ಟರ್ ಹೇಳಿದ, ರಾಷ್ಟ್ರೀಯ ರಕ್ಷಣಾ ನಿಧಿಗೆ ಹಣಬೇಕೆಂದು ಕೇಳಿದಾಗ, 15 ಕೋಟಿ ರೂಪಾಯಿಗಳನ್ನು ಬೇಕಾದರೂ ಕೊಡುತ್ತೇನೆ, ಕುಡಿತಕ್ಕೆ ಅವಕಾಶ ಕೊಡಿ ಎಂದು. ಈ ರೀತಿಯ ಸವಾಲುಗಳು ಕೂಡ ಬರುತ್ತಿವೆ.

I want Government to take a realistic view of things. There is no purpose gained by paying lip sympathy to the Directive Principles in the Constitution. The time has come when the Government have either to live with Prohibition or they just have to do away with this half-hearted measure of Prohibition.

ನಮ್ಮ senior citizens of the State, ವಯಸ್ಕರಾಗಿರತಕ್ಕಂಥ ಪೆನ್‌ಷನ್‌ದಾರರು, ಈ ಪೆನ್‌ಷನ್ ತೆಗೆದುಕೊಳ್ಳುವುದು ಒಂದು ಚಿತ್ರ ಹಿಂಸೆಯಾಗಿದೆ ಎಂದು ಹೇಳುತ್ತಾರೆ. ಅವರು 30-40 ವರ್ಷಗಳ ಕಾಲ ಸರ್ಕಾರದ ಮತ್ತು ಜನಗಳ ಸೇವೆಯನ್ನು ಮಾಡಿದ್ದಾರೆ. ಈ ನಿವೃತ್ತರಾಗಿರತಕ್ಕಂಥ ಅಧಿಕಾರಿಗಳ ವಿಷಯದ ಬಗ್ಗೆ ಅನುಕಂಪ, ದಯೆ ಇರಬೇಕಾದುದು ಅವಶ್ಯಕ. ಈಗ ಕೆಲಸದಲ್ಲಿರುವ ಸರ್ಕಾರಿ ಅಧಿಕಾರಿಗಳಿಗೆ ಪ್ರತಿವರ್ಷ ವರ್ಷಕ್ಕೆ ಎರಡು ಸಾರಿ ತುಟ್ಟಿಭತ್ಯವನ್ನು ಪುನರ್‌ವಿಮರ್ಶೆ ಮಾಡುತ್ತೀರಿ, ಆದರೆ ಈ ಪೆನ್‌ಷನ್‌ದಾರರಿಗೆ ತುಟ್ಟಿಭತ್ಯ ಕೊಡುವ ವಿಚಾರದಲ್ಲಿ ಪುನರ್‌ವಿಮರ್ಶೆ ಮಾಡುತ್ತಿಲ್ಲ. ನಾವು ಈಗ ಸರ್ಕಾರಿ ಅಧಿಕಾರಿಗಳಿಗೆ ಏನು ಪುನರ್‌ವಿಮರ್ಶೆ ಮಾಡಿ ತುಟ್ಟಿಭತ್ಯಗಳನ್ನು ಕೊಡುತ್ತೇವೋ ಅಂಥಾದ್ದೇ ಒಂದು ಅನುಕೂಲತೆಗಳನ್ನು ಕಡಿಮೆ ಪ್ರಮಾಣದಲ್ಲಾದರೂ ಈ ಪೆನ್‌ಷನ್‌ದಾರರಿಗೂ ಮಾಡಿಕೊಡಬೇಕೆಂದು ಅಭಿಪ್ರಾಯ ಪಡುತ್ತೇನೆ.

ಈ ರಾಜಧನಗಳ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ. ರಾಜಧನ ಕೊಡತಕ್ಕಂಥದ್ದು ಮತ್ತು ಸಮಾಜವಾದಿ ಸಮಾಜ ನಿರ್ಮಾಣ ಮಾಡತಕ್ಕಂಥದ್ದು ಇವೆರಡು ಒಂದಕ್ಕೊಂದು ಅರ್ಥವಿಲ್ಲದೆ ಇರತಕ್ಕಂಥ ಒಂದಕ್ಕೆ ಇನ್ನೊಂದು ಸಂಬಂಧವಿಲ್ಲದೆ ಇರತಕ್ಕಂಥ ಪ್ರಶ್ನೆ ಮತ್ತು ಪರಿಸ್ಥಿತಿಯಾಗಿದೆ. ಆದ್ದರಿಂದ ಈ ಕೂಡಲೇ ಈ ರಾಜಧನವನ್ನು ಸಂಪೂರ್ಣವಾಗಿ ರದ್ದು ಮಾಡತಕ್ಕಂಥ ನಿಲುವನ್ನು ರಾಜ್ಯಸರ್ಕಾರ ತೆಗೆದುಕೊಳ್ಳಬೇಕು ಮತ್ತು ಕೇಂದ್ರಸರ್ಕಾರದ ಮೇಲೆ ಪ್ರಬಲವಾದಂಥ ಒತ್ತಾಯವನ್ನು ತರಬೇಕು ರಾಜ್ಯಾಂಗ ಮತ್ತು ಇನ್ನಿತರ ಕಾನೂನುಗಳಿಗೆ ತಿದ್ದುಪಡಿಯಾಗಬೇಕು. ಆದ್ದರಿಂದ ರಾಜ್ಯಸರ್ಕಾರಗಳು ಈ ವಿಚಾರದ ಬಗ್ಗೆ ಸಾಕಾದಷ್ಟು ವಿಚಾರ ಮಾಡದೇ ಹೋದರೆ, ರಾಜ್ಯಸರ್ಕಾರಗಳು ಸಾಕಷ್ಟು ಒತ್ತಾಯವನ್ನು ಕೇಂದ್ರಸರ್ಕಾರದ ಮೇಲೆ ಹಾಕದೇ ಹೋದರೆ ಬಹುಶಃ ಈ ರಾಜಧನವನ್ನು ಅವರು ಇರುವವರೆಗೂ ಕೊಡಬೇಕಾದ ಪರಿಸ್ಥಿತಿ ಬರುತ್ತದೊ ಏನೋ. ಅದರಿಂದಾಗಿ ಈ ರಾಜಧನಗಳನ್ನು ರದ್ದು ಮಾಡತಕ್ಕಂಥ ವಿಚಾರವನ್ನು ಸರ್ಕಾರ ಸಾಕಷ್ಟು ಕಳಕಳಿಯಿಂದ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ಈ ಮುಂದೆ ಇರತಕ್ಕಂಥ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಬೇಡಿಕೆಗಳ ಸಂಖ್ಯೆಗಳಾದ 3, 1, 5, 34, 35, 36, 40, 41, 52, 54, ಅಂದರೆ ರಾಜ್ಯದ ಅಬಕಾರಿ ತೆರಿಗೆಗಳು, ಕಾರ್ಪೊರೇಷನ್ ತೆರಿಗೆ ಹೊರತಾಗಿ, ಆದಾಯದ ಮೇಲಿನ ತೆರಿಗೆಗಳು, ಮಾರಾಟ ತೆರಿಗೆ, ನಿವೃತ್ತಿ ವೇತನಗಳು ಮತ್ತು ಇತರ ನಿವೃತ್ತಿ ಸೌಲಭ್ಯಗಳು, ಪ್ರಾದೇಶಿಕ ಹಾಗೂ ರಾಜಕೀಯ ನಿವೃತ್ತಿ ವೇತನಗಳು, ಭಾರತದ ರಾಜರುಗಳಿಗೆ ಕೊಡುವ 'ಪ್ರಿವಿ ಪರ್ಸ್', ಸಂಭಾವನೆ ಮತ್ತು ಭತ್ತೆಗಳು, ನಿವೃತ್ತಿ ವೇತನಗಳ ಪರಿವರ್ತನೆ ಇತರ ವಿವಿಧ ಕೊಡುಗೆಗಳು ಮತ್ತು ಹಂಚಿಕೆಗಳು, ಪರಿವರ್ತಿಸಿದ ನಿವೃತ್ತಿ ವೇತನಗಳ ಮೌಲ್ಯವನ್ನು ಪಾವತಿ ಮಾಡುವುದು, ರಾಜ್ಯಸರ್ಕಾರ ಹಾಗೂ ಕೇಂದ್ರ ಸರ್ಕಾರದ ಆಡಳಿತಕ್ಕೊಳಪಟ್ಟ ಪ್ರದೇಶಗಳ ಸರ್ಕಾರದವರಿಂದ ಸಾಲಗಳು ಮತ್ತು ಮುಂಗಡಗಳು, ಈ ವಿಷಯಗಳಿಗಾಗಿ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಹೇಗೆ ಅನುಮೋದಿಸಿ ಕೆಲವು ವಿಷಯಗಳನ್ನು ಮಾತನಾಡುತ್ತೇನೆ.

ನಮ್ಮ ಈ ಸಭೆಯ ಮುಂದೆ ಮತ್ತು ದೇಶದ ಜನಗಳ ಮುಂದೆ ಮುಖ್ಯವಾಗಿ ಒಂದು ವಿಷಯವನ್ನು ಬಹಳ ಮಟ್ಟಿಗೆ ಪ್ರಸ್ತಾಪ ಮಾಡುತ್ತಾ ಇದ್ದೇನೆ ಆ ವಿಷಯ ಪಾನನಿರೋಧ ವಿಷಯ ಪಾನನಿರೋಧ ಸಂಪೂರ್ಣವಾಗಿ ಒತ್ತಾಯವಾಗಿ ಜಾರಿಗೆ ತರಬೇಕು ಎಂದು ಹೇಳತಕ್ಕವರಲ್ಲಿ ನಾನೂ ಒಬ್ಬ. ಅನೇಕ ಕಡೆ ಪಾನನಿರೋಧವನ್ನು ಸಡಿಲಿಸಬೇಕು,

ಪಾನನಿರೋಧವನ್ನು ತೆಗೆದುಹಾಕಬೇಕು ಎನ್ನತಕ್ಕಂಥ ಮಾತುಗಳು, ಸಲಹೆಗಳು ಈ ಸಭೆಯ ಸದಸ್ಯರಿಂದಲೂ ಹೊರಗಡೆ ಇರತಕ್ಕ ಮುಖಂಡರುಗಳಿಂದಲೂ ಮತ್ತು ಸಾಮಾನ್ಯ ಮನುಷ್ಯರಿಂದಲೂ ಬರುತ್ತಾ ಇವೆ. ಪಾನನಿರೋಧವನ್ನು ತೆಗೆಯತಕ್ಕದ್ದರಿಂದ ಆಗತಕ್ಕ ತೊಂದರೆಗಳನ್ನು ಮತ್ತು ನೀತಿ ಬಾಹಿರತ್ಯವನ್ನು ನನಗೆ ತಿಳಿದಮಟ್ಟಿಗೆ ಅವರು ಅರಿತಂತೆ ಕಾಣಲಿಲ್ಲ. ಪಾನನಿರೋಧ ಇದ್ದ ಎಷ್ಟೋ ಕಡೆ ಕಳ್ಳಭಟ್ಟಿ ಸರಾಯಿ ತೆಗೆದು ಎಷ್ಟೋ ಕಡೆ ನೀತಿಗೆಟ್ಟ ರೀತಿಯಲ್ಲಿ ನಡೆದುಕೊಳ್ಳತಕ್ಕ ಉದಾಹರಣೆಗಳನ್ನು ಸದಸ್ಯರು ಮತ್ತು ಇತರರು ಕೊಡುತ್ತಾ ಇದ್ದಾರೆ. ಈಗ ಪಾನನಿರೋಧವನ್ನು ತೆಗೆದುಬಿಟ್ಟು ಪಾನವನ್ನು ಆಚರಣೆಗೆ ತಂದರೆ, ಎಂತಹ ನೀತಿ ಬಾಹಿರವಾದಂಥ ಕೃತ್ಯಗಳು ನಡೆಯುತ್ತವೆ, ಮತ್ತು ಎಷ್ಟರಮಟ್ಟಿಗೆ ನಡೆಯಬಹುದು ಎಂಬುದನ್ನು ಅವರು ಊಹೆ ಮಾಡಬೇಕು ಎಂದು ಅವರನ್ನು ಕೇಳಿಕೊಳ್ಳುತ್ತೇನೆ. ಪಾನದಿಂದ ನಡೆದ ದುಷ್ಕೃತ್ಯಗಳ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ಕುಡಿದು ಮತ್ತನಾಗಿರತಕ್ಕಂಥ ಮನುಷ್ಯನು ತನ್ನ ಚಿಕ್ಕ ಮಗಳ ಮೇಲೆ ಅಪರಾಧವನ್ನು ಮಾಡಿದಾಗ ಅವನನ್ನು ಕೋರ್ಟಿಗೆ ತೆಗೆದುಕೊಂಡು ಹೋದ ಕಾಲದಲ್ಲಿ ಅವನು ಕುಡಿದು ಮತ್ತನಾಗಿದ್ದೆ, ಹೆಂಡತಿ ಯಾರು, ಮಗಳು ಯಾರು ಎಂದು ಗೊತ್ತಿಲ್ಲದೆ ಪಾಪಕೃತ್ಯಗಳನ್ನು ಮಾಡಿದ, ತನ್ನ ಅಪರಾಧವನ್ನು ಕ್ಷಮಿಸಬೇಕು ಎಂದು ಹೇಳಿದ ಉದಾಹರಣೆ ಇದೆ. ಇನ್ನೊಂದು ಕಡೆ ಕುಡಿದು ಬಿಟ್ಟು ತನ್ನ ಅರಿವೇ ಇಲ್ಲದೇ ಜಗಳ ಮಾಡಿ ಅಣ್ಣ ತಮ್ಮಂದಿರನ್ನು ಒದ್ದು ಕೊಂದುಬಿಟ್ಟು, ತಪ್ಪಿಸಿಕೊಂಡು ಜ್ಞಾನ ಬಂದಾಗ ಬಹಳ ದುಃಖಿತನಾಗಿ ಕುಡಿತದ ಅಮಲಿನಿಂದ ತಮ್ಮನನ್ನು ಕೊಂದೆನಲ್ಲಾ ಎಂದು ಪಶ್ಚಾತ್ತಾಪ ಪಟ್ಟು ವ್ಯಸನ ಪಟ್ಟು ಗೋಳಾಡಿದಂಥ ವ್ಯಕ್ತಿಗಳು ಇದ್ದಾರೆ. ಕುಡಿತದ ಮತ್ತಿನಿಂದ ಮತ್ತು ಕುಡಿಯುವುದನ್ನು ಸಡಿಲ ಮಾಡುವುದರಿಂದ, ಪಾನನಿರೋಧ ತೆಗೆದುಹಾಕುವುದರಿಂದ ಏನಾಗುತ್ತದೆ ಎನ್ನುವುದನ್ನು ಆಲೋಚನೆ ಮಾಡಬೇಕು. ಕೇಂದ್ರವಾಗಲಿ ರಾಜ್ಯಸರ್ಕಾರವಾಗಲಿ ಕಟ್ಟಳೆಗಳನ್ನು ಸರಿಮಾಡಬೇಕಾಗಿದೆಯೇ ಹೊರತು ಕಳ್ಳಭಟ್ಟಿ ಸಾರಾಯಿ ಮಾಡುವುದು ಹೆಚ್ಚಾಗಿರುವುದರಿಂದ ಪಾನನಿರೋಧ ಜಾರಿಯಲ್ಲಿ ಇಡುವುದು ಸರಿಯಲ್ಲ ಎಂದು ಹೇಳುವುದು ನನಗೆ ಸರಿಯಾಗಿ ಕಾಣಿಸುವುದಿಲ್ಲ. ಕಳ್ಳಭಟ್ಟಿ ಹೆಚ್ಚಾಗಿದ್ದರೆ ಕಳ್ಳಭಟ್ಟಿ ತಪ್ಪಿಸುವುದಕ್ಕೆ ಕುಡಿಯುವುದನ್ನು ತಪ್ಪಿಸುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಈ ಸಭೆಯ ಒಬ್ಬ ಸದಸ್ಯರು ಒಂದು ಉದಾಹರಣೆ ಕೊಟ್ಟರು. ಆರೋಗ್ಯ ಇಲಾಖೆಯ ಕಛೇರಿಯಲ್ಲಿ ಒಬ್ಬ ಅಧಿಕಾರಿ ಕುಡಿದು ಕುಣಿಯುತ್ತಾ ಇದ್ದನು ಎಂದು. ಅಧಿಕಾರಿ ಆಗಿರತಕ್ಕವನು ವಿದ್ಯಾವಂತ ಮತ್ತು ವೈದ್ಯನಾಗಿರತಕ್ಕವನು, ಅವನೇ ಕುಡಿದು ಕುಣಿಯಬೇಕಾಗಿದ್ದರೆ, ಸಾಮಾನ್ಯ ಮನುಷ್ಯ ಕುಡಿದರೆ ಎಷ್ಟು ಆತ್ಮ ಗೌರವವನ್ನು ಉಳಿಸಿಕೊಳ್ಳಬಹುದು. ಎಂದು ತಾವು ಊಹೆ ಮಾಡಬೇಕಾಗಿದೆ. ಬಹಳ ಮಟ್ಟಿಗೆ ಪಾನನಿರೋಧ ನೀತಿ ಚರ್ಚೆಗೆ ಬಂದಾಗ, ಅದನ್ನು ಸಡಿಲಿಸಬೇಕು ಎನ್ನುವ ಪ್ರಶ್ನೆ ಬಂದಾಗ, ಹರಿಜನರ ವಿಷಯ ಉದಾಹರಣೆಯನ್ನು ಕೊಡುವುದು ಸಾಮಾನ್ಯವಾಗಿ ಕೇಳುತ್ತಾ ಇದ್ದೇವೆ ನಿಜ. ಹರಿಜನರಲ್ಲಿ ಕುಡಿಯತಕ್ಕವರು ಇದ್ದಾರೆ ಆದರೆ ಹರಿಜನರು ಅಲ್ಲದೇ ಇರತಕ್ಕವರೂ ಕುಡಿಯುತ್ತಾ ಇದ್ದಾರೆ. ಎಷ್ಟೋ ಮಂದಿ ಹರಿಜನರು ಅಲ್ಲದೇ ಇರುವವರು ಕುಡಿದು ಸಿಕ್ಕಿಬಿದ್ದು ಕೋರ್ಟಿನಲ್ಲಿ ದಂಡವನ್ನು ಕೊಟ್ಟು ಜೈಲಿಗೆ ಹೋಗತಕ್ಕಂಥ ನಿದರ್ಶನಗಳು ಇವೆ, ಹರಿಜನರು ಆಗಲಿ ಹರಿಜನರು ಅಲ್ಲದೇ ಹೋಗಲಿ ಕುಡಿಯುವವರು ತಮ್ಮ ಮಾನವನ್ನು ಕಳೆದುಕೊಂಡು ಜ್ಞಾನವನ್ನು ಕಳೆದುಕೊಂಡು ಕೆಟ್ಟು ಹೋಗತಕ್ಕ ಸ್ಥಿತಿ ನಾವೆಲ್ಲಾ ನೋಡಿದ್ದೇವೆ. ಪಾನ ನಿರೋಧ ಸಡಿಲಿಸೋಣ, ಜನರು ಕೆಟ್ಟರೂ ಚಿಂತೆ ಇಲ್ಲ, ಬೊಕ್ಕಸಕ್ಕೆ ಹಣ ಬರಬೇಕು ಎಂದು ಇದ್ದರೆ, ಪಾನನಿರೋಧ ತೆಗೆದುಹಾಕೋಣ, ಪಾನವನ್ನು ಪುನಃ ತರೋಣ. ಆದರೆ ಮೈಸೂರು ರಾಜ್ಯದ, ಭಾರತದ ಅಥವಾ ಪ್ರಪಂಚದ ಜನಗಳ ಗುರಿ ಏನು ? ಕೆಟ್ಟವನಾಗ, ಒಳ್ಳೆಯವನನ್ನಾಗಿ ಮಾಡಬೇಕು. ಕೆಟ್ಟವನನ್ನು ಒಳ್ಳೆಯ ಕಡೆಗೆ ಸಾಗಿಸಿಕೊಂಡು ಬರಬೇಕು ಎಂಬುದೇ ಆಗಿದೆ. ಅದಕ್ಕಾಗಿ ಎಷ್ಟೋ ಪಾಠಶಾಲೆಗಳನ್ನು ವೈದ್ಯಶಾಲೆ ಮುಂತಾದುವುಗಳನ್ನು ಮಾಡುತ್ತಿದ್ದೇವೆ. ಆದರಿಂದ ಆದಾಯ ಬಾರದೆ ಹೋದರೂ ಬಹಳ ಹಣವನ್ನು ಅದಕ್ಕಾಗಿ ಖರ್ಚು ಮಾಡುತ್ತಿದ್ದೇವೆ. ಏತಕ್ಕೆ ? ಜನಗಳು ಸತ್ಪ್ರಜೆಗಳಾಗಲಿ, ವಿದ್ಯಾವಂತರು ಆಗಲಿ, ನೀತಿವಂತರಾಗಲಿ, ಸೌಹಾರ್ದ ಬೆಳೆಯಲಿ, ದುರ್ಮಾರ್ಗದಿಂದ ನಡೆಯುವುದು ಹೋಗಲಿ ಒಳ್ಳೆಯ ಮಾರ್ಗದಲ್ಲಿ ನಡೆಯಲಿ ಎನ್ನುವುದೇ ನಮ್ಮೆಲ್ಲರ ಗುರಿ. 15 ಕೋಟಿ ರೂಪಾಯಿಗಳು ಬರುತ್ತವೆ 20 ಕೋಟಿ ರೂಪಾಯಿಗಳು ಬರುತ್ತವೆ ಎಂದು ಪಾನನಿರೋಧವನ್ನು ಸಡಿಲಿಸಿ ಪಾನವನ್ನು ಪುನಃ ತರುವುದಾದರೆ, ಎಷ್ಟರಮಟ್ಟಿಗೆ ನಾವು ನೀತಿವಂತರು ಆಗುತ್ತೇವೆ ಎಂದು ಪರೀಕ್ಷೆ ಮಾಡಬೇಕು ಎಂದು ಮಾನ್ಯ ಸಭೆಯವರನ್ನು ಕೇಳಿಕೊಳ್ಳುತ್ತೇನೆ. ಇದು ಬಹಳ ಮುಖ್ಯವಾದ ಸಮಸ್ಯೆಯಾಗಿದೆ. ಮಾನ್ಯ ಶ್ರೀ ಕೃಷ್ಣ ಅವರು ಹೇಳಿದ ಹಾಗೆ ಟೇಕ್‌ಚಂದ್ ರಿಪೋರ್ಟು ಮತ್ತು ಹಿಂದಿನ ಸರ್ಕಾರದವರು ಪಾನನಿರೋಧ ಸಂಬಂಧದಲ್ಲಿ ಬರೆದಿರತಕ್ಕ ರಿಪೋರ್ಟುಗಳು ಎಲ್ಲವೂ ಇವೆ. ಯಾವುದನ್ನು

(ಶ್ರೀ ಆರ್. ಮುನಿಸ್ವಾಮಯ್ಯ)

ನೋಡಿದರೂ ಅದರಲ್ಲಿ ಜನಗಳಿಗೆ ಆಗಿರತಕ್ಕ ಕಷ್ಟಗಳನ್ನು ಪಾನನಿರೋಧದಿಂದ ಬಂದಂಥ ದುಷ್ಕೃತ್ಯಗಳನ್ನು ತಪ್ಪಿಸಬೇಕಾದರೆ ಏನು ಮಾಡಬೇಕು ಎಂಬ ಸಲಹೆಗಳನ್ನು ಇಟ್ಟಿದ್ದಾರೆ. ಸಭೆಯವರಾಗಲಿ ಸರ್ಕಾರದವರು ಆಗಲಿ, ಜನಗಳು ಆಗಲಿ, ಪಾನ ನಿರೋಧ ಪುನಃ ಪರಿಶೀಲಿಸಬೇಕು, ಸಡಿಲ ಮಾಡಬೇಕು ಎಂದು ಏತಕ್ಕೆ ಹೇಳುತ್ತಾರೆಂದು ಪರಿಶೀಲಿಸಬೇಕು ಮತ್ತು ಪಾನನಿರೋಧ ಬಂದಮೇಲೆ ಬಂದಿರತಕ್ಕ ಕಳ್ಳಭಟ್ಟಿಯನ್ನು ತಡೆಯಬೇಕಾದರೆ ಏನು ಮಾಡಬೇಕು ಎನ್ನುವ ಸಲಹೆಗಳನ್ನು ಕೊಡಬೇಕು ಎಂದು ನಾನು ಬೇಡಿಕೊಳ್ಳುತ್ತೇನೆ. ಉದಾಹರಣೆಗೋಸ್ಕರ ನಮ್ಮ ದೇಶದ ಮಂತ್ರಿಗಳಾಗಿದ್ದಂಥ ಶ್ರೀಮತಿ ಯಶೋಧರ ದಾಸಪ್ಪನವರು ರಾಜೀನಾಮೆ ಕೊಟ್ಟು ಹೋಗಿದ್ದಾರೆ. ಅವರು ನಮಗೆಲ್ಲರಿಗೂ ಆದರ್ಶರಾಗಿದ್ದಾರೆ. ಅವರು ಭಿನ್ನಾಭಿಪ್ರಾಯದಿಂದ ಹೋದವರಲ್ಲ. ತನ್ನ ಕೀರ್ತಿ ಯನ್ನೂ ಪ್ರತಿಷ್ಠೆಯನ್ನೂ ಹೆಚ್ಚಿಸಕೊಳ್ಳಬೇಕೆಂದು ಹೋದವರು ಅಲ್ಲ. ಅವರು ನಾವೂ ನೀವೂ ನೋಡಿದ ಹಾಗೆ ಕುಡಿದವರ ಸಂಸಾರಗಳು ಎಂತಹ ದುಃಸ್ಥಿತಿಗೆ ಬಂದಿವೆ, ಕುಡಿದಿರತಕ್ಕ ಮನೆಗಳು ಯಾವ ತರಹ ಅವಸ್ಥೆಗೆ ಸಿಕ್ಕಿಹೋಗಿ ದೇಶದಲ್ಲಿ ಎಷ್ಟು ಅನ್ಯಾಯವಾಗಿದೆ, ಕುಡಿತದಿಂದ ಎಷ್ಟು ಅನ್ಯಾಯ ಆಗುತ್ತದೆಂದು ತಿಳಿದು ಅವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ಹೋಗಿದ್ದಾರೆ. ಅವರಿಂದ ನಾವು ಕಲಿಯತಕ್ಕ ಪಾಠ ಬಹಳ ಬೆಲೆಯುಳ್ಳದ್ದಾಗಿದೆ. ಅಂತಹ ಪಾಠವನ್ನು ಪಠಣ ಮಾಡಿ, ಗಟ್ಟಿಮಾಡಿ, ಅವರು ಹಾಕಿಕೊಟ್ಟಿರತಕ್ಕ ಮಾರ್ಗವನ್ನು ನಾವು ಅನುಸರಿಸಬೇಕು. ರಾಜ್ಯ ಸರ್ಕಾರಕ್ಕೆ ಮತ್ತು ಬೇರೆ ಯಾವುದಾದರೂ ಸರ್ಕಾರಗಳು ಸಡಿಲಿಸಬೇಕು ಎಂಬ ಅಭಿಪ್ರಾಯ ಇದ್ದರೆ ಆ ಸರ್ಕಾರಗಳಿಗೆ ಹಾಗೆ ಮಾಡಬೇಡಿರಿ ಎಂದು ನಾವು ಸಲಹೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಪಾನ ನಿರೋಧ ಸರಿಯಾಗಿ ನಡೆಯುತ್ತಾ ಇಲ್ಲ ಎಂದು ಸಲಹೆ ಬರುತ್ತಾ ಇದೆ. ಅದು ಸತ್ಯಕ್ಕೆ ದೂರವಾದುದು. ಮದ್ರಾಸಿನಲ್ಲಿ ಮತ್ತು ಗುಜರಾತಿನಲ್ಲಿ ಪಾನನಿರೋಧವು ಬಹಳ ಚೆನ್ನಾಗಿ ನಡೆಯುತ್ತಾ ಇದೆ. ನಾವೂ ಸಹ ಅವರಿಂದ ಪಾಠ ಕಲಿತು ನಮ್ಮ ದೇಶದಲ್ಲಿ ಅವರಂತೆ ನಡೆಯಬೇಕು ಎಂದು ನಾನು ಹೇಳುತ್ತೇನೆ.

ಇನ್ನು ನಿವೃತ್ತಿ ವೇತನ ವಿಷಯ ಮಾತ್ರ ಹೇಳುತ್ತೇನೆ. ಸರ್ಕಾರದಲ್ಲಿ 30-35 ವರ್ಷಗಳ ಕಾಲ ಸೇವೆ ಸಲ್ಲಿಸಿ, ನೌಕರರು ನಿವೃತ್ತಿಯಾದಮೇಲೆ ಅವರಿಗೆ ಸಕಾಲದಲ್ಲಿ ನಿವೃತ್ತಿ ವೇತನ ಸಿಗುತ್ತಾ ಇಲ್ಲ. ಇದಕ್ಕಾಗಿ ಅವರು ಒಂದೆರಡು ವರ್ಷಗಳ ಕಾಲ ಕಾಯಬೇಕಾಗುತ್ತದೆ. ಅದಕ್ಕೋಸ್ಕರ, ತಮ್ಮ ರಜಾ ಪ್ರಮೋಷನ್, ತಮ್ಮ ಸರ್ವಿಸ್ ವಿಷಯ ಬರೆದು ಸರ್ವಿಸ್ ರಿಜಿಸ್ಟರುಗಳಲ್ಲಿ ಪ್ರತಿ ವರ್ಷವೂ ಪರಿಶೀಲನೆ ಮಾಡಿದ ಹಾಗೆ, ಇದಕ್ಕೂ ಕೂಡ ಅದೇ ರೀತಿ ಒಂದು ಲೆಕ್ಕಾಚಾರವಿಟ್ಟು, ಒಂದು ಕಲಮನ್ನು ಸೇರಿಸಿಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ. ಇಷ್ಟು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

Sri P. F. D'MELLOW (Nominated).—Mr. Speaker Sir, I shall only take a very few minutes to touch just the question of pensions.

Sir, every year about this time of the Budget, hopes have been raised in many a home, where aged pensioner lives. I said, 'live'—in fact, he does not truly live—he merely exists on the little pittance that passes for pension in our country. Sir, it is surprising that in an advanced country like ours, and a state which has produced a budget that was presented this year, very little time is devoted to the needs of the class of servants who have passed under the name of pensioner. His needs are very real Sir—just as real as the serving employee of the Government who may correctly seems to occupy a very large place in the heart of the Government today. I would be the last to resent any increase given to other categories. I am pleading for a little consideration for the pensioner in the matter of D.A. The cost of living soars high everyday and while we can rightly think of the needs of the NGO and even the higher paid staff of the Government, no thought at all

appears to be given to the pensioner. And I feel Sir, that time has come when unless Government gives some thought to the needs of this category of citizen, it may be that he will resent it in the years to come and during the next elections.

Mr. Speaker, I have just one more word to talk on the question of old age pensions. I do agree and I am grateful to the Government for the concession that it gave to the aged. But I wonder if it is deliberate or accidental that they have made the procedure so very difficult that I am certain that a very small, infinitismal number of people in that category actually receive old age pension. I know it for certain that in the City of Bangalore, a large number of people who are otherwise eligible for this pension, are denied it on the grounds that they happen to be living not on streets, but with some relative. I think time has come for the Government and the Ministry of finance to review the rules under which this old-age pensions are given and I plead that it be made more realistic and actually reach the persons for whom it is intended. To deny a old man or old woman pension merely because he happens to have a relative who may be earning, is not realistic. Even that person with whom the old age individual may be living may himself be living on starvation. But merely because he happens to be employed, the old-age pensioner is denied the benefits of this pension on the ground that he is not completely destitute and that he has somebody to lean on.

SRI G. V. GOWDA (Palya).—Sir, we have got nearly 10 demands which have been placed for the approval of this House. At the outset, I venture to submit that these demands do not deserve the support of this House much less our sympathies. Sir I am not without valid reasons why I should take such a stand. Sir, the administration of these taxes in my opinion is far from satisfactory. The fact that we have not been able to realise as much amount as expected for the implementation of the third Plan would go to indicate how these laws have been administered. In fact, while the third Plan was formulated we expected a revenue surplus of 980 lakhs. On the other hand, we have a deficit of 18 crores, the overall deficit being more than 27 crores; and this is mainly attributable to the fact that we do not or the State Government do not take any endeavour to collect the taxes as much as it was expected while the taxation laws were passed. That is the main reason why we are having a financial crisis in the State. If these taxation measures had been effectively and sincerely implemented, we would not have faced this crisis and on that basis alone we calculated the internal resources for the implementation of the Third Plan period. Even though the weight or the incidence of taxation in the State of Mysore is not in any way lesser than what it prevails in the neighbouring, states, the realisation from these taxes is not encouraging. On the otherhand, the rate of economic growth in Mysore is far below than what is prevailing in Maharashtra, Andhra or Madras. If I should cite statistics, it will prove how the incidence of taxation has impeded the economic growth, especially rural economic growth in the State of Mysore. Therefore, I have been entertaining the idea that if the same state of affairs were to continue

(SRI G. V. GOWDA)

even in the fourth Plan, it will become more difficult to rise to the occasion and meet to the same extent the financial crisis that we are facing today.

So far as sales-tax is concerned, in these five years, we are not having any appreciable growth in revenue from this source year after year. We may be having 1.50 crores more. But now, for the fourth plan period, for the next year, they have shown as much as 5 crores more. But if the administration of these laws is done effectively and if the powers conferred on the machinery entrusted with this work has exercised those powers judiciously and carried out the functions assigned to them, and performed properly their duties more efficiently, I believe Sir, more leakages could have been plugged and efficient recoveries could be made. In fact, efficient handling of the fixcal policy in my opinion mainly depends on those departments that are concerned mainly with the levy and collection of taxes. Sir, we have been told that there are arrears to the extent of 1.87 crores so far as sales-tax is concerned. I fail to understand why before the end of the financial year provisional assessments should not be made and collections should not be made even before the year closes. During the next financial year these things could be done and if it is done there is no reason why so much of tax should be in arrears. When the final assessment is determined, there may be something less. There cannot be such a big margin. Why should there be such a big arrears in sales-tax? This is the basic question. If proper assessments are made before and collections made regularly, there cannot be a wide margin except to the extent that amounts lie in disputes. We see business is increasing, prices have gone up and such being case, the turn-over must be more, the tax-payer would pay more with the result we should recover more as the turn over and business increases. That is the natural consequence that should follow.

10-30 A.M.

Therefore, I am submitting that the Government have not taken efforts to see that more taxes are realised. The question is not that we have a low insidence of taxation. Our rate is as much as in the other States. All is paid by the consumers. When the merchants collects from the consumers, it is not their business to keep it but pay. Everything that is collected from the consumer must be paid to the exchequer. Even the Intelligence Section working in the Sales-Tax Department must be more vigilant and rise to the occasion. So far as sales-tax revenue is concerned, it should be comparable with the neighbouring States or a definite proportion with the total tax revenue. So far as sales-tax revenue is concerned, it works out to 40 per cent of the total tax revenue, while the revenue realised out of sale-tax in Maharashtra works out to 55 per cent, Madras 48 per cent and Kerala 47 per cent. In all the South Indian States, it works to more than 50 per cent to the total tax revenue. We are below that percentage. Why should Mysore State

along have less income so far as sales-tax is concerned ? Even so far as collection charges are concerned, for 1964-65, Kerala spent 2.42 crores to realise a revenue of 17.4 crores. But in Mysore, the expenditure for collection is 3.41 crores to collect a revenue of 17.2 crores. Kerala with lesser expenditure has collected more. Madras has spent 315 lakhs and collected 34 crores. Maharashtra has spent 417 lakhs to collect 60 and odd crores. Therefore, even the collection charges in our State is very high. I am of the view that unless stringent measures are taken, we would not be in a position to do justice either to the consumer or to the State itself.

So far as the agricultural income-tax and income-tax assigned by the Government of India is concerned, there is little appreciable increase. It is six lakhs or so, from the previous year. Maharashtra has been given about 14.25 per cent and Madras 8 per cent and odd. Andhra 7.5 per cent, while Mysore's share ie 5.14 per cent. I should say there is not enough collection here. Our ultimate figure would be less. If it is based on population, nobody would be worried. It is calculated on 80 per cent population and 20 per cent collection. Unless efficient collection is made, we will not be able to get as much as the other neighbouring States are getting. Even in the Agricultural Income-tax the revised figures is 120 lakhs and in the Budget they have provided 100 lakhs this year. It has gone down by 20 lakhs, whereas the collection charges has gone up by 13 per cent so far as agricultural income-tax is concerned. When the Assistant Commissioners of our Sub-divisions are entrusted with the work of collection, I do not understand why there should be separate Agricultural Income-tax Officers. Is it not possible for our Revenue Sub-Divisional officers to go ahead with the levy and collection of these taxes ? Why should we have a separate establishment ? As we know, these sub-divisional officers are not having much work and this work could be entrusted to them and thereby additional establishment charges could be avoided.

As regards the State Excise duties, if you see the expenditure side, it shows that it has gone on increasing year after year and even now we see that expenditure is being incurred on the State Prohibition Board. I do not know if the Prohibition Board exists and if it is so, what is the function of that Board, what is expected of it and what is the ultimate purpose that is going to be served by the Board to the State, and I do not know why expenditure is to be incurred on the Prohibition Board. Even the excise revenue from excise duties is not appreciable. Government has stated that by relaxing prohibition rules in the first year, we will be having 100 lakhs. But that has not been included in the Budget. The increase shown is only five lakhs, while expenditure has increased by 1½ lakhs. There is scope for cutting down expenditure so far as staff for collection is concerned. In the State Excise duties, arrears exist nearly to the tune of 15 per cent. We know that there is a heavy incidence of taxation in the State of Mysore and nothing has been done to give any relief to the minimum extent possible to the consumers and the common man at large.

(SRI G. V. GOWDA)

So far as loans are concerned, now it is expected or it is proposed that 14.56 crores has to be given by way of loans to the various municipalities and the local bodies and to the ryots, Government servants and others.

[MR. SPEAKER in the Chair.]

If we see the conditions that exist now, the recoveries expected to be is 9.93 crores. What I wish to say is, as on 31st March 1964, there was arrears to the extent of 84.76 crores, so far as loans given to local bodies, cultivators, under the N. E. S. and others are concerned. Of course, we are sympathetic so far as agriculturists are concerned, who are unable to make re-payment on account of the adverse seasonal conditions. But so far as others are concerned, who are capable of making repayments, why should there be arrears. No efforts have been made to get the same collected—advancing loans to industrialists under the State Aid to Industries Act.

In fact the Assistant Directors of the Industries Department do not maintain a ledger stating to whom the loan has been given, when the first instalment becomes due and what is the rate of interest. All these things are not available. Even regarding the loans granted to agriculturists, these details are not available in the Circle offices. How things are managed very badly has been mentioned in the Audit Report. Issuing of loans is one thing. But efforts must be made to collect them. They must know who is to pay and when it becomes payable. Even as regards to irrigation wells under the N.E.S. scheme, the concerned B.D.Os issue the loan, and the loan accounts are transferred to the Tehsildars. But he does not maintain a register or record. He does not issue notices. From the people who are capable of making repayment— they are not called upon to pay the amount that is to be repaid by them. For the last four or five years, no attempts have been to collect these loans in most of the taluks. As such, it has accumulated to a tune of 30 crores from cultivators under N.E.S. scheme. There is no use simply providing loans unless sincere efforts are made to collect the same, on the part of officers concerned, at least from the persons who are capable of repaying it. That is not done. This state of affairs must be remedied. You know we are paying interest charges for the loans borrowed. It is to a tune of 15 crores. Now, if we do not get even the interest from the ryot for the loan issued by the Government, I do not know if we can better thngs. When we are paying 15 crores to the Government of India as interest on loans borrowed from them and from the open market or from some other body, should we not get the interest for the loan that we have advanced to the local bodies, to the loans advanced to industrialists or Government servants or anybody else. If this is not collected, I do not know how to manage things. It is proposed to advance 20 lakhs to the MSK mills. It has a history behind it. Because

I do not have much time at my disposal, I will not dilate on this point and I will take another opportunity to speak about it when the Industries Demand come before the House. It is not desirable or wise to loan unless that particular mill stands on its footing. It has not been making profit since the Government took a decision to help it.

One more point about which I wish to talk is about Territorial and Political Pensions and Privy Purses and Allowances. The 1935 Government of India Act says something elese and I do not at the moment understand how the State Government is responsible for paying these privy purses. Article 291 of the Constitution also is clear. It has to be charged on and paid out of the Consolidated Fund of India. There is no negotiation between the Central Government and Mysore Government because Art. 291 of the Constitution says :

MR. SPEAKER.—Instead of reading the section, he will please note that in respect of individual cases it all depends upon the terms of agreement. What are the provisions made in the budget ?

SRI G. V. GOWDA.—Art. 291 of the Crnstitution says that the amount should be charged to the Consolidated Fund of India. If we are to understand that the Government of India reimburses the a nount, then there is no objection.

MR. SPEAKER.—There has been integration of States and some states belonging to the erstwhile state of Bombay have come in and the Mysore State is the successor State. There have been individual agreements. All these agreements are published. The member will have the patience to find out from the respective agreements the relevant provisions.

SRI G. V. GOWDA.—I want to know whether the Government is reviewing these matters periodically. It is time that the Government should takes an overall review of the entire picture and see whether if there is any asset taken by us and on that account we have to pay, it is understandable. The Government will have to see that this liability with regard to privy purse, political pensions are reviewed periodically. The Government must have taken care to see that the erstwhile State of Bombay transferred some assets also.

MR. SPEAKER.—Those States are part of Mysore now.

SRI G. V. GOWDA.—True. All the liabilities are transferred but not the assets that have been created there as a result of common effort by the former States of Madras and Bombay. Should we accept only liability ? Take for instance the Secretariat building of Bombay. It is a common effort of all. My submission is that only liability has been transferred to us. The assets there have grown as a result of the common effort of the former State. Should not those assets also be assigned on population basis or book value ? This has not been taken into consideration at all. If we had done that naturally our Finance Minister should have had no occasion to face the present financial crisis.

Unless the taxation laws are properly and efficiently administered there is no hope to realise such huge amount for the fourth plan.

Mr. SPEAKER.—The debate will go on till 12 noon and after that the reply will begin. We shall sit upto 1 p.m.

† Sri S. S. KOLKEBAIL (Coondapur).—Mr. Speaker, I rise to support all the demands placed before us. At the outset I must take this opportunity to congratulates our Finance Minister because I did not participate in the general debate of the Budget. He has presented to us a true picture of the financial condition of the State. When the budget was prepared, most probably he was not sure of the money that he will get by means of other monetary bills. Any way we find that some lumpsum grants have been provided in the budget and that is a good sign. We hope it will be used for the good of the people.

Under one of the Demands the hon'ble Minister for Finance as asked for some money to pay pensions. About these pensions I find there has been a lot of heart-burning amongst the retired officials. I am reminded and I am tempted to recall one historical fact. When Gazni Mohamad was ruling, he called Phirdosi to write his life history and he promised to pay 50,000 mohars for writing his history. After he wrote the history, Gazni Mohamad wanted to negotiate for 10,000 mohars and Phirdoshi refused to accept it and he died before he received 50,000 mohars. But, before his death, all the other authors of that State told the king that Phirdoshi had written a marvellous history and as such the author must be honoured. So, Gazni Mohamad sent 50,000 mohars to Phirdoshi when the dead body of Phirdoshi was coming from the other side. Similarly by the time pension papers are received the pensioners are dying. This is really very heart-burning. For the last three or four years it has been brought to the notice of the Government in this House and I hope the present Finance Minister will take strong measures to see that pension papers are disposed of within six months from the date of retirement. That is one request

The second thing is about Prohibition. We all believe in the Prohibition Policy. We have adopted certain means for the last 25 years to attain this policy. But, we have failed in introducing those means. I think we must be bold enough to admit that particular fact. This particular fact has been admitted by the Chief Minister of Bombay State. So, the Congress Party of this State, after due deliberations came to the conclusion that the Prohibition Policy has to be relaxed, and with that end in view we must change the means, not by send people to Jail or fining them. We find that unscrupulous officials are making money by this law. Prohibition has entirely become a failure and has made the Police people completely corrupt. I find that in most of the cases, the Police are virtually instigating the boot-leggers. I come from the rank and file of the people; wherever I go I find that the Police are actually instigating these boot-leggers. It is not their fault. The Police are not paid well. They do not believe in this policy. It can be enforced by persons who believe in Social Reforms. Most of the Social Reforms have been done by people like Manu, Shankaracharya, Basaveswara, Mahatma Gandhi, Buddha and Mahaveera, not by sending people to Jail, but by propaganda.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅವರು ಏನು ಹೇಳಿದ್ದಾರೆ ಎಂಬುದನ್ನು ಒಂದು ಸ್ಟ್ಯಾಂಜಾ ಕೋಟ್ ಮಾಡಿದರೆ ಒಳ್ಳೆಯದು.

ಶ್ರೀ ಎಸ್. ಎಸ್. ಕೊಳ್ಳೆಬೈಲ್.—ಒಂದು ಕಡೆ ಬಸವಣ್ಣನವರು "ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯಪಡಬೇಡ, ಹೆಂಡ ಕುಡಿಯಲು ಬೇಡ" ಎಂದು ಹೇಳಿದ್ದಾರೆ.

Hence, I submit that we have to relax the rule. This particular experiment of Prohibition was tried in various Western countries like America, Turkey, Sweeden and Russia, and those countries have also failed They attempted for 30 to 40 years with all the power and with all the educated people, but they could not succeed. Finally, they had to relax the rules. Even in Russia, where communism is having the dictatorship, it could not be enforced. It is only human nature and one particular class of people have already taken this boot-legging as a profession. I feel that the only way is to under-sell toddy, which not only solves this boot-leggers problem, but also solves the food problem, because it contains vitamin 'B'. It is not my opinion; it is the opinion of the Medical people. If you consult any Doctor, he will say that nearly 30 to 40 per cent of people are suffering either from kidney trouble or lever trouble on account of taking to illicit liquors. The Congress Party has subscribed to that policy, but the means we have used is a failure. Are we not entitled, as a democratic State, to change the opinion and change the means to attain a particular thing? Our Party had recommended to our Minister to relax the policy, and he took particular care to study this problem which has ruined the entire Police force which was famous once for honesty and integrity. Only with that end in view, the Party had decided and authorised the Minister for Prohibition to see that some change is made in the Prohibition Policy. Of course, the rules are already there. But, something more has to be done to completely eliminate the boot-leggers. Mahatma Gandhi told us that we must have to break the economy of the British Government and suggested 'Salt Satyagraha'. We have to build a Welfare State and so we have now been charging some duty on salt. He suggested that we must travel only in Third Class. But, today we cannot travel only in Third Class; we have to use Aeroplanes also. We must change our policy to keep pace with the other people of the world. Gandhiji also pleaded that we must follow 'Ahimsa.' After we obtained Independence, we have adopted the Indian Penal Code. In the Indian Penal Code there are 4 to 6 sections, Sections 96 to 104, which provide that in self-defence, we may beat back and you should not take a beating lying down. Jusus christ also preached the same thing. If you are hit, you are bound to hit. Even after independence, we have adopted that particular law, because we did not like our people to be timid. If Mahatma Gandhi had been alive, he would have advised us to change the policy. So, there is no use of becoming fascists, and there is no use in saying, 'let us send all the people to Jail'. With this policy, most probably, our society will go to dogs.

(SRI S. S. KOLKEBAIL)

11-0 A.M.

Because I find even innocent persons are being paid not to care for law and admit that they have committed the offence because the police want some cases. So, the boot leggers induce the innocent persons to go to jail. Therefore, this prohibition law should be relaxed to a great extent and for that introduce toddy. Then only, we can put an end to these boot-leggers.

Sir, in Bengal, there is no prohibition; in U.P in Madhya Pradesh there is no prohibition. In our own State there are some districts where there is no prohibition. So, between one citizen and another citizen, there should not be that distinction. One American has stated that in a composite nation like this, there should be no rich, no poor, no high, no low, no black and no white, but one country, one citizen and a common design to all People know how to reform themselves not necessarily by law. There is one argument that the Harijans will be hit by relaxing prohibition. It is absolutely wrong. In Mysore State there is a High Court Judge. He has not fallen a victim to this. He was born before prohibition came into being. Another Harijan is occuping another important position-Chairman of the Public Service Commission. Our own Harijan Minister is one of the best Ministers in our Cabinet and he was born before prohibition policy was introduced and he has not fallen a prey to this. So, there is absolutely no point in saying that Harijans will be hit by relaxing prohibition. To say that the interest of Harijans is not taken care of by Mysore Government is not correct. Here, all possible representation is given and they are found efficient in all the positions they hold in the Government, in the society and in the judiciary. So, only for political purposes, this argument is being put forth. Sir, about prohibition policy I remember a story in South Kanara. One Mapilla was picketing toddy shop with a Gandhi cap on. When he was picketing the toddy shop, police came and began to beat him black and blue. After receiving 10 to 20 blows he could not put up with the onslaught. Because he was wearing Gandhi cap, he did not want to commit an offence and so he kept his cap down and gave good beating to the police. Sir, this law should not be made a handle to boot-leggers to thrive and the police to become corrupt. In Turkey they tried their level best and finally they found that the highest authority in the police, the I.G.P., himself was in league with the boot-leggers. So, in the name of our future generation this should be relaxed but any amount of money may be spent for propaganda to preach the drink is an evil. Let us not have this artificial law. By sending people to jail, we cannot achieve this social improvement. Sir, God failed with only two persons. God asked Adam and Eve not to eat the fruit but they did not obey. Because those two people ate that fruit, we are having this evil. (*laughter*) When God has failed with two people, how can you succeed with crores of people

Now the Government having understood that the policy has not achieved the cherished goal, has come forward with certain relaxed rules. We feel that the people of this country will give an earnest thought to this.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಮುಂದೆ ಇರತಕ್ಕಂತಹ ಎಲ್ಲ ಬೇಡಿಕೆಗಳನ್ನೂ ನೋಡಿದರೆ ಸರಕಾರದವರು ಏನು ಹಣವನ್ನು ತೆಗೆದುಕೊಳ್ಳುತ್ತಾರೆ, ಅದನ್ನು ಎಲ್ಲಿ ಖರ್ಚು ಮಾಡಬೇಕೆಂದು ಹೋಗುತ್ತಾರೋ ಅಲ್ಲಿ ವರ್ಷದ ಕೊನೆಯೊಳಗೆ ಅಷ್ಟು ಹಣವನ್ನೂ ಖರ್ಚು ಮಾಡುತ್ತಿದ್ದಾರೆಯೇ ಅದೇನಾದರೂ ಸದ್ವಿನಿಯೋಗವಾಗುತ್ತಿದೆಯೇ ಇಲ್ಲವೇ ಅಥವಾ ದುರ್ವಿನಿಯೋಗವಾಗುತ್ತಿದೆಯೇ ಎನ್ನುವುದನ್ನು ನೋಡುವ ಗೋಜಿಗೆ ಅವರು ಹೋಗುವುದಿಲ್ಲ. ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳು ಎಂದರೆ, ಪ್ರೊಹಿಬಿಷನ್ನು, ಪ್ರಿವಿ ಪರ್ಸುಗಳು, ಪೆನ್‌ಷನ್ನುಗಳು ಹಾಗೂ ಇನ್ನೂ ಅನೇಕ ವಿಧವಾದ ಬಾಬುಗಳಿಗೆ ಹಣ ಬೇಕೆಂದು ಇಲ್ಲಿ ಹೇಳಿದ್ದಾರೆ. ಸರಕಾರಕ್ಕೆ ದಿನದಿನಕ್ಕೆ ಬೇಕಾಗುವ ಖರ್ಚುಗಳಿಗಾಗಿ ಹಣವನ್ನು ಕೊಡೋಣ. ಆದರೆ ಅದರಂತೆ ಸರಿಯಾಗಿ ಖರ್ಚುಮಾಡುತ್ತಿದ್ದಾರೆಯೇ ಎಂದರೆ ಆ ರೀತಿ ಮಾಡುತ್ತಿಲ್ಲ. ನಾನಾದರೂ ಇಲ್ಲಿ ಹೇಳುತ್ತೇನೆ, ಈ ದಿನ ಸರಕಾರ ಹಲವಾರು ಟ್ಯಾಕ್ಸುಗಳನ್ನು ಜನರ ಮೇಲೆ ಹಾಕಿದ್ದಾರೆ. ಆದರೆ ಅದನ್ನು ವಸೂಲಿ ಮಾಡುವ ಬಗ್ಗೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಈ ಸರಕಾರದವರು ಯಾರ ಯಾರ ಕಿಸೆಯೊಳಗೋ ಬಿದ್ದು ಶ್ರೀಮಂತರಿಂದ ಬರುವ ಹಣವನ್ನು ವಸೂಲಿ ಮಾಡದೆ ಬಡವರ ಮೇಲೆ ಬೀಳುತ್ತಿರುವ ಹೊರೆಯನ್ನು ದಬ್ಬಾಳಿಕೆಯಿಂದ ವಸೂಲು ಮಾಡುತ್ತಿರುವುದರ ಬಗ್ಗೆ ಈಗತಾನೇ ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ವೆಂಕಟೇಗೌಡರು ಇಲ್ಲಿ ಹೇಳಿದ್ದಾರೆ. ಸೇಲ್ಸ್‌ಟ್ಯಾಕ್ಸು ಎಂದು ಹಾಕಿದ್ದೀರಿ, ಅಗ್ರಿಕಲ್‌ಚರ್ ಇನ್‌ಕಂ ಟ್ಯಾಕ್ಸ್ ಎಂದು ಹಾಕಿದ್ದೀರಿ. ಇವುಗಳನ್ನೆಲ್ಲಾ ವಸೂಲುಮಾಡುವಾಗ ಶ್ರೀಮಂತರು ಮಾತ್ರ ಸರಕಾರಕ್ಕೆ ಕೊಡಬೇಕಾದ ಬಾಕಿಯನ್ನುಳಿಸಿ ಬಾಕಿಯನ್ನು ಇಟ್ಟುಕೊಂಡಿದ್ದಾರೆಯೇ ಹೊರತು ಬಡವರು ಯಾರೂ ಕೊಂಡಿಲ್ಲ. ಇದರ ಬಗ್ಗೆ ಸರಕಾರ ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಂಡಿಲ್ಲ. ಮತ್ತು ಶ್ರೀಮಂತರಿಂದ ಬಾಕಿಯನ್ನು ವಸೂಲು ಮಾಡುವ ಎದೆಗಾರಿಕೆಯೂ ಈ ಸರಕಾರಕ್ಕಿಲ್ಲ ಎಂದರೆ ಅದು ತಪ್ಪಾಗಲಾರದು. ದಿನೇ ದಿನೇ ಬಡವರ ಮೇಲೆ ಹೆಚ್ಚು ಹೊರೆಯನ್ನು ಹೊರಿಸುವುದಕ್ಕಾಗಿ ಸೇಲ್ಸ್ ಟ್ಯಾಕ್ಸನ್ನು ಜಾಸ್ತಿ ಮಾಡಬೇಕೆಂದು ಹಾಕುತ್ತಿದ್ದೀರಿ. ಆದರೆ ಶ್ರೀಮಂತರ ಮೇಲೆ ಹೆಚ್ಚು ಹೊರೆಯನ್ನು ಹಾಕಲು ಯಾವ ಕ್ರಮವನ್ನೂ ತೆಗೆದುಕೊಳ್ಳುತ್ತಾ ಇಲ್ಲ. ಇದಕ್ಕೆ ಕಾರಣವೇನು? ಸೇಲ್ಸ್ ಟ್ಯಾಕ್ಸ್ ಹಾಕುವಾಗ ಇಂಡಿಯಾ ಸರ್ಕಾರದವರೊಡನೆ 1957ರಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದೀರಿ. ಮೊನ್ನೆ ತಾನೆ ಸೇಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್‌ಲನ್ನು ತಂದು ಅನೇಕ ವರ್ಷಗಳ ಮೇಲೆ ಸೇಲ್ಸ್ ಟ್ಯಾಕ್ಸನ್ನು ಹಾಕಿದಿರಿ.

> "In May 1957, the Government of India, in consultation with State Governments, decided that an additional duty of excise should be levied on mill-made textiles, sugar and-tobacco including manufactured tobacco in replacement of sales tax levied by the State Governments, and that the net proceeds should be destributed among the States, subject to the then income derived by each State being assured to it. An additional excise duty has since been introduced in lieu of sales tax on silk fabrics as well and the Third Finance Commission had taken this also into account while recommending the annual guarantee amount to the State Government. The amount guaranteed thus fixed is Rs. 100.10 lakhs as against Rs. 100.00 lakhs fixed by the Second Finance Commission. They have also recommended that, in addition to the amount so guaranteed, the State should participate in the distribution of collection in excess of the amount so provided, in the ratio specified by them. The Fourth Finance Commission has retained the guaranteed amount at Rs. 100.10 lakhs and revised the percentage share in the excess over this sum as 5.21."

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ತಾವು ಇಂಡಿಯಾ ಸರ್ಕಾರದವರೊಡನೆ ಯಾವ ಒಂದು ಒಪ್ಪಂದವನ್ನು ಮಾಡಿಕೊಂಡಿರೋ ಅದನ್ನು ಹಿಂದಕ್ಕೆ ಇಟ್ಟು ಇವತ್ತಿನ ದಿವಸ ಎಲ್ಲಾ ಬಟ್ಟೆ ಮತ್ತು ಇತರ ವಸ್ತುಗಳ ಮೇಲೆ ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ, ಇದು ಸರಿಯಲ್ಲ ಎಂದು ಶ್ರೀಮಾನ್ ಸೂರ್ಯನಾರಾಯಣರಾಯರು ಹೇಳಿದರೆ ನಾವು ತೆರಿಗೆ ಹಾಕಿಲ್ಲ, ಹಾಗೆ ಆಗುವುದಿಲ್ಲ, ಹೀಗೆ ಆಗುವುದಿಲ್ಲ ಎಂದು ಹೇಳುತ್ತಾ ಇದ್ದೀರಿ. ತಮ್ಮ ಬಡ್ಜೆಟ್ ಭಾಷಣ ನೋಡಿದ್ದೇ ಆದರೆ ರಾಜ್ಯ ಸರ್ಕಾರಕ್ಕೂ ಮತ್ತು ಕೇಂದ್ರ ಸರ್ಕಾರಕ್ಕೂ ಹಣಕಾಸಿನ ವಿಷಯದಲ್ಲಿ ಏನೂ ಹೊಂದಾಣಿಕೆ ಇಲ್ಲ ಎಂಬುದು ಗೊತ್ತಾಗುತ್ತದೆ, ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಇದರ ವಿಷಯದಲ್ಲಿ ಬಹಳ ತೀವ್ರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ತಾವು ಕೊಟ್ಟಂಥ ಮಾತನ್ನು ಪಾಲಿಸುವುದಕ್ಕೆ ತಾವು ಎಷ್ಟುಮಟ್ಟಿಗೆ ಹಿಂದೆಗೆಯುತ್ತಾ ಇದ್ದೀರಿ ಅಷ್ಟೇ ಮಟ್ಟಿಗೆ ಕೇಂದ್ರ ಸರ್ಕಾರದವರೂ ಕೂಡ ಹಿಂತೆಗೆಯುತ್ತಾ ಇದ್ದಾರೆ. ಹಣಕಾಸಿನ ಸಂಬಂಧ ನಿಮಗೂ ಕೇಂದ್ರ ಸರ್ಕಾರಕ್ಕೂ ಅಷ್ಟು ಚೆನ್ನಾಗಿಲ್ಲ. ಇವತ್ತಾದರೂ ಕೂಡ ಇದನ್ನು ತಾವು ಯೋಚನೆ ಮಾಡಬೇಕು. ಟ್ಯಾಕ್ಸ್ ಹಾಕುವಾಗ, ಎಕ್ಸೈಜ್ ಡ್ಯೂಟೀಸ್ ಲೆವಿ ಮಾಡುವಾಗ ತಾವು ಅವರ ಜೊತೆಯಲ್ಲಿ ಒಪ್ಪಂದವನ್ನು ಮಾಡಿಕೊಂಡಿದ್ದೀರಿ. ಡಿವಿಸಬಲ್ ಪೂಲ್‌ನಲ್ಲಿ ಎಷ್ಟು ಬರಬೇಕೋ ಅದನ್ನು ಡಿಮ್ಯಾಂಡ್ ಮಾಡಬೇಕೇ ಹೊರತು ಮನಸ್ಸಿಗೆ ಬಂದಂತೆ ತೆರಿಗೆಗಳನ್ನು ಹಾಕುವುದರಿಂದ ಒಳ್ಳೆಯ ಪರಿಣಾಮವಾಗುವುದಿಲ್ಲ. ಮೈಸೂರು ಸರ್ಕಾರದ ಹಣಕಾಸಿನ ಪರಿಸ್ಥಿತಿಗೆ ಕೇಂದ್ರಸರ್ಕಾರದವರು ಏಕೆ ಮನಸ್ಸು ಕೊಡುವುದಿಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ. ಸೇಲ್ಸ್ ಟ್ಯಾಕ್ಸ್ ಕಮರ್ಷಿಯಲ್ ಟ್ಯಾಕ್ಸ್ ಬಗ್ಗೆ ಚೆಕ್ ಪೋಸ್ಟ್ ಕ್ರಿಯೇಟ್ ಮಾಡಿ ಲೀಕೇಜ್ ಪ್ಲಗ್ ಮಾಡುವುದರಿಂದ ಹೆಚ್ಚು ಉತ್ಪನ್ನ ಬರುತ್ತದೆ ಎಂದು ತಾವೂ ಹೇಳಿದಿರಿ, ಹಿಂದಿನ ಹಣಕಾಸಿನ ಸಚಿವರೂ ಸಹ ಹೇಳಿದ್ದರು. ಎಲ್ಲೆಲ್ಲಿ ಚೆಕ್ ಪೋಸ್ಟನ್ನು ಇಟ್ಟಿದ್ದೀರಿ ಅಲ್ಲೆಲ್ಲಾ ಅನಿರೀಕ್ಷಿತ ಭೇಟಿ ಕೊಟ್ಟು ನೋಡಿದ್ದೇ ಆದರೆ ಅಲ್ಲಿ ಎಷ್ಟುಮಟ್ಟಿಗೆ ದುರವ್ಯವಹಾರ ನಡೆಯುತ್ತಾ ಇದೆ ಎಂಬುದು ತಮಗೇ ಗೊತ್ತಾಗುತ್ತದೆ. ಹಾಗೆ ಮಾಡದೇ ಹೋದರೆ ತೆರಿಗೆಗಳನ್ನು ಹಾಕಿ ಅದು ದಾರಿಯಲ್ಲೇ ಸೋರಿ ಹೋದರೆ ನಮ್ಮ ಖಜಾನೆಗೆ ಹಣ ಬರುವುದಿಲ್ಲ. ಜನತೆ ತೆರಿಗೆಯನ್ನು ಕೊಡುವುದು ತಪ್ಪುವುದಿಲ್ಲ. ಅದಕ್ಕೆ ಈ ವಿಷಯವನ್ನು ತಾವು ಅರ್ಥಮಾಡಿಕೊಳ್ಳಬೇಕೆಂದು ಸರ್ಕಾರದವರಿಗೆ ಹೇಳುತ್ತೇವೆ. ಕಮರ್ಷಿಯಲ್ ಟ್ಯಾಕ್ಸ್ ವಿಷಯದಲ್ಲಿ ಹೇಳುವುದಾದರೆ, ಶ್ರೀಮಾನ್ ಕೊಳ್ಳೇಬೈಲ್ ಅವರು ಭಟ್ಟಿ ಷರಾಬಿನಿಂದ ಪೋಲೀಸ್‌ನವರ ಕೈ ಕೊಳಚೆ ಆಯಿತು ಎಂದು ಹೇಳಿದರು. ಪೋಲೀಸ್‌ನವರನ್ನು ಬಿಟ್ಟರೆ ಆ ರೀತಿ ಕೈ ಕೊಳಚೆ ಮಾಡಿಕೊಂಡಿರುವವರು ಎಂದರೆ ಈ ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನವರು. ಎರಡು ವಾರದ ಕೆಳಗೆ ತುಮಕೂರು ಪಟ್ಟಣ ಒಂದರಲ್ಲೇ ಇಂಟೆಲಿಜೆನ್ಸ್ ಬ್ಯೂರೋ ಆಫೀಸರು ಒಬ್ಬರು ಒಂದೇ ಒಂದು ಮಧ್ಯಾನ್ಹದಲ್ಲಿ ಎರಡು ಸಾವಿರ ಕೊಟ್ಟವರು, 3 ಸಾವಿರ ಕೊಟ್ಟವರು, 4 ಸಾವಿರ ಕೊಟ್ಟವರು, ಹೀಗೆ ಒಟ್ಟು 25 ಸಾವಿರ ರೂಪಾಯಿಗಳನ್ನು ಕಲೆಕ್ಟ್ ಮಾಡಿಕೊಂಡು ಬಂದರು. ತಮ್ಮ ಮಗಳ ಮದುವೆಯ ಖರ್ಚನ್ನು ಒಂದು ವಾರದಲ್ಲಿ ಸಂಪಾದನೆ ಮಾಡಿದ್ದಾರೆ. ಅಪ್ಪಣೆ ಕೊಟ್ಟರೆ ಆ ಅಧಿಕಾರಿಯ ಹೆಸರು, ಅವರು ಯಾರು ಎಂಬುದನ್ನು ಹೇಳುವುದಕ್ಕೆ ತಯಾರಾಗಿದ್ದೇನೆ. ಇಂಟೆಲಿಜೆನ್ಸ್ ಬ್ಯೂರೋನಲ್ಲಿ ಇರತಕ್ಕವರಿಗೆ ಯಾವ ರೀತಿ ಹಣ ಬರುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಹಣ ವಸೂಲು ಮಾಡತಕ್ಕ ಕ್ರಮ ಕೂಡ ಎಷ್ಟುಮಟ್ಟಿಗೆ ಕೆಳಕ್ಕೆ ಇಳಿಯುತ್ತಾ ಇದೆ ಎಂಬುದನ್ನು ಯೋಚನೆ ಮಾಡಿದರೆ ಈ ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಯಾವ ರೀತಿ ಎಷ್ಟು ಮಟ್ಟಿಗೆ ಅಲ್ಲಿ ಟೆಂಪೋ ಇರಬೇಕು, ಯಾವ ರೀತಿ ಕೆಲಸ ಮಾಡಬೇಕೋ ಆ ರೀತಿ ಕೆಲಸ ಮಾಡುತ್ತಾ ಇಲ್ಲ ಎಂಬುದು ಗೊತ್ತಾಗುತ್ತದೆ. ಟ್ಯಾಕ್ಸ್ ಅರಿಯರ್ಸ್ ಕಲೆಕ್ಟ್ ಮಾಡಿ, ಲೀಕೇಜ್ ಪ್ಲಗ್ ಮಾಡಿ ಖಜಾನೆಗೆ ಹಣವನ್ನು ಭರ್ತಿ ಮಾಡಬೇಕೆಂದು ಮಾನ್ಯ ಹಣಕಾಸಿನ ಸಚಿವರಿಗೆ ಹೇಳುತ್ತೇನೆ. ರಾಜ್ಯದಲ್ಲಿ ಹಣ ಇಲ್ಲ ಎನ್ನುತ್ತೀರಿ. ಸ್ಕೂಲುಗಳಿಗೆ, ಕುಡಿಯುವ ನೀರಿನ ಬಾವಿಗಳಿಗೆ, ಹಣ ಇಲ್ಲ ಎನ್ನುತ್ತೀರಿ. ಸೇಲ್ಸ್ ಟ್ಯಾಕ್ಸ್ ಟ್ರಿಬ್ಯೂನಲ್ ಕ್ರಿಯೇಟ್ ಮಾಡಿದ್ದೀರಿ, ಹೈಕೋರ್ಟಿನಲ್ಲಿ ಎಷ್ಟು ಜನ ಜಡ್ಜಸ್ ಇದ್ದಾರೋ ಅಷ್ಟೇ ಜನ ಅಲ್ಲಿ ಇದ್ದಾರೆ. ಹನ್ನೆರಡು ಗಂಟೆಯಿಂದ ಹನ್ನೆರಡು ಇಪ್ಪತ್ತರೊಳಗೆ ಎಲ್ಲಾ ಕೇಸುಗಳನ್ನೂ ಕೂಗಿ ಆ ಆಫೀಸು ಬರಿದು ಆಗಿರುತ್ತದೆ, ಅದಕ್ಕೆ ಕೆಲಸ ಇಲ್ಲ. ಆದ್ದರಿಂದ ಆ ಸೇಲ್ಸ್‌ಟ್ಯಾಕ್ಸ್ ಟ್ರಿಬ್ಯೂನಲ್‌ನ್ನು ವಜಾ ಮಾಡಿ, ಅದು ದೇಶಕ್ಕೆ ಭಾರವಾಗಿದೆ. ಅದರ ಕೆಲಸವನ್ನು ರೆವಿನ್ಯೂ ಅಪೆಲೇಟ್ ಟ್ರಿಬ್ಯೂನಲ್‌ಗೆ ಕೊಟ್ಟರೂ ಚಿಂತೆ ಇಲ್ಲ, ದೋಷ ಆಗುವುದಿಲ್ಲ. ರೆವಿನ್ಯೂ ಅಪೆಲೇಟ್ ಟ್ರಿಬ್ಯೂನಲ್ ರಾಜ್ಯದಾದ್ಯಂತ ತಿರುಗುವುದರಿಂದ ಬೆಳಗಾಂ, ಮೈಸೂರು ಗುಲ್ಬರ್ಗ ಈ ಎಲ್ಲಾ ಭಾಗಗಳಿಗೂ ಕೂಡ ಅನುಕೂಲವಾಗುತ್ತದೆ. ಸೇಲ್ಸ್‌ಟ್ಯಾಕ್ಸ್ ಟ್ರಿಬ್ಯೂನಲ್‌ನ್ನು ವಜಾಮಾಡಿ ಉಳಿತಾಯವಾಗುವ ಹಣವನ್ನು ಅಭಿವೃದ್ಧಿ ಕೆಲಸಗಳಿಗೆ ಉಪಯೋಗಿಸಬೇಕೆಂದು ಸರ್ಕಾರದವರಿಗೆ

ಹೇಳುತ್ತೇನೆ. ಈಗ ಹಾಕಿದಂತಹ ತೆರಿಗೆಯನ್ನು ವಸೂಲು ಮಾಡಿ ಸರಿಯಾದ ರೀತಿಯಲ್ಲಿ ವಿನಿಯೋಗ ಮಾಡದೇ ಇದ್ದ ಪಕ್ಷದಲ್ಲಿ ಮತ್ತೆ ಇನ್ನೂ ಹೆಚ್ಚಿನ ತೆರಿಗೆಗಳನ್ನು ಹಾಕುವುದರಲ್ಲಿ ಅರ್ಥವಿಲ್ಲ. ಶ್ರೀಮಾನ್ ಕೊಳ್ಕೇಬೈಲ್ ಅವರು ರಾಜ್ಯದಲ್ಲಿ ಪ್ರೊಹಿಬಿಷನ್‌ನ್ನು ಸ್ಕ್ರ್ಯಾಪ್ ಮಾಡಿ ಎಂದು ಹೇಳಿದರು.

ಶ್ರೀ ಎಸ್. ಎಸ್. ಕೊಳ್ಕೆಬೈಲ್.—ನಾನು ಹಾಗೆ ಹೇಳಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ಕ್ರ್ಯಾಪ್ ಎಂದರೆ ತಾವು ಇಂಗ್ಲೀಷ್ ಡಿಕ್ಷನರಿ ಹೇಗೆ ರೆಫರ್ ಮಾಡಿದ್ದೀರೋ, ಕನ್ನಡದಲ್ಲೂ ಕೂಡ ನಾನು ಅಷ್ಟೇ ರೆಫರ್ ಮಾಡಿದ್ದೇನೆ. ಸ್ಕ್ರ್ಯಾಪ್ ಎಂದರೆ ರಾಜ್ಯದಲ್ಲಿ ಪಾನನಿರೋಧವನ್ನು ಪೂರ್ಣವಾಗಿ ತೆಗೆದುಬಿಡಬೇಕು ಎಂದು. ಇದಕ್ಕಿಂತಲೂ ಸಮಾಜ ಕಂಟಕವಾದದ್ದು, ಸಮಾಜ ಘಾತಕವಾದದ್ದು, ಬಡವರ ತಲೆ ಮೆಟ್ಟಿ ಅವರ ಹಣದಮೇಲೆ ಧರ್ಮ ಸಾಮ್ರಾಜ್ಯ ಕಟ್ಟುತ್ತೇವೆ ಎನ್ನುವುದು ಬೇರೆ ಯಾವುದೂ ಇಲ್ಲ. ಮಹಾತ್ಮಾ ಗಾಂಧಿಯವರು ಹೇಳಿದರು, ನೆಹರೂರವರು ಹೇಳಿದರು ಎಂದು ಮಹಾತ್ಮಾ ಗಾಂಧಿಯವರ ಹೆಸರಿನಲ್ಲಿ ರಾಜ್ಯಭಾರ ಮಾಡತಕ್ಕ ಜನ ಮೈಸೂರು ಸಂಸ್ಥಾನದಲ್ಲಿ ರಾಜ್ಯ ಕಟ್ಟಬೇಕು, ಜನ ಹೆಂಡ ಕುಡಿಯಬಾರದು, ಕುಡಿತದಿಂದ ಹರಿಜನರು, ಗಿರಿಜನರು ಕೆಟ್ಟು ಹಾಳಾಗಿ ಹೋಗುತ್ತಾರೆ ಎಂದು ಪ್ರಚಾರ ಮಾಡುತ್ತಾ ಇದ್ದೀರಿ. ಹಾಗಿರುವಾಗ ಇವತ್ತು ಸರ್ಕಾರದ ಬೊಕ್ಕಸಕ್ಕೆ ಹಣ ಇಲ್ಲ ಎಂದು ಹೇಳಿ ಪಾನನಿರೋಧವನ್ನೇ ತೆಗೆದುಹಾಕಬೇಕೆಂದು ಹೇಳಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಶುರುಮಾಡಿರುವುದು ನಿಜವಾಗಿಯೂ ಸಾಧುವಾದುದಲ್ಲ. ಇವರು ಹೇಳುವ ಪ್ರಕಾರ ಇವತ್ತಿನ ದಿವಸ ಮಹಾತ್ಮಾ ಗಾಂಧಿಜಿಯವರು ಇದ್ದಿದ್ದರೆ, ಈ ಕಾಂಗ್ರೆಸ್‌ನವರ ಎದುರಿಗೇ ವಿಷಪಾನ ಮಾಡಿ ಮರಣ ಹೊಂದುತ್ತಾ ಇದ್ದರು. ಇವತ್ತಿನ ದಿವಸ ಎನ್. ಇ. ಎಸ್. ಬೇಡ, ಸಿ. ಡಿ. ಬೇಡ ಎಂದು ಹೇಳಿ ಕಾಂಗ್ರೆಸ್‌ನವರೇ ವಾದಮಾಡಿದರು, ಅದರಲ್ಲಿ ಲೋಪದೋಷ ಇದ್ದರೆ ಏಕೆ ಅದನ್ನು ಸರಿಮಾಡಬಾರದು ? ಅದರಿಂದ ದೇಶಕ್ಕೆ ಕಲ್ಯಾಣವಾಗುತ್ತದೆ ಎಂದು ವಾದ ಮಾಡಬಾರದು ? ಅದೇ ರೀತಿ ಪಾನನಿರೋಧ ಜಾರಿಗೆ ಬರತಕ್ಕ ಕ್ರಮದಲ್ಲಿ ಲೋಪ ದೋಷ ಇದ್ದರೆ ನಮ್ಮ ಸರ್ಕಾರ ಈ ಕಾಂಗ್ರೆಸ್‌ನವರು ಏಕೆ ಅದನ್ನು ಸರಿಮಾಡಬಾರದು ಎಂದು ಕೇಳುತ್ತೇನೆ. ಪ್ರಚಾರ ಮಾಡತಕ್ಕ ಶಾಖೆಯನ್ನು ಏಕೆ ನಿರ್ಮಾಣ ಮಾಡಬಾರದು ಎಂದು ಕೇಳುತ್ತೇನೆ. ಅದನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದೀರಿ. ರಾಜ್ಯದಲ್ಲಿ ತಾವು ಹೇಳಿದ್ದೆಲ್ಲವೂ ಕೂಡ ಸರಿಯಾಗಿ ನಡೆಯುತ್ತಾ ಇಲ್ಲ. ಮಹಾತ್ಮಾ ಗಾಂಧಿಯವರು ಹಿಂದೂಸ್ಥಾನದ 30 ಕೋಟಿ ಜನ ಬದುಕಬೇಕು ಎಂದು ಹೇಳಿ ಪ್ರಚಾರ ಮಾಡಿ, ಭದ್ರವಾದ ಬುನಾದಿಯಮೇಲೆ ರಾಷ್ಟ್ರ ಕಟ್ಟಬೇಕೆಂದು ಒಂದು ಕಾರ್ಯಕ್ರಮವನ್ನು ಹಾಕಿದರು, ಅದಕ್ಕೆ ಇವತ್ತಿನ ದಿವಸ ತಿಲಾಂಜಲಿಯನ್ನು ಕೊಡುತ್ತಾ ಇರತಕ್ಕ ಈ ಕಾಂಗ್ರೆಸ್‌ನವರು ಅಧಿಕಾರವನ್ನು ಬಿಟ್ಟು ನಿರ್ಗಮಿಸುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ. ನಾನು ಹೇಳುತ್ತೇನೆ, ಪೋಲೀಸ್‌ನವರ ಕೈ ಸ್ವಚ್ಛವಾಗಿದೆ. ಇವತ್ತು ನಮ್ಮ ಸ್ನೇಹಿತರು ಹೇಳುತ್ತಾರೆ ಪೋಲೀಸ್‌ನವರು ಕೆಟ್ಟು ಹೋಗಿದ್ದಾರೆ ಎಂದು ಏನಾದರೂ ಮಾತನಾಡುವಾಗ ಯಾವುದಕ್ಕೂ ಒಂದು ಮಿತಿ ಇರಬೇಕು. ಯಾರಿಗಾದರೂ ಒಂದು ಒಳ್ಳೆಯದನ್ನು ಹೇಳುವಾಗ, ಕೆಟ್ಟದ್ದನ್ನು ಹೇಳುವಾಗ ಸಮತೋಲನ ಮಾಡಿ ಹೇಳಬೇಕು.

Sri S. S. KOLKEBAIL.—I take strong objection. I never said "scrap" prohibition. On the other hand he said that it should be scrapped.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರೊಹಿಬಿಷನ್‌ನನ್ನು ಸ್ಕ್ರ್ಯಾಪ್ ಮಾಡಬೇಕೆಂದು ನಾನೂ ಎಲ್ಲೂ ಹೇಳಲಿಲ್ಲ. ಈ ಅರ್ಧನಾರಿ ಕ್ರಮ, ಒಂದು ಕಡೆ ಕುಡಿಯಿರಿ ಅನ್ನುವುದು, ಇನ್ನೊಂದು ಕಡೆ ಬೇಡ ಎನ್ನುವುದು ಈ ರೀತಿ ಮಾಡುವುದು ಬೇಡ, ಪೂರ್ಣ ಪಾನನಿರೋಧವನ್ನು ಇಡೀ ದೇಶದಲ್ಲಿ ಜಾರಿಗೆ ತರಬೇಕೆಂದು ಹೇಳಿದ್ದೇನೆ. ಈ ಸಭೆಯಲ್ಲಿ ಪಾನನಿರೋಧವನ್ನು ಸ್ಕ್ರ್ಯಾಪ್ ಮಾಡಿ ಎಂದು ಹೇಳಿದ್ದರೆ ಅಧ್ಯಕ್ಷರ ಕೈಯಲ್ಲಿ ರಾಜೀನಾಮೆ ಕಾಗದವನ್ನು ಕೊಟ್ಟು ಈ ಸಭೆಯಿಂದ ನಿರ್ಗಮಿಸುತ್ತೇನೆ, ಇಲ್ಲದೇ ಹೋದರೆ ಆ ನಮ್ಮ ಮಾನ್ಯ ಸ್ನೇಹಿತರು ನಿರ್ಗಮಿಸಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ. ಈ ದಿವಸ ಹರಿಜನರು ಪಾನನಿರೋಧದಿಂದ ಉದ್ಧಾರವಾಗಿದ್ದಾರೆ, ಅವರು ಜಮೀನು ಮಾಡಿಕೊಂಡಿದ್ದಾರೆ, ಜಡ್ಜಿಗಳಾಗಿದ್ದಾರೆ, ಪಬ್ಲಿಕ್ ಸರ್ವಿಸ್ ಕಮಿಷನ್ ಛೇರ್ಮನ್‌ರಾಗಿದ್ದಾರೆ, ಹೀಗೆ ಅವರ ಸ್ಥಿತಿಗತಿ ಉತ್ತಮವಾಗಿದ್ದರೆ ಪಾನನಿರೋಧವೇ ಅದಕ್ಕೆ ಕಾರಣ. ಪಾನನಿರೋಧ ಮಾಡದಿದ್ದರೆ ಅವರು ಕುಡಿಯುತ್ತಿದ್ದರೆ ಹೀಗೆ ಉತ್ತಮ ಸ್ಥಿತಿಗೆ ಅವರು ಬರಲು ಸಾಧ್ಯವಾಗುತ್ತಿರಲಿಲ್ಲ. ಈ ಸಭೆಗೆ ಹರಿಜನರು ಅವರ ಸ್ಥಿತಿ ಸುಧಾರಿಸಿರುವುದರಿಂದಲೇ ಚುನಾಯಿತರಾಗಿ ಬಂದಿರುತ್ತಾರೆ, ಇಲ್ಲದಿದ್ದರೆ ಬರಲು ಸಾಧ್ಯವಿರಲಿಲ್ಲ. ಸರಕಾರ ಪಾನನಿರೋಧವನ್ನು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಹಾತ್ಮಾ ಗಾಂಧಿಯವರ ಹೆಸರಿನಲ್ಲಿ ಜಾರಿಗೆ ತರಲು ಸಾಧ್ಯವಿಲ್ಲದಿದ್ದರೆ ಅವರು ಅಧಿಕಾರದಲ್ಲಿರಲು ಅವಕಾಶವಿಲ್ಲ. ಅವರು ಅಧಿಕಾರದಿಂದ ಪದಚ್ಯುತರಾಗಬೇಕು. ಅದಕ್ಕಾಗಿ ನಾನು ಹೇಳುವುದು ಇವತ್ತು ನಿಜವಾಗಿಯೂ ಕೂಡ ನೀವು ಹರಿಜನರು ಮತ್ತು ಗಿರಿಜನರನ್ನು ಉಧ್ಧಾರಮಾಡಬೇಕು, ಕುಡಿತದ ಹಾವಳಿಗೆ ಸಿಕ್ಕಿರುವವರನ್ನು ಉಧ್ಧಾರ ಮಾಡಬೇಕು ಎಂದಿದ್ದರೆ ಸಂಸ್ಥಾನದಾದ್ಯಂತ ಪೂರ್ಣವಾಗಿ ಜಾರಿಗೆ ತನ್ನಿ. ರೂರ್ಸ್ ರಿಲ್ಯಾಕ್ಸ್ ಮಾಡಿದರೆ 80 ಲಕ್ಷ ರೂಪಾಯಿ ಬರುತ್ತದೆ ಎಂದು ಇದೇ ಸಭೆಯಲ್ಲಿ ಹೇಳಿದ ಹಣಕಾಸಿನ ಸಚಿವರು ಲೈಸೆನ್ಸ್ ಫೀ ಕಡಮೆ ಮಾಡುವುದರಿಂದ ಎಷ್ಟು ಹಣ ಬರುತ್ತದೆಂದು ಹೇಳುವುದಕ್ಕೆ ಧೈರ್ಯ ಮಾಡಲಿಲ್ಲ. ಡಿಲ್ಲಿ ಸರಕಾರ ಹೇಳಿದೆ, ರಾಜ್ಯ ಸರಕಾರ ಒಂದು ಹೆಜ್ಜೆ ಮುಂದಿಟ್ಟರೆ ತೀವ್ರ ಪರಿಣಾಮವಾಗುತ್ತದೆಂದು ಹೇಳಿದೆ ಎಂದು ಕೈಕಟ್ಟಿ ಕುಳಿತರೆ ದೇಶದ ಅಧೋಗತಿಗೆ ಕಾರಣವಾಗುತ್ತದೆ. ಆದುದರಿಂದ ಈ ದಿವಸ ಸಂಸ್ಥಾನದಲ್ಲಿ 3-4 ಜಿಲ್ಲೆಗಳಲ್ಲಿ ಕುಡಿತಕ್ಕೆ ಅವಕಾಶ ಕೊಟ್ಟಿರುವುದನ್ನು ಸಂಪೂರ್ಣವಾಗಿ ತೆಗೆದು ಯಾರೂ ಕುಡಿಯುವುದಕ್ಕೆ ಅವಕಾಶವಿಲ್ಲದಂತೆ ಮಾಡಿದರೆ ಅನುಕೂಲ, ಹಾಗಿಲ್ಲದೆ ಒಂದು ಕಡೆ ಕುಡಿಯುವುದಕ್ಕೆ ಅವಕಾಶ ಕೊಟ್ಟು ಸುಮ್ಮನಿದ್ದರೆ ಕುಡಿಯುವುದನ್ನು ಬಿಡುವುದಿಲ್ಲ. ಆದುದರಿಂದ ಹಣದ ಆಸೆಯಿಲ್ಲದೆ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರಬೇಕು. ಈಗಿರುವ ಅನೇಕ ಬೋರ್ಡುಗಳು ಅವುಗಳ ಛೇರ್ಮನ್ನರು, ಅದಕ್ಕೆ ಸಂಬಂಧಪಟ್ಟ ದೊಡ್ಡ ದೊಡ್ಡ ಅಧಿಕಾರಿಗಳು ಮುಂತಾದವರನ್ನೆಲ್ಲಾ ತೆಗೆದು ಬಡವರನ್ನು ಉದ್ಧಾರಮಾಡಬೇಕೇ ಹೊರತು ಅಧಿಕಾರಿಗಳಿಗೆ ಸ್ಥಾನ ನಿರ್ಮಾಣಮಾಡಿ ಅವರಿಗೆ ಸಂಬಳ ಕೊಡುವುದಕ್ಕಾಗಿ ಜನರಿಗೆ ಹೆಂಡ ಕುಡಿಸಬಾರದು, ಹೆಂಡ ಕುಡುಕ ರಾಜ್ಯ ಎಂದು ಹೇಳುವುದಕ್ಕೆ ಅವಕಾಶ ಕೊಡಬಾರದು. ಹಾಗೆ ಮಾಡದಿದ್ದರೆ ಇಂಥ ರಾಜ್ಯ ಇರುವುದಕ್ಕೆ ಲಾಯಕ್ಕಿಲ್ಲ. ಅಮೇರಿಕಾವಲ್ಲಿ, ಇಂಗ್ಲೆಂಡಿನಲ್ಲಿ ಕುಡಿಯುತ್ತಾರೆ. ಆದರೆ ಅಲ್ಲಿ ಒಂದು ಮಿತಿ ಇದೆ. ಅದೇ ಇಲ್ಲ ಜೇಬಿನಲ್ಲಿ, ಹಿಪ್ ಪಾಕೆಟ್ಟುಗಳಲ್ಲಿ ಸೀಸೆ ಇಟ್ಟುಕೊಂಡು ಕುಡಿಯುವುದಾದರೆ ಇಂಥ ರಾಜ್ಯದಲ್ಲಿ ಯಾರೂ ಮರ್ಯಾದೆಯಿಂದ ಬದುಕುವುದಕ್ಕೆ ಸಾಧ್ಯವಿಲ್ಲ. ಹಣವಿಲ್ಲದಿದ್ದರೂ ಚಿಂತೆಯಿಲ್ಲ, ಆಸ್ಪತ್ರೆ ಇಲ್ಲದಿದ್ದರೂ ಚಿಂತೆಯಿಲ್ಲ, ಬಡವರಿಗೆ ಹೆಂಡ ಕುಡಿಸಿ ಅದರಿಂದ ಬಂದ ಹಣದಲ್ಲಿ ಶಾಲೆಗಳನ್ನು ಕಟ್ಟಿಸುವುದು ಸರಿಯಲ್ಲ, ಸರಕಾರ ಧೈರ್ಯಮಾಡಿ ಪೂರ್ಣವಾಗಿ ದೇಶದಲ್ಲೆಲ್ಲಾ ಪಾನನಿರೋಧವನ್ನು ಜಾರಿಗೆ ತಂದು ಬಡವರನ್ನು ಮೊದಲು ಉದ್ಧಾರಮಾಡಬೇಕು. ಈ ದಿವಸ ರಾಜ್ಯದಲ್ಲಿರುವ ಶೇಕಡ 90 ಮಂದಿ ಬಡವರನ್ನುದ್ಧಾರಮಾಡುವುದಕ್ಕೆ, ಬೂಟ್ ಲೆಗ್ಗರ್ಸ್ ನಿರ್ನಾಮಮಾಡುವುದಕ್ಕೆ ಸರಕಾರ ಧೈರ್ಯದಿಂದ ಹೆಜ್ಜೆ ಇಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿದ್ದಯ್ಯ ಕಾಶಿಮಠ್ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ವಿಷಯಗಳನ್ನು ಹೇಳಲಿಚ್ಛಿಸುತ್ತೇನೆ. ಮೂರು ನಾಲ್ಕು ವರ್ಷಗಳಿಂದ ಜಗತ್ತು ಸರ್ವ ಸಂಕಟಕ್ಕೊಳಗಾಗಿರುವಾಗ ಸರಕಾರದವರು ರಾಜ್ಯದಲ್ಲಿ ತುರ್ತು ಪರಿಸ್ಥಿತಿ ಇದೆ ಯೆಂದು ಹೇಳಿ ಕಾನೂನುಗಳನ್ನು ತಿದ್ದುಪಡಿ ಮಾಡಿ ಅದರ ಮೂಲಕ ಹಚ್ಚು ಹೆಚ್ಚು ತೆರಿಗೆಗಳನ್ನು ಹಾಕುವುದನ್ನು ನೋಡಿದರೆ ಬಹಳ ಚಿಂತೆಯಾಗುತ್ತಿದೆ. ಜನರು ಉಣ್ಣುವ ಅನ್ನದಮೇಲೆ, ಹಾಕಿ ಕೊಳ್ಳುವ ಬಟ್ಟೆಯ ಮೇಲೆ ಹಾಗು ಇತರ ಸಾಮಾಗ್ರಿಗಳ ಮೇಲೆ ಈ ದಿವಸ ತೆರಿಗೆ ಹಾಕುತ್ತಾ ಇರುವುದರಿಂದ ಜನರು ಬಹಳ ಕಳವಳಕ್ಕೀಡಾಗಿದ್ದಾರೆ. ಸರಕಾರದವರು ಕೊಡುವ ಸಾಲದ ನೀತಿಯ ಬಗ್ಗೆ ಒಂದೆರಡು ಅಂಶಗಳನ್ನು ಎತ್ತಿ ತೋರಿಸುತ್ತೇನೆ. ಬಂಗಾರದ ನಿಯಂತ್ರಣ ಬಂದ ಮೇಲೆ ಅಕ್ಕಸಾಲಿಗರಿಗೆ ಕೆಲವು ಸಾಲ ಮತ್ತು ಸೌಲತ್ತುಗಳನ್ನು ಕೊಡುತ್ತಿದ್ದಾರೆ. ಆದರೆ ಅರ್ಜಿ ಕೊಟ್ಟ ಮೇಲೆ ಸಕಾಲದಲ್ಲಿ ಸರಿಯಾಗಿ ಅದು ಅವರಿಗೆ ಒದಗಲಿಲ್ಲ. ಆದುದರಿಂದ ಆದಷ್ಟು ಮಟ್ಟಿಗೆ ಅವರಿಗೆ ಸಲೀಸಾಗಿ ಸಾಲ ವಗೈರೆ ದೊರೆಯುವಂತೆ ಏರ್ಪಾಡು ಮಾಡಬೇಕೆಂದು ಸಲಹೆಮಾಡುತ್ತೇನೆ. ಅಲ್ಲದೆ ಅವರಿಗೆ ಮತ್ತು ಅವರ ಮಕ್ಕಳಿಗೆ ಔದ್ಯೋಗಿಕವಾಗಿ ತರಪೇತಿ ಕೊಡುವ ನೀತಿಯಲ್ಲಿ ಕೆಲವು ಲೋಪ ದೋಷಗಳಿವೆ. ಬಂಗಾರ ನಿಯಂತ್ರಣವಾದನಂತರ ನಮ್ಮ ರಾಜ್ಯದಲ್ಲಿ ಎಷ್ಟು ಅಕ್ಕಸಾಲಿಗರ ಮಕ್ಕಳಿಗೆ ಉದ್ಯೋಗ ಕೊಡಿಸಲು ಪ್ರಯತ್ನ ಮಾಡಿದ್ದೀರಿ? ಅವರಿಗೆ ಕೊಟ್ಟಿರುವ ಸಾಲ ಸಹ ಸರಿಯಾಗಿ ದೊರೆಯುವಂತೆ ಮಾಡುವುದರಲ್ಲಿ ಕೂಡ ವಿಫಲರಾಗಿದ್ದೀರಿ. ಇನ್ನುಮೇಲಾದರೂ ಕೂಡ ಸರಕಾರ ಅವರಿಗೆ ಸಕಾಲದಲ್ಲಿ ಹಣ, ಸಾಲದ ರೂಪದಲ್ಲಿ ಕೊಡುವ ಸಾಮಾಗ್ರಿ ಉದ್ಯೋಗಕ್ಕೆ ಬೇಕಾದ ಕಚ್ಚಾಮಾಲು ಮುಂತಾದುವನ್ನು ಕೊಟ್ಟು ಅವರನ್ನು ಪ್ರಗತಿಮಾಡುವುದಕ್ಕೆ ಆದ್ಯತೆ ಕೊಡಬೇಕೆಂದು ಸಲಹೆಮಾಡುತ್ತೇನೆ.

ಇನ್ನು ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಗ್ಗೆ ಒಂದು ಸಲಹೆ ಮಾಡುತ್ತೇನೆ. ತುರ್ತು ಪರಿಸ್ಥಿತಿಯ ಸಲುವಾಗಿ ಆಹಾರದ ಅಭಾವದಿಂದ ಸರಕಾರದವರು ಸರ್ವ ರೀತಿಯಿಂದ ವ್ಯವಸಾಯ

ಗಾರನಿಗೆ ಈ ದಿವಸ ಉತ್ತೇಜನ ಕೊಡುತ್ತಿದ್ದಾರೆ. ಈ ಉದ್ದೇಶದಿಂದ ಎಲ್ಲಿಯವರೆಗೆ ಆಹಾರದಲ್ಲಿ ದೇಶ ಸ್ವಾವಲಂಬಿಯಾಗುವುದಿಲ್ಲವೋ ಅಲ್ಲಿಯವರೆಗೆ ವ್ಯವಸಾಯದ ವರಮಾನ ತೆರಿಗೆಯನ್ನು ವಜಾ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಏಕೆಂದರೆ ಇದರಿಂದ ವ್ಯವಸಾಯಗಾರ ಸರಿಯಾಗಿ ಬೆಳೆಯುವುದಕ್ಕೆ ಉತ್ತೇಜನ ಕೊಟ್ಟಂತಾಗುತ್ತದೆ. ರೈತರಿಗೆ ಮೇಲಿಂದ ಮೇಲೆ ತೆರಿಗೆಗಳನ್ನು ಹೆಚ್ಚಾಗಿ ಹಾಕುತ್ತಿದ್ದಾರೆ. ಆಹಾರದಲ್ಲಿ ನಾವು ಸ್ವಾವಲಂಬಿಗಳಾಗುವವರೆಗಾದರೂ ಕೂಡ ಈ ತೆರೆಗೆ ಹೆಚ್ಚಿಸುವ ನೀತಿಯನ್ನು ಸ್ಥಗಿತಗೊಳಿಸಬೇಕು.

ಪಾನನಿರೋಧದ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದರೆ, ನಮ್ಮ ರಾಜ್ಯದಲ್ಲಿ ಈಗಾಗಲೆ ಪಾನನಿರೋಧದ ನೀತಿಯನ್ನೊಪ್ಪಿದೇವೆ. ಆದರೆ ಸರಕಾರ ಆ ಸಂಬಂಧವಾಗಿ ಪ್ರತಿ ಹಳ್ಳಿಯಲ್ಲೂ ಪ್ರಚಾರಕಾರ್ಯವನ್ನು ಸರಿಯಾಗಿ ಮಾಡಿಲ್ಲ. ಪಾನನಿರೋಧ ಕಾರ್ಯದಲ್ಲಿ ತೊಡಗಿರುವ ಅಧಿಕಾರಿಗಳು ತಪ್ಪು ಮಾಡಿದಾಗ ಅವರಿಗೆ ತಕ್ಕ ಶಿಕ್ಷೆ ಮಾಡುತ್ತಿಲ್ಲ, ಹೀಗಾಗಿ ಅವರು ಸರಿಯಾಗಿ ಸಹಕರಿಸುತ್ತಿಲ್ಲ. ಟೇಕ್‌ಚಂದ್‌ರವರ ವರದಿಯಿಂದ ಇದು ಗೊತ್ತಾಗುತ್ತದೆ.

11-30 P.M.

ನಮ್ಮ ಭಾಗದಲ್ಲಿ ಗದಗ, ಹುಬ್ಬಳ್ಳಿ, ಬೆಳಗಾಂವ, ಬಿಜಾಪುರ ಮೊದಲಾದ ಪಟ್ಟಣಗಳಲ್ಲಿ ಇವತ್ತಿನ ದಿವಸ ಕಳ್ಳಭಟ್ಟಿ ಸರಾಯಿ ಗಡಂಗ ಕಾಣುವ ಪರಿಸ್ಥಿತಿ ಬಂದಿದೆ. 50-60 ಕೊಡ ಕಳ್ಳಬಟ್ಟಿ ಸರಾಯಿ ಇಟ್ಟುಕೊಂಡು ಮಾರಾಟ ಮಾಡುವ ಚಿತ್ರ ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದರೆ ಇಂದು ದೇಶದಲ್ಲಿ ಕಳ್ಳಭಟ್ಟಿ ಸರಾಯಿ ತಯಾರ್ಮಾಡಿ ಮಾರಾಟ ಮಾಡುವುದಲ್ಲದೆ ಬೇರೆ ಕಡೆ ಕಳಿಸ ತಕ್ಕಂಥ ಎಕ್ಸ್‌ಪೋರ್ಟ್ ಸೆಂಟರ್ಸ್ ಆಗುತ್ತಿರುವುದು ಕಂಡುಬರುತ್ತಿದೆ. ಆದುದರಿಂದ ಸರಿಯಾದ ರೀತಿಯಲ್ಲಿ ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇಲ್ಲದೇ ಹೋದರೆ ನೀವು ವಿಫಲ ರಾಗುತ್ತೀರಿ. ಅನೀತಿ ಬೆಳೆದುಕೊಂಡು ಬರುತ್ತದೆ. ನೀವು ರಚನೆ ಮಾಡಿದ ಸ್ಟೇಟ್ ಪ್ರೊಹಿಬಿಷನ್ ಬೋರ್ಡ್ ಇದರ ಕಾರ್ಯವೇನೋ ಗೊತ್ತಿಲ್ಲ. ಇದರ ಸಿಬ್ಬಂದಿ ಹೆಚ್ಚಾಗಿ ಇದೆ. ಅದಷ್ಟು ಮಟ್ಟಿಗೆ ಮಿತವ್ಯಯ ಮಾಡುವ ದೃಷ್ಟಿಯಿಂದ ಈ ಬೋರ್ಡ್ ತೆಗೆದು ಹಾಕಬೇಕು. ಇದರಿಂದ ಅಪಾರ ಹಾನಿ ಇಲ್ಲ. ಕಳ್ಳಭಟ್ಟಿ ಸರಾಯಿ ಮಾಡತಕ್ಕ ಜನರ ವಿಚಾರದಲ್ಲಿ ಯೋಗ್ಯ ಕ್ರಮ ತೆಗೆದುಕೊಳ್ಳಬೇಕು. ಕಳ್ಳಭಟ್ಟಿ ಸರಾಯಿ ವ್ಯವಹಾರ ಮಾಡತಕ್ಕವರು ದೊಡ್ಡ ದೊಡ್ಡ ಪಟ್ಟಣಗಳಲ್ಲಿದ್ದುಕೊಂಡು ಹೆಚ್ಚಾಗಿ ಬಲಿಷ್ಠರಾಗಿದ್ದಾರೆ. ಅಮಲ್ದಾರರು ಅವರನ್ನು ಹಿಡಿದು ಎಷ್ಟು ಪ್ರಬಲವಾದಂಥ ಕೇಸು ಹಾಕಿದ್ದರೂ ಕೂಡ ಅವರು ಲಾಯರ್ಸ್ ಇಟ್ಟುಕೊಂಡು ಕೇಸು ಕೆಡಿಸುವ ಪರಿಸ್ಥಿತಿ ಬಂದಿದೆ. ಅವರು ಅಧಿಕಾರಿ ಗಳ ಮೇಲೆ ಸಹ ಇನ್‌ಫ್ಲುಯನ್ಸ್ ತರುತ್ತಾರೆ. ಆದುದರಿಂದ ಬಹು ಚಾಣಾಕ್ಷತನದಿಂದ ಈ ದೋಷ ನಿವಾರಣೆ ಮಾಡಲು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಸೇಲ್ಸ್‌ಟ್ಯಾಕ್ಸ್ ವಿಚಾರದಲ್ಲಿ ಸೇಲ್ಸ್‌ಟ್ಯಾಕ್ಸ್ ಟ್ರಿಬ್ಯೂನಲ್ಲಿಗೆ ಹೆಚ್ಚಾಗಿ ಕೇಸುಗಳಿಲ್ಲ. ಅದುದರಿಂದ ಈ ಕೆಲಸವನ್ನು ರೆವೆನ್ಯೂ ಟ್ರಿಬ್ಯೂನಲ್ಲಿಗೆ ವರ್ಗಾವಣೆ ಮಾಡಿ ಇದರಿಂದ ಉಳಿತಾಯ ವಾಗತಕ್ಕಂಥ ಹಣವನ್ನು ಬೇರೆ ಕಾರ್ಯಕ್ಕೆ ಉಪಯೋಗಿಸ ಬೇಕೆಂದು ನಾನು ಸಲಹೆ ಮಾಡು ತ್ತೇನೆ.

ಇನ್ನು ಪೇನ್‌ಷನ್‌ದಾರರ ವಿಚಾರ. ಈ ವಿಷಯದ ಬಗ್ಗೆ ಶ್ರೀಮಾನ್ ಕೊಳ್ಳೇಬೈಲ್ ಅವರು ಹೇಳಿದ್ದಾರೆ. ನಾನೂ ಕೂಡ ಒಂದು ಸಲಹೆ ಮಾಡುತ್ತೇನೆ. ಒಬ್ಬ ನವಕನು ರಿಟೈರ್ ಆಗುವುದಕ್ಕೆ ಆರು ತಿಂಗಳು ಮುಂದೆ ಪೆನ್‌ಷನ್ ಪೇಪರ್ಸ್ ತಯಾರ್ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸ ಬೇಕು. ಅಂದರೆ ರಿಟೈರ್ ಆದ ತಕ್ಷಣ ಅವನಿಗೆ ಸಿಗಬೇಕಾದ ಹಣ ದೊರೆಯುವ ವ್ಯವಸ್ಥೆ ಸರಕಾರ ಮಾಡಬೇಕು. ಪೆನ್‌ಷನ್ ಆದ ಮೇಲೆ ಅವರಿಗೆ ಯಾವ ಚೈತನ್ಯವಿರುವುದಿಲ್ಲ. ಅವರಿಗೆ ದೊರೆ ಯುವ ಹಣದ ಮೇಲೆ ಅವರು ಅವಲಂಬಿಸಿರುತ್ತಾರೆ. ಆದುದರಿಂದ ಪೆನ್‌ಷನ್‌ದಾರರಿಗೆ ಸಕಾಲದಲ್ಲಿ ಹಣ ಸಿಕ್ಕುವ ಹಾಗೆ ಮಾಡಬೇಕೆಂದು ಸಲಹೆ ಮಾಡಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಸರಕಾರ ದವರು ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಹೇಳಲು ಇಷ್ಟ ಪಡುತ್ತೇನೆ. ಮೊದಲನೆಯದಾಗಿ ವೃದ್ಧಾಪ್ಯ ವಿಶ್ರಾಂತಿ ವೇತನವನ್ನು ನೀಡುವಲ್ಲಿ ಸರಕಾರದವರು ಅಲಕ್ಷ್ಯ ಮನೋಭಾವ ತಳೆದಿರುವುದರಿಂದ ಅಕ್ಷಮ್ಯ ಅಪರಾಧ ಮಾಡಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ದೇವರು ವರ ಕೊಟ್ಟರೂ ಕೂಡ ಪೂಜಾರಿ ಕೊಡುವುದಿಲ್ಲ ಎಂಬ ಗಾದೆಯ ಮಾತಿನಂತೆ ಆಗಿದೆ. ಕಳೆದ ವರ್ಷ ಸೋಷಿಯಲ್ ಸೆಕ್ಯುರಿಟಿ ಸ್ಕೀಂಗಾಗಿ 35 ಲಕ್ಷ ರೂಪಾಯಿ ಈ ಬಾಬಿಗೆ ಕೊಟ್ಟಿತ್ತು. ಮುಂದಿನ ವರ್ಷ ಈ ಬಾಬಿಗೆ 9 ಲಕ್ಷ ರೂಪಾಯಿ ಕಾಣಿಸಿದ್ದೀರಿ. ಮುಂದುವರಿದ ಎಲ್ಲ ದೇಶಗಳಲ್ಲಿ ಅರವತ್ತು ವರ್ಷ ವಯಸ್ಸು ಮೀರಿದ ನಂತರ ಪ್ರತಿಯೊಬ್ಬರಿಗೂ

(ಶ್ರೀ ಎಸ್. ಗೋಪಾಲಗೌಡ)

ವೃದ್ಧಾಪ್ಯ ವಿಶ್ರಾಂತಿ ವೇತನ ಇದೆ. ಹಿಂದೆ ಈ ವಿಷಯ ಚರ್ಚೆಗೆ ಬಂದಾಗ್ಗೆ ಆಗಿನ ಹಣಕಾಸಿನ ಮಂತ್ರಿಗಳಾಗಿದ್ದ ಶ್ರೀ ಜತ್ತಿಯವರಿಗೆ ನಾನು ಹೇಳಿದ್ದೇನೆ. ಹೇಗೆ ಕೊಡಬೇಕು ಅಂದರೆ, ವಯಸ್ಸು ಕಡಿಮೆ ಮಾಡಬೇಕು ಮತ್ತು ಪೆನಷನ್ ಹಣ ಜಾಸ್ತಿಮಾಡಬೇಕೆಂದು ಕೇಳಿದ್ದೇನೆ. ಇದರ ಬಗ್ಗೆ ಉದಾರವಾಗಿ ರೂಲ್ಸ್ ಮಾಡಿ ಪ್ರತಿಯೊಂದು ಸಬ್ ಡಿವಿಜನ್ನಿಗೆ ಪ್ರತಿಯೊಂದು ತಾಲ್ಲೂಕಿಗೆ ಕಳಿಸಿ ಇಂಥ ಜನ ಎಷ್ಟು ಸಿಕ್ಕಬಹುದು ಎಂಬುದನ್ನು ತಿಳಿದುಕೊಂಡು ಈ ಹಣ ಕೊಡುವ ವ್ಯವಸ್ಥೆ ಮಾಡ ಬಹುದು. ಇದುವರೆಗೆ ಎಷ್ಟು ಕೊಟ್ಟಿದ್ದೀರಿ? ಒಂದು ವೇಳೆ ಕೊಡದೇ ಇದ್ದರೆ ಅಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈ ಯೋಜನೆ ಬರಬಹುದು ಎಂದು ಎಷ್ಟೋ ಜನ ವಯಸ್ಸಾದ ವರು ನಿರೀಕ್ಷಿಸುತ್ತಿದ್ದಾರೆ, ಹಾಗೂ ನಿರೀಕ್ಷಿಸುತ್ತಾ ಸತ್ತು ಹೋಗಿದ್ದಾರೆ. ಶ್ರೀಮಾನ್ ಕೊಳ್ಳೇ ಬೈಲ್ ಅವರು ಒಂದು ಕಥೆ ಹೇಳಿದರು. ನಾನೂ ಒಂದು ಕಥೆ ಹೇಳುತ್ತೇನೆ. ಶ್ರೀ ಗುಂಡೂ ರಾಯರು ಎಂದು ಒಬ್ಬರು ಇದ್ದರು. ಅವರು ಅನೇಕ ವರ್ಷ ಸರ್ಕಾರದ ಸೇವೆ ಮಾಡಿದರು. ಅವರು ಶ್ರೀ ನಿಜಲಿಂಗಪ್ಪನವರನ್ನು ಭೇಟಿಯಾಗಿ ಅವರಿಂದ ಅಭಯ ಪಡೆದರು. ವೃದ್ಧಾಪ್ಯ ವಿಶ್ರಾಂತಿ ವೇತನ ಕೊಡುತ್ತೇವೆಂದು ಅವರಗೆ ಹೇಳಿದ್ದರು. ಅಲ್ಲಿಂದ ಇಲ್ಲಿಯವರೆಗೆ ಅವರು ಮರ ಣೋನ್ಮುಖರಾಗಿದ್ದಾಗಲೂ ಕೂಡ ಅವರಿಗೆ ದೊರೆಯಲಿಲ್ಲ. ಅವರು ಬೆಂಗಳೂರಿಗೆ ಬಂದು ಅವರ ನೆಂಟರ ಮನೆಯಲ್ಲಿ ಇದ್ದರು. ಒಂದು ದಿನ ಬೆಳಿಗ್ಗೆ ನನಗೆ ಟೆಲಿಫೋನ ಮೂಲಕ ಗುಂಡೂರಾಯರು ತೀರಿಕೊಂಡರು ಎಂಬ ಸಮಾಚಾರ ತಿಳಿದು ಬಂತು. ಅದಕ್ಕೂ ಮೊದಲು ನಾನು ಅವರ ಭೇಟಿಗೆ ಹೋದಾಗ್ಗೆ ಅವರು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಕೈ ಮಾಡಿ ತೋರಿಸಿಬಿಟ್ಟು ಹೇಳಿದರು. ದುಡ್ಡು ಬಂದಿದೆಯೋ ಎಂದು ಕೇಳಿದರು. ಅವರು ಮುಂದೆ ಆರು ದಿವಸ ಜೀವಂತ ಇದ್ದರೂ ಕೂಡ ಹಣ ಅವರಿಗೆ ದೊರೆಯಲಿಲ್ಲ. ಇಂಥ ಉದಾಹರಣೆಗಳಿವೆ. ಇಂಥವರಿಗೆ ಸಹಾಯ ಮಾಡುವವರು ಯಾರು ಇರುವುದಿಲ್ಲ. ಅವರಿಗೆ ಯಾವ ಕೆಲಸ ಮಾಡುವುದಕ್ಕೆ ಸಾಧ್ಯವಿರುವುದಿಲ್ಲ. ನಾವು ಏನಾದರೂ ಹತ್ತು ಹದಿನೈದು ರೂಪಾಯಿ ಕೊಡದೇ ಇದ್ದರೆ ಅವರ ಗತಿ ಏನು? ಈ ಬಾಬಿಗೆ ಒದಗಿಸಿದ 35 ಲಕ್ಷ ರೂಪಾಯಿಗಳನ್ನು ಒಬ್ಬ ಮನುಷ್ಯನಿಗೆ ಒಂದು ತಿಂಗಳಿಗೆ 15 ರೂಪಾಯಿಯಂತೆ ಕೊಟ್ಟಿದ್ದರೆ 50-60 ಸಾವಿರ ಜನಕ್ಕೆ ಕೊಡಬಹುದಾಗಿತ್ತು. ಇದೊಂದು ದೊಡ್ಡ ಅನ್ಯಾಯ ಮಾಡಿದ್ದೀರಿ. ಈ ವಿಷಯದಲ್ಲಿ ತಡ ಮಾಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ. ವಯಸ್ಸಾದ ವರು ಹೆಚ್ಚುಕಾಲ ಬದುಕುವುದಕ್ಕಾಗುವುದಿಲ್ಲ. ಈ ಯೋಜನೆ ವಿಳಂಬ ಮಾಡುವುದರಿಂದ ಅನ್ಯಾಯ ಮಾಡುತ್ತೀರಿ ಎಂದು ಹೇಳುತ್ತೇನೆ. ಈ ಬಾಬಿಗೆ ಒದಗಿಸಿದ ಹಣ ಇನ್ನೂ ಹೆಚ್ಚು ಮಾಡಬೇಕು. ಇದರ ಬಗ್ಗೆ ವಿಳಂಬ ನೀತಿ ಅನುಸರಿಸುವ ಅಧಿಕಾರಿಗಳು ದೇಶಕ್ಕೆ ದ್ರೋಹ ಮಾಡುತ್ತಿದ್ದಾರೆಂದು ಕೆಟ್ಟ ಶಬ್ದದಲ್ಲಿ ಹೇಳಬೇಕಾಗುತ್ತದೆ. ಅವರು ತಮ್ಮ ಕರ್ತವ್ಯ ಮರೆಯುತ್ತಾರೆ. ಹಾಗೂ ದೇಶಕ್ಕೆ ಅಪಖ್ಯಾತಿ ತರುತ್ತಾರೆ. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಆದರೆ ಅವರು ಏನು ಕೆಲಸ ಮಾಡುವುದಕ್ಕೆ ಇದ್ದಾರೋ ಆ ಕೆಲಸವನ್ನು ಅವರಿಂದ ತೆಗೆದುಕೊಳ್ಳದೇ ಹೋದರೆ ದೇಶದ ಹಿತದೃಷ್ಟಿಯಿಂದ ಅನ್ಯಾಯವಾಗುತ್ತದೆ. ಜನರಿಗೆ ಅನ್ಯಾಯವಾಗುತ್ತದೆ. ಉಪ್ಪು ತಿಂದ ಮನುಷ್ಯ ನೀರು ಕುಡಿಯಲೇ ಬೇಕು. ಈ ವಿಚಾರದಲ್ಲಿ ಹೆಚ್ಚು ಹೇಳುವುದಿಲ್ಲ.

ಪೆನ್‌ಷನ್‌ದಾರರು ಏನು ಇದ್ದಾರೆ, ಮತ್ತು ಪೆನ್‌ಷನ್ ಆದವರಿಗೆ ಅವರು ಆದ ದಿವಸದಿಂದ ಮುಂದಿನ ತಿಂಗಳೊಳಗೆ ಅವರ ಪೆನ್‌ಷನ್ ಸಿಗಬೇಕು ಎನ್ನುವ ವ್ಯವಸ್ಥೆ ಮಾಡುತ್ತೇನೆಂದು ಶ್ರೀಮಾನ್ ಜತ್ತಿಯವರು ಹೇಳಿದ್ದರು, ಅದು ಬಹಳ ಸಂತೋಷದ ವಿಷಯ. ಅದನ್ನು ಎಷ್ಟರ ಮಟ್ಟಿಗೆ ಕಾರ್ಯಗತ ಮಾಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಬಯಸುತ್ತೇನೆ. ಪೆನ್‌ಷನ್‌ದಾರರಿಗೆ ಇನ್ನು ಮುಂದಾದರೂ ತ್ವರಿತವಾಗಿ ಪೆನ್‌ಷನ್ ಸಿಗುವ ಹಾಗೆ ಏರ್ಪಾಡು ಮಾಡಬೇಕೆಂದು ಕಳಕಳಿ ಯಿಂದ ಕೇಳಿಕೊಳ್ಳುತ್ತೇನೆ. ಜೊತೆಗೆ ತುಟ್ಟಿಭತ್ಯ ಮತ್ತು ಅವರ ಸ್ಕೇಲುಗಳನ್ನು ಹೆಚ್ಚಿಸುವ ಬಗ್ಗೆ ಸರ್ಕಾರ ಪುನರ್‌ವಿಮರ್ಶೆ ಮಾಡಬೇಕು. ಇದಕ್ಕಾಗಿ ಸರ್ಕಾರದವರು ಈಗ ಸುಮಾರು 2 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಅದನ್ನು ಜಾಸ್ತಿ ಮಾಡಬೇಕು. ಅವರಿಗೂ ಬೆಲೆಗಳು ಏರಿವೆ, ಅವರ ಜೀವನವೂ ಕಷ್ಟವಾಗಿದೆ, ಅವರ ಬೇಡಿಕೆಗಳನ್ನು ಪರಿಶೀಲನೆ ಮಾಡ ಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ತಿಳಿಸುತ್ತೇನೆ.

ಇನ್ನು ಈ ಸಾಲ ಮತ್ತು ಮುಂಗಡಗಳು ಎನ್ನುವ ಬಾಬಿನಲ್ಲಿ ಸಾಲಗಳು ಏನೋ ನಾವು ಕೊಡುತ್ತಲೇ ಇದ್ದೇವೆ. ಆದರೆ ವಸೂಲಿ ಮಾತ್ರ ಹೆಚ್ಚುಕಡಿಮೆ ಹಾಗೆಯೇ ನಿಂತುಬಿಟ್ಟಿದೆ ಎಂದು ಮಾನ್ಯ ಸಚಿವರು ಪ್ರಸ್ತಾಪ ಮಾಡಿದ್ದಾರೆ. ವಸೂಲಿಗಳನ್ನು ಏನೋ ಮಾಡಬಹುದು, ಆದರೆ ತೀರ ಬಡವ ಸಾಲ ಕೊಡದಿದ್ದಾಗ, ಅವನ ಮನೆ ಹರಾಜು ಹಾಕಿಸುವುದಕ್ಕೆ, ಅವನ ಮನೆ ಜಪ್ತಿ ಮಾಡು

ವುದಕ್ಕೆ, ಅವನ ಎತ್ತುಗಳನ್ನು ಹರಾಜು ಮಾಡಿಸುವುದಕ್ಕೆ ಅಧಿಕಾರಿಗಳು ಹೋಗುತ್ತಾರೆ. ಕೊಡುವ ಸಾಮರ್ಥ್ಯವಿದ್ದವರು, ಸ್ವಲ್ಪ ಪ್ರಭಾವಶಾಲಿ ಜನಗಳು ಇದ್ದರೆ ಅವರ ಹತ್ತಿರ ಪ್ರಸ್ತಾಪ ಮಾಡುವುದೇ ಇಲ್ಲ. ಸಾಲಗಳು ವಸೂಲಿಯಾಗದಿರುವುದಕ್ಕೆ ಇದೇ ಕಾರಣ. ಇದರ ಬಗ್ಗೆ ಸರ್ಕಾರದವರು ಒಂದು ಕಟ್ಟುನಿಟ್ಟಾದ ಕ್ರಮವನ್ನು ಅನುಸರಿಸಬೇಕು ಎನ್ನುವುದರ ಬಗ್ಗೆ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಜೀವವಿಮಾ ನಿಗದಿಯಿಂದ 100 ಲಕ್ಷ ರೂಪಾಯಿಗಳನ್ನು ಮಾತ್ರ ಸಾಲದ ರೂಪದಲ್ಲಿ ಈ ವಸತಿ ಸೌಕರ್ಯಕ್ಕಾಗಿ ಒದಗಿಸುತ್ತೇವೆಂದು ಹೇಳಿದ್ದೀರಿ. ಈ ಹಣ ನನಗೆ ತಿಳಿದಮಟ್ಟಿಗೆ ಸರ್ಕಾರದವರು ಕೈಗೊಂಡಿರತಕ್ಕ ಯೋಜನೆಗಳಿಗೆ ಏನೇನೂ ಸಾಲದು. ಈ ಬಗ್ಗೆ ಜೀವವಿಮಾ ಕಾರ್ಪೊರೇಷನ್ ಅವರಿಂದ ಹೆಚ್ಚಿಗೆ ಹಣ ತಂದುಕೊಟ್ಟು ಈಗ ಅರ್ಧಮರ್ಧವಾಗಿರತಕ್ಕಂಥ ಮನೆಗಳನ್ನು ಕಟ್ಟಲು, ಮತ್ತು ಏನೇನೋ ಕಾರಣಗಳಿಂದ ಹಾಗೆಯೇ ಉಳಿದಿರತಕ್ಕಂಥ ಸಾಲಗಳನ್ನು ಮಂಜೂರು ಮಾಡಿ, ಇದುವರೆಗೆ ಈ ಯೋಜನೆಯಲ್ಲಿ ವಿನಿಯೋಗಿಸಿದಂಥ ಹಣವನ್ನು ತಾವು ಅವರಿಗೆ ಮನೆಯ ರೂಪದಲ್ಲಿ ಉಳಿದುಕೊಳ್ಳುವಂತೆ ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಪ್ರಾಹಿಬಿಷನ್ ವಿಚಾರದಲ್ಲಿ ಈ ಸಂದರ್ಭದಲ್ಲಿ ನಾನು ಪ್ರಸ್ತಾಪ ಮಾಡಬಾರದೆಂದು ಇದ್ದೆ. ಆದರೆ ಮಾನ್ಯ ಸದಸ್ಯರಿಬ್ಬರು ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ವಿಷಯವನ್ನು ಪ್ರತ್ಯೇಕವಾಗಿ ಕೂಲಂಕಷವಾಗಿ ಈ ಮನೆಯಲ್ಲಿ ಮತ್ತು ಹೊರಗಡೆ ವಿಚಾರ ಮಾಡಬೇಕಾದ್ದು ಬಹಳ ಅವಶ್ಯಕ ಇದೆ. ಇದು ಒಂದು ಸಂಶಯಾತ್ಮಕವಾದ ಪ್ರಶ್ನೆಯಾಗಿ ದೇಶದ ಮುಂದೆ ನಿಂತಿದೆ. ನನ್ನ ಅಭಿಪ್ರಾಯವನ್ನು ಕೆಲವೇ ಮಾತುಗಳಲ್ಲಿ ಹೇಳಬೇಕೆಂದು ಇಷ್ಟಪಡುತ್ತೇನೆ. ಇಂಥ ಒಂದು ಸಂಶಯಾತ್ಮಕವಾದ ವಿಷಯದ ಬಗ್ಗೆ ಸರ್ಕಾರ ಸಮಗ್ರವಾದ ನೀತಿಯನ್ನು ಅನುಸರಿಸಬೇಕಾದ್ದು ಬಹಳ ಒಳ್ಳೆಯದು. ಇಂಟಿಗ್ರೇಟೆಡ್ ಪಾಲಿಸಿ ಅಂದರೆ ಒಂದು ರಾಷ್ಟ್ರದ ಧೋರಣೆ ಇದಕ್ಕೆ ಬೇಕು. ರಾಜ್ಯ ರಾಜ್ಯಕ್ಕೂ ಒಂದು ಧೋರಣೆಯನ್ನು ಇಟ್ಟುಕೊಳ್ಳತಕ್ಕಂಥದು ಸೂಕ್ತವಲ್ಲ. ಕೇಂದ್ರ ಸರ್ಕಾರದವರು ಇದರ ಬಗ್ಗೆ ತೀರ್ಮಾನ ಮಾಡಬೇಕು. ಈ ವಿಷಯವನ್ನು ಕೇಂದ್ರದ ಕನ್‌ಕರೆಂಟ್ ಲಿಸ್ಟ್‌ನಲ್ಲಿ ಸೇರಿಸುವುದು ಬಹಳ ಅವಶ್ಯಕ. ಇನ್ನೂ ಒಂದು ಎಂದರೆ, ನನ್ನ ಮಾನ್ಯ ಸ್ನೇಹಿತರಾದ ಅನೇಕರು, ಸರ್ವೋದಯದವರು ಮೊನ್ನೆತಾನೆ ಪಾನನಿರೋಧದ ಬಗ್ಗೆ ಕೆಲವು ರೂಲ್ಸ್‌ಗಳನ್ನು ಸಡಿಲಗೊಳಿಸಿದ್ದಾರೆ ಎಂದು ಉಪವಾಸ ಮಾಡಿದರು. ಎಷ್ಟರ ಮಟ್ಟಿಗೆ ಅವರು ಮಾಡಿರುವುದು ಸರಿ ಎಂದೂ ಕಂಡರೂ, ಬೆಂಗಳೂರಿನಲ್ಲಿ ಒಂದು ಕಡೆ ಪಾನದ ಬಗ್ಗೆ ಅವಕಾಶವಿದ್ದರೂ ಅದರ ವಿರುದ್ಧ ಉಪವಾಸ ಮಾಡಲಿಲ್ಲ. ಸ್ವಾತಂತ್ರ್ಯ ಬಂದ ಮೇಲೆ ಅನೇಕ ಹೊಸ ಹೊಸ ಬ್ರೂಯರಿಗಳಿಗೆ ಲಿಕ್ಕರ್ ಉತ್ಪಾದನೆಗೆ ಲೈಸನ್ಸ್ ಕೊಟ್ಟಾಗಲೂ ಇದರ ವಿರುದ್ಧ ಉಪವಾಸ ಮಾಡಲಿಲ್ಲ. ಇನ್ನು ಅನೇಕ ಸಂದರ್ಭಗಳಲ್ಲಿ ಏನನ್ನೂ ಮಾಡಲಿಲ್ಲ. ಇವತ್ತು ಪ್ರಾಹಿಬಿಷನ್ ಅಂತ ಹೇಳುತ್ತೀರಿ, ಸ್ವಾತಂತ್ರ್ಯ ಬಂದ ಮೇಲೆ ಎಷ್ಟು ಹೊಸ ಲಿಕರ್ ಅಂಗಡಿಗಳಿಗೆ ಇಂಡಿಯಾ ಸರ್ಕಾರದವರು ಮತ್ತು ಮೈಸೂರು ಸರ್ಕಾರದವರು ಲೈಸನ್ಸ್ ಕೊಟ್ಟಿದ್ದೀರಿ. ಈ ಬ್ರೂಯರಿಗಳನ್ನು ನೋಡಿದರೆ ಅವರು ಸಾರಾಯಿ ಮಾಡುತ್ತಿಲ್ಲ, ದುಡ್ಡಿನ ಜಾಫ ಹಾಕುತ್ತಿದ್ದಾರೆ. ಅಷ್ಟು ಲಾಭ ಪಡೆಯುತ್ತಾರೆಂದು ಕಾಣಿಸುತ್ತದೆ. ದುಡ್ಡಿನ ವ್ಯಾಪಾರವಾಗಿದೆ. ಉತ್ಪಾದನೆ ವಿಷಯದಲ್ಲಿ ಒಂದು ನೀತಿ ಇರಬೇಕು, ಅದನ್ನು ಸಂಗ್ರಹಿಸುವ ವಿಚಾರದ ಬಗೆ ಒಂದು ನೀತಿ ಇರಬೇಕು, ಹಂಚುವ ಬಗ್ಗೆ ಒಂದು ನೀತಿ ಇರಬೇಕು, ಒಂದು ಸಮಗ್ರವಾದ ನೀತಿ ಇರಬೇಕು. ಮಹಾತ್ಮ ಗಾಂಧಿಯವರ ಅಭಿಪ್ರಾಯಗಳನ್ನು ಒಪ್ಪುತ್ತೇನೆ. ನಾವು ದೇಶದಲ್ಲಿರುವ ಬಡತನವನ್ನು ಹೋಗಲಾಡಿಸುವುದಕ್ಕಾಗುವುದಿಲ್ಲ, ವಸತಿ ಸೌಕರ್ಯವನ್ನು ಒದಗಿಸಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ ಹೆಂಡ ಮಾರಿ ಹೆಂಡದಿಂದ ಬಂದ ಹಣವನ್ನು ಇದಕ್ಕೆ ಉಪಯೋಗಿಸುತ್ತೇವೆ ಎಂದು ಸರ್ಕಾರದವರು ಹೇಳುವ ಮಾತನ್ನು ಯಾರೂ ಒಪ್ಪುವುದಿಲ್ಲ. ಇದು ಸಾಧ್ಯವಾಗದ ಮಾತು. ದೇಶದಲ್ಲಿ ಕುಡಿಯಬಾರದು ಎಂದು ಕಾನೂನು ಮಾಡಿ, ಹೊರಗಡೆಗೆ ತೆಗೆದುಕೊಂಡು ಹೋಗುವುದಕ್ಕೆ ಪರ್‌ಮಿಷನ್ ಕೊಡಬೇಕೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಇಂಥ ತಾರತಮ್ಯಗಳನ್ನು ಮಾಡಬೇಕಾಗುತ್ತದೆ. ಇನ್ನು ಉತ್ಪಾದನೆ ವಿಷಯದಲ್ಲಿ ನಿಮ್ಮ ಅಭಿಪ್ರಾಯ ಏನು ಎಂಬುದನ್ನು ವಿಚಾರ ಮಾಡಬೇಕಾಗಿದೆ. ಬೇರೆಯವರಿಗೆ ಲೈಸನ್ಸ್ ಕೊಟ್ಟು ಕುಡಿಯುವುದಕ್ಕೆ ಅವಕಾಶ ಮಾಡಬೇಕು ಎಂದು ಹೇಳಿದೆ. ಶ್ರೀಮಾನ್ ಕೊಳ್ಳಿಬೈಲ್ ಅವರು ಹೇಳಿದರು, ಈ ವಿಷಯದ ಬಗ್ಗೆ ಸರ್ಕಾರ ಒಂದು ಕಾನೂನನ್ನು ಮಾಡಿ ಯಾರಿಗೆ ಕುಡಿಯದೇ ಇರತಕ್ಕಂಥ ವಿಷಯದಲ್ಲಿ ನಂಬಿಕೆಯಿಲ್ಲವೋ ಅಂಥವರು ಅದನ್ನು ಮೊಟ್ಟಮೊದಲು ಜಾರಿಗೆ ತರಬೇಕು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಇಲ್ಲಿ ಹೋದ ವರ್ಷ ಸುಮಾರು 36 ಸಾವಿರ ಜನರಿಗೆ ಕದ್ದು ಕುಡಿದಿದ್ದಕ್ಕೆ, 30 ಸಾವಿರ ಜನ ಹೆಂಡವನ್ನು ಕದ್ದು ಸಾಗಿಸುತ್ತಿದ್ದಾಗ, ಇನ್ನೂ ಎಷ್ಟೋ ಸಾವಿರ ಜನರಿಗೆ ಇನ್ನಿತರ ಕಾರಣಗಳಿಗಾಗಿ ಜೈಲ್ ಶಿಕ್ಷೆಯಾಗಿದೆಯೆಂದು ಹೇಳಿದ್ದಾರೆ. ಇದನ್ನು ನೋಡಿದರೆ ಈ ಒಂದು ಕಾನೂನಿನಿಂದ

(ಶ್ರೀ ಎಸ್. ಗೋಪಾಲಗೌಡ)

ಪೋಲೀಸರ ನೈತಿಕ ಪತನವಾಗುವುದಕ್ಕೆ ಅವಕಾಶ ಕೊಟ್ಟಿರುವುದಲ್ಲದೆವಿಫಲವಾದ ಧೋರಣೆಯನ್ನು ನಾವು ಯಶಸ್ವಿಯಾಗಿ ಅರಿತುಕೊಂಡು ಮುಂದೆ ಹೋಗುತ್ತಿದ್ದೇವೆ ಎಂದು ಕಾಣಿಸುತ್ತದೆ. ಸಮಾಗ್ರವಾಗಿ ಯೂನಿವರ್ಸಲ್ಲಾಗಿ ಮನುಷ್ಯನ ಸ್ವಭಾವವನ್ನು ಗಣನೆಗೆ ತೆಗೆದುಕೊಂಡು ಈ ಧೋರಣೆಯನ್ನು ಕಲ್ಪಿಸತಕ್ಕಂಥ ಧೈರ್ಯವನ್ನು ಸರ್ಕಾರದವರು, ಜನಗಳೂ ಕೂಡಿ ಮಾಡಬೇಕು. ಈ ವಿಷಯದಲ್ಲಿ ಸರ್ಕಾರ ಏನು ನೀತಿಯನ್ನು ಅನುಸರಿಸಿದ್ದಾರೆ, ಅದು ಯಾವ ದೃಷ್ಟಿಯಿಂದಲೂ ಸಮರ್ಪಕವಾಗಿಲ್ಲ, ಇದರಲ್ಲಿ ಪರಿವರ್ತನೆ ಮಾಡುವ ಅವಶ್ಯಕತೆ ಬಹಳವಿದೆ ಎಂದು ಹೇಳಿ ಈ ಬೇಡಿಕೆಗಳನ್ನು ತೀವ್ರವಾಗಿ ವಿರೋಧಿಸುತ್ತೇನೆ. ನಾನು ಏನು ಕೆಲವು ಖೋತಾ ಸೂಚನೆಗಳನ್ನು ಕೊಟ್ಟಿದ್ದೇನೆ, ಅವುಗಳ ಬಗ್ಗೆ ಮಾತನಾಡಲು ಸಮಯವಿಲ್ಲದೆಯಿರುವುದರಿಂದ ವಿವರಣೆ ಮಾಡುವುದಕ್ಕಾಗಿಲ್ಲ. ಸರ್ಕಾರ ಅದರ ಕಡೆ ಸ್ವಲ್ಪ ಗಮನವನ್ನು ವಹಿಸಬೇಕು. ಮತ್ತು ಈ ಖೋತಾ ನಿರ್ಣಯಗಳಿಗೆ ಈ ಸ್ಥಿತಿ ಯಾವಾಗ ಬಂತು, ಅವುಗಳನ್ನು ತಾವು ಈ ಸಭೆಯ ಮುಂದೆ ಮಂಡಿಸುವುದಕ್ಕೆ ಕೂಡ ಅವಕಾಶ ಕೊಟ್ಟಿಲ್ಲ. ಅದು ಕಾಲದ ದೃಷ್ಟಿಯಿಂದ ತಾವು ಹೇಗೆ ಪ್ರೊಸಿಜರ್ ಮಾಡಿದ್ದಿರೋ ಗೊತ್ತಾಗಲಿಲ್ಲ.

Mr. SPEAKER.—The Hon'ble Member may kindly come and meet me in my Chambers.

Sri K. S. SURYANARAYANA RAO (Mysore City).—Mr. Speaker Sir, Within the time limit, I would like to stress only a few points. Sir, by these Demands, we intend to raise tens of crores of rupees. I only wish to add as to how we are disbursing them; as to how the Government is making use of these tax collections; whether they are doing it on proper lines; or what is wrong with us? If there is anything wrong, is there anything wrong in the whole structure. Sir, I would start by saying that we have of late taken to increased taxation year by year on the ground of additional resources required for the plan expenditure. But unfortunately as conceded by the Finance Minister, the non-plan expenditure has been mounting and it is for this purpose that additional taxation is raised. Now that he has assured this House I would take him by his word that the on-plan expenditure would be at the very minimum. I would take it that the additional resources asked for to a large extent may not be required.

Sri RAMAKRISHNA HEGDE.—What about spill-over works?

Sri K. S. SURYANARAYANA RAO.—That is what I said. Rightly or wrongly you have committed mistakes and you have to meet those commitments. My request is let there be no more mistakes during the current year. If you do it, there will be no spill over work for the next year. Sir, so far as these taxes are concerned my point is we need not go to further taxation and if we follow rigid administrative measures, that will be sufficient. With regard to loans and advances, my friends have made a point that Rs. 84 crores and odd are remaining uncollected. If we collect at least 10 or 15 per cent of them, that would give us a good return. What is it that we have done? The Audit Report says it is on the increase, and it is not on the decrease. That is where our Finance Minister possibly finds it difficult to balance the Budget. Therefore he has to come before this House for additional taxation. Therefore, I request him to tighten up collection measures so that not only all the entertainment tax and sales tax arrears are collected but

other arrears as well. There are other arrears due from industrial undertakings, from the municipalities, local boards etc. and if you collect at least as I said 10 per cent, Rs. 8 crores and odd would be the realisation. Therefore, the tax collection is important but the arrears collection is equally important. For that no attempt seems to have been made to collect arrears. The other point which I would like to make is we have given loans and advances for industrial undertakings. I am not concerned about the returns from those Industries. About that I will deal with at a later stage. We have resorted to ways and means advances to find money for industrial undertakings. That means you have exceeded your advance limit to the Reserve Bank and you are paying 6½ per cent. What is it that you get from the undertakings like the Road Transport Corporation ? Their net realisation according to the figures that we have does not even mean 5 per cent profit on the capital investment. If there is not even 5 per cent net realisation, what is the fun of ploughing in more funds and not realising returns ? Therefore advances to such undertakings should not be encouraged.

Sri D. DEVARAJ URS (Minister for Transport and Tourism).—They are getting interest.

Sri G. V. GOWDA.—They are getting 4 per cent from the Road Transport Corporation but we are paying 6½ per cent interest.

Sri K. S. SURYANARAYANA RAO.—The other point I would like to mention is in the matter of administering the Tax Department. There has not been good supervision. Therefore there has been a lot of leakage or wrong assessments and short collections, and the like. Therefore, Sir, if atleast that is done, there will be better returns from Sales tax at the existing rates. So far as sales tax is concerned, I would like to draw your attention to audit report. It gives quite a lot of information as to the number of instances where the Commercial Tax Department has not been vigilant or they have slept over the assessment or they have not understood the statute properly, and therefore there has been irregular grant of compensation, remission of levy on certain articles, incorrect procedure followed in computing returns, etc. They go to several lakhs of rupees. This is how the Department of Sales Tax is being administered. If it is not done properly what are we to do ? The other point I would like to mention is about audit of treasuries. It is staggering that there has not been reconciliation in treasuries. Sir, so far as the treasuries are concerned, the number of treasuries where irregularities were noticed is rather too heavy. For example regarding values kept in treasuries for safe custody, there has not been proper administrative check and even though the Audit Department points out so many things, they are mounting up every day. As a matter of fact, audit objections run to several thousands and they have not been answered. If that is the way audit objections are to be answered and explanations given, how are we sure they ara spending money or collecting money properly ? Sir, as a matter

(SRI K. S. SURYANARAYANA RAO)

of fact, objections in P W. D. run to several thousands and they have not been answered. I do not wish to go into details because of the short time at my disposal. Audit objections should be properly attended to in many departments. Reconciliation has not been done or acknowledgments are not issued for the monies received. Sir, as a matter of fact, in other civil departments, defective maintenance of cash books in 172 items, omission of physical verifications of cash in 33 cases are mentioned. We have passed several enactments in the Legislature. Many things we have not implemented. The audit report points out non-assessment of betterment contribution due to various reasons; for technical reasons or otherwise, we do not know. You see that so many lakhs of rupees will be realised if they are collected, but we do not get anything. The other thing is so far as the revenue settlement is concerned, what difficulty you had this House does not know. You said by revision of assessment in the entire State so much of revenue would accrue and even we passed the Land Revenue Act and also the Settlement Act. But nothing seems to have been done. At least if not the collection, even the demand is not made. This is the way things are done. I would like to mention only one item and that is about entertainment tax and close. About the entertainment tax, additional tax is sought to be recovered for the purpose of making provision to film industry and all that. I am happy that provision is made to encourage film industry in the State. My only fear is within the tax limit, it can be done and secondly let not this fund collected for this purpose be spent and utilised in the way funds are utilised by the Khadi Board. With this I close.

12-00 NOON

† ಶ್ರೀ ಜಿ. ಮರುಳಪ್ಪ (ಕಡೂರು).—ಸ್ವಾಮಿ, ಅಧ್ಯಕ್ಷರೇ, ಈಗ ಕಾಲ ಎರಡೇ ನಿಮಿಷ ಇದೆ. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಪ್ರೊಹಿಬಿಷನ್ ವಿಚಾರ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಇಲ್ಲಿಯವರೆಗೆ ಪ್ರೊಹಿಬಿಷನ್ ಬಗ್ಗೆ ನಮ್ಮ ಮಾನ್ಯ ಸ್ನೇಹಿತರಾದಂತಹ ಶ್ರೀ ಕೊಳ್ಕೆಬೈರ್‌ರವರು ಮಾತನಾಡಿದರು. ಅದನ್ನು ನಾನು ಸ್ವಾಗತಿಸುತ್ತೇನೆ. ಇದರಿಂದ ಶ್ರೀಮಾನ್ ಮುಕ್ಕಣ್ಣಪ್ಪನವರಿಗೆ ಸ್ವಲ್ಪ ಬೇಜಾರು ಆಗಬಹುದು. ಅವರು ಹೇಳಿದರು, ಮಹಾತ್ಮಾ ಗಾಂಧಿಯವರು ಇದ್ದಿದ್ದರೆ ಈ ಪ್ರೊಹಿಬಿಷನ್ ಸಡಲಿಕೆ ಮಾಡಿದ್ದಕ್ಕೋಸ್ಕರ ಅವರು ವಿಷ ತೆಗೆದು ಸಾಯುತ್ತಿದ್ದರು ಎಂದು. ಮಹಾತ್ಮಾ ಗಾಂಧಿಯವರು ಆ ರೀತಿ ಹೇಳಲಿಲ್ಲ. ಈ ಅನೀತಿ ಕಾರ್ಯಗಳನ್ನು ನೋಡಿದ್ದರೆ ಅವರು ಅದನ್ನು ಫಲದಾಯಕವಾಗಿ ಬದಲಾಯಿಸಬೇಕೆಂದು ಹೇಳುತ್ತಿದ್ದರು. ಅದರಿಂದಲೇ ಅವರು ಮಹಾತ್ಮಾ ಗಾಂಧೀಯವರಾಗಿದ್ದಾರೆ. ಪ್ರೊಹಿಬಿಷನ್ ತೆಗೆದುಬಿಟ್ಟರೆ, ಎಲ್ಲಾ ಕುಡುಕರಾಗಿ ಕುಡುಕರ ರಾಜ್ಯವಾಗುವುದಿಲ್ಲ. ಈಗ ನಡೆಯುವ ಅನೀತಿ, ಅಧರ್ಮ ಪ್ರೊಹಿಬಿಷನ್ ಜಾರಿಗೆ ಬಂದಮೇಲೆ ಜಾಸ್ತಿಯಾಯಿತು. ಅದಕ್ಕೋಸ್ಕರವಾಗಿ ರಾಜ್ಯ ಸರ್ಕಾರದವರು ಮೊದಲನೆ ಹೆಜ್ಜೆ ಎರಡನೇಯ ಹೆಜ್ಜೆಯ ರೂಪದಲ್ಲಿ ಪ್ರೊಹಿಬಿಷನ್ ತೆಗೆದು ಹಾಕಿಬಿಟ್ಟರೆ ನನಗೆ ತುಂಬಾ ಸಂತೋಷವಾಗುತ್ತದೆ. ಆದ್ದರಿಂದ ಇದನ್ನು ತೆಗೆದು ಹಾಕಿಬಿಟ್ಟರೆ ದೇಶಕ್ಕೂ ಕ್ಷೇಮ, ಎಲ್ಲರಿಗೂ ಕ್ಷೇಮ ಎಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಈ ಸಭೆಯ ಮುಂದೆ ಇಟ್ಟಂತಹ ಬೇಡಿಕೆಗಳ ಮೇಲೆ ಮಾಡಿದ ಭಾಷಣಗಳನ್ನು ನಾನು ಬಹಳ ಗಮನವಿಟ್ಟು ಕೇಳಿದ್ದೇನೆ. ಇವರು ಎತ್ತಿದಂತಹ ವಿಚಾರಗಳಲ್ಲಿ ಮೊದಲು ನಾನು ಪೆನ್‌ಷನ್‌ಗೆ ಸಂಬಂಧಪಟ್ಟ ವಿಚಾರ ಮತ್ತು ವೃದ್ಧಾಪ್ಯವೇತನಕ್ಕೆ ಸಂಬಂಧಪಟ್ಟ ವಿಚಾರವನ್ನು ತೆಗೆದುಕೊಂಡು, ಹೆಚ್ಚು ಚರ್ಚೆಯಾದ ಪಾನನಿರೋಧದ ಪಾಲಿಸಿಯು

ಮೇಲೆ ಆ ಬಳಿಕ ಮಾತನಾಡುತ್ತೇನೆ. ಕೆಲವು ಸದಸ್ಯರು ಸರ್ಕಾರಿ ನೌಕರರು ನೌಕರಿಯಿಂದ ನಿವೃತ್ತಿಯಾದಮೇಲೆ ಅವರು ಸಾಯುವವರೆಗೂ ಅವರಿಗೆ ನಿವೃತ್ತಿ ವೇತನ ಸಿಕ್ಕುತ್ತಿಲ್ಲ ಎಂದು ಕಠೋರವಾದ ಟೀಕೆಗಳನ್ನು ಮಾಡಿದರು. ಈ ಮಾತನ್ನು ಬಹುಶಃ ಅನೇಕ ವರ್ಷಗಳ ಹಿಂದೆ ಹೇಳಿದ್ದರೆ ಇದರಲ್ಲಿ ಸ್ವಲ್ಪ ನಿಜಾಂಶವಿತ್ತು ಎಂದು ನಾನು ಎಣಿಸಿಕೊಳ್ಳುತ್ತೇನೆ. ಆದರೆ ಇಂದು ಆ ಮಾತು ಅತಿಶಯೋಕ್ತಿಯಾದಂಥದು. ಯಾವುದಾದರೂ ಒಂದು ನಿದರ್ಶನವನ್ನು ಮಾನ್ಯ ಸದಸ್ಯರು ಕೊಟ್ಟರೆ ನಾನು ಅವರ ವಾದವನ್ನು ಸ್ವೀಕರಿಸಿಕೊಳ್ಳಲಿಕ್ಕೆ ತಯಾರಾಗಿದ್ದೇನೆ. ಹಿಂದೆ ಇದ್ದಂತಹ ಕೆಲವು ನಿಯಮಗಳಿಂದ, ಮತ್ತು ಪದ್ಧತಿಯಿಂದಾಗಿ ನಿವೃತ್ತಿ ವೇತನವನ್ನು ಕೊಡುವುದರಲ್ಲಿ ಮೊದಲು ಸ್ವಲ್ಪ ಮಟ್ಟಿಗೆ ವಿಳಂಬವಾಗುತ್ತಿತ್ತು. ಆದರೆ ಕೆಲವು ಕಾಲದ ಹಿಂದೆ ಸರ್ಕಾರದವರು ಈ ಸಮಸ್ಯೆಯನ್ನು ಕೂಲಂಕಷವಾಗಿ ಯೋಚನೆ ಮಾಡಿ ಈ ನಿವೃತ್ತಿ ವೇತನವನ್ನು ನೌಕರರಿಗೆ ಅವರು ನಿವೃತ್ತಿಯಾದಮೇಲೆ ಆದಷ್ಟು ತೀವ್ರವಾಗಿ ಸಿಕ್ಕುವಂತೆ ನಿರ್ಧಾರ ಮಾಡಿ ಕರಾರುವಾಕಾದಂತಹ ಮತ್ತು ಕಡ್ಡಾಯವಾಗಿ ಕಾರ್ಯಗತ ಮಾಡಬೇಕಾದಂತಹ ರೂಲ್ಸ್‌ಗಳನ್ನು ಮಾಡಿದ್ದೇವೆ. ಅದನ್ನು ಬೇಕಾದರೆ ಮಾನ್ಯ ಸದಸ್ಯರಿಗೆ ಇಲ್ಲಿ ಓದಿ ತಿಳಿಸುತ್ತೇನೆ. ಬಹುಶಃ ಮಾನ್ಯ ಸದಸ್ಯರಿಗೆ ಅದನ್ನು ಓದಿದಮೇಲೆ ಆ ವಿಚಾರದಲ್ಲಿ ಬೇರೇನೂ ಮಾತನಾಡಲು ಉಳಿದಿರಲಿಕ್ಕಿಲ್ಲ ಎಂದು ನಾನು ಭಾವಿಸುತ್ತೇನೆ. ಅದು ಇಂಗ್ಲಿಷ್‌ನಲ್ಲಿದೆ. ಅದು ಈ ರೀತಿ ಇದೆ :

> "The preliminary verification of the pensionable services of the Government servants should be initiated 12 months before the date of superannuation as stipulated in rule 331 of the M. C. S. Rules."

Some Hon'ble Members suggested that it should be initiated at least six months before.

> "Cases preliminarily verified, should be retransmitted to the Acconntant General in final from two months in advance of the actual date of retirement. In the case of claims arising suddenely due to death or invalidation and other acts, claims should be dealt with on top-priority basis and settled within a period of three months from the date of the event. Either in the course of processing pension records or attending any further correspondence, not more than seven days should be allowed to elapse in any office. Disciplinary action should be taken against officers found responsible for delays in the settlement of pension claims."

O.M. dated........1964.

> "It has been directed that all cases which has been pending for more than six months from the date of retirement or death of Government servants concerned, should be obtained by the Heads of Departments, got scrutinised in their office and sent to the Accountant General or Finance Department as the case may be within one month. If any difficulties are felt in finalising these cases, they are advised to consult the Special Officer, Pensions, Finance Department."

Whether the aforementioned instructions are violated by the various pension sanctioning authorities are not is being closely watched, through monthly returns which are prescribed and are received from the pensioning authorities.

(SRI RAMAKRISHNA HEGDE)

When there is avoidable delay, the concerned officers are pulled up and if there are any teechnical difficulties and complications with regard to the interpretation or the application of rules. suitable suggestions any guidance are offieredr In addition to that, individual cases with reference to representations receivedfrom pensioners or familes of deceased Government officers or cases of delay brought to the notice of the Government by the Accountant General are being pursued closely by the Special Section.

ಇದರ ಹೊರತಾಗಿ ನಾವು ನಮ್ಮ ಉದ್ದೇಶಗಳನ್ನು ಸರಿಯಾದ ರೀತಿಯಲ್ಲಿ ಕಾರ್ಯಗತಮಾಡಲು ಈಗಿರತಕ್ಕಂತಹ ರೂಲ್ಸ್‌ಗಳನ್ನು ಮತ್ತು ನಿಯಮಗಳನ್ನು, ಎಷ್ಟು ಅಗತ್ಯವಿದೆಯೋ ಅಷ್ಟು ರೀತಿಯಲ್ಲಿ ತಿದ್ದುಪಡಿಯ ರೂಪದಲ್ಲಿ ಮಾಡಿದ್ದೇವೆ. ಅದನ್ನು ಸಮೇತ ನಾನು ಓದಲಿಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರುಗಳಿಗೆ ಬೇಕಾದರೆ ಒಂದು ನಕಲನ್ನು ಇಲ್ಲಿ ಇಡುತ್ತೇನೆ. ಒಂದು ಸಮಯ ಏನಾದರೂ ಅಲ್ಪಸ್ವಲ್ಪ ವಿಳಂಬವಾಗಿದ್ದರೆ ಅದು ಆ ಕೇಸಿನಲ್ಲಿರುವ ಕಾಂಪ್ಲಿಕೇಶನ್ ಅಥವಾ ಇನ್ನಿತರ ತೊಂದರೆಗಳಿಂದಾಗಿರಬಹುದೆಂದು ನಾನು ಹೇಳಬಯಸುತ್ತೇನೆ. ಮತ್ತು ಕೆಲವು ಸಂದರ್ಭಗಳಲ್ಲಿ ಈ ವಿಚಾರ ಅಕೌಂಟೆಂಟ್ ಜನರಲ್ ಆಫೀಸಿನಲ್ಲಿ ಮತ್ತು ಸ್ವಲ್ಪಮಟ್ಟಿಗೆ ವಿಳಂಬವಾಗುವುದಕ್ಕೆ ಅವಕಾಶ ಉಂಟು. ಅವರು ಕೂಡ ಸ್ವಲ್ಪ ತ್ವರಿತದಿಂದ ನಿರ್ಣಯ ಮಾಡಬೇಕೆಂದು ನಾವು ಕೇಳಿಕೊಂಡಿದ್ದೇವೆ. ಈ ವಿಚಾರದಲ್ಲಿ ಮಾಡಿದ ಟೀಕೆಗಳು ಸಂಪೂರ್ಣ ಹುರುಳಿಲ್ಲದ ಟೀಕೆಗಳು ಎಂದು ನಾನು ಹೇಳದೆ ಗತ್ಯಂತರವಿಲ್ಲ.

ಶ್ರೀಮಾನ್ ಗೋಪಾಲಗೌಡರು ಮತ್ತಿತರ ಸದಸ್ಯರುಗಳು ವೃದ್ಧಾಪ್ಯವೇತನ ವಿಚಾರದಲ್ಲಿ ಟೀಕೆ ಮಾಡಿದರು. ನಮ್ಮಲ್ಲಿ ಸಹಸ್ರಾರು ಜನ ಬಹಳ ಮುಪ್ಪಾದ ಜನರಿದ್ದಾರೆ; ಅವರು ನಿರ್ಗತಿಕರಾಗಿದ್ದಾರೆ, ಅವರ ಪೋಷಣೆ ಮಾಡಲಿಕ್ಕೆ ಯಾರೂ ಗತಿ ಇಲ್ಲ. ಅಂಥವರಿಗೆ ಸರ್ಕಾರದವರು ಕಳೆದ ವರ್ಷ ಒಂದು ವೇತನವನ್ನು ಕೊಡಬೇಕೆಂದು ಮಾಡಿದಂಥದ್ದರ ಲಾಭ ಸಹಸ್ರಾರು ಜನರಿಗೆ ಸಿಕ್ಕುತ್ತ ಇಲ್ಲ ಎಂದು ಹೇಳಿದರು. ಇದು ಹೊಸದಾಗಿ ಮಾಡಿದಂಥ ನಿರ್ಣಯವಾದುದರಿಂದ ಇದರ ಪ್ರಯೋಜನವನ್ನು ನಮ್ಮ ರಾಜ್ಯದ ಅರ್ಹರಾದ ಎಲ್ಲ ಜನರೂ ಪಡೆದುಕೊಂಡಿಲ್ಲ ಎಂದು ಹೇಳುತ್ತೇನೆ. ಅದಕ್ಕೆ ಮುಖ್ಯವಾದ ಕಾರಣವೆಂದರೆ, ಇದು ಹೊಸ ಯೋಜನೆಯಾದುದರಿಂದ ಇದರ ಬಗ್ಗೆ ಸಾಕಷ್ಟು ತಿಳುವಳಿಕೆ, ಪ್ರಚಾರ ಜನರಲ್ಲಿ ಇನ್ನೂ ಆಗಿಲ್ಲ. ಅದು ಆಗದೆ ಇದ್ದುದರಿಂದ ಮತ್ತು ಯಾವ ರೀತಿಯಿಂದ ಅದರ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎನ್ನುವ ತಿಳುವಳಿಕೆ ಅವರಿಗೆ ಇಲ್ಲದೆ ಇದ್ದುದರಿಂದ ಅಪ್ಲಿಕೇಷನ್ ಬರುವುದು ನಿಧಾನವಾಯಿತು. ಈ ವಿಚಾರವಾಗಿ ಸರ್ಕಾರ ಒಂದು ನಿರ್ಣಯವನ್ನು ತೆಗೆದುಕೊಂಡಮೇಲೆ ಅದರ ಸಂಪೂರ್ಣವಾದ ಲಾಭ, ಪ್ರಯೋಜನ, ಈ ಜನರಿಗೆ ಆಗಬೇಕು ಎನ್ನುವ ಉದ್ದೇಶದಿಂದ ಡೆಪ್ಯುಟಿ ಕಮಿಷನರಿಗೆ ಮತ್ತು ತಹಸೀಲ್ದಾರರಿಗೆ ಜನತೆಯಲ್ಲಿ ಈ ವಿಚಾರದಲ್ಲಿ ಸಾಕಷ್ಟು ತಿಳುವಳಿಕೆಯನ್ನುಂಟುಮಾಡಬೇಕು ಮತ್ತು ಯಾವುದೇ ಅರ್ಜಿ ಬಂದರೂ ಅದನ್ನು ಅತಿ ತೀವ್ರವಾಗಿ ಸರ್ಕಾರಕ್ಕೆ ಕಳುಹಿಸಿಕೊಡಬೇಕು ಎಂದು ನಿರ್ದೇಶನ ಮಾಡಿದ್ದೇವೆ. ಮತ್ತು ಸೆಕ್ರೆಟೇರಿಯಟ್‌ನಲ್ಲಿ ನಮಗೆ ಅರ್ಜಿ ಬಂದ ಏಳು ದಿವಸಗಳೊಳಗಾಗಿ ಅದರ ತೀರ್ಮಾನವಾಗಬೇಕೆಂದು ಕಟ್ಟುನಿಟ್ಟಾದ ನಿರ್ದೇಶನವನ್ನು ನಾನು ಕೊಟ್ಟಿದ್ದೇನೆ. ಇಲ್ಲಿಯವರೆಗೆ ಇಂಥ 215 ಜನರಿಗೆ ವೃದ್ಧಾಪ್ಯವೇತನವನ್ನು ಈ ವರ್ಷ ಕೊಟ್ಟಿದ್ದೇವೆ. ಸುಮಾರು 55 ಜನರ ಅರ್ಜಿ ನಮ್ಮ ಕಾಯಿದೆ ಪ್ರಕಾರ ಅರ್ಹತೆ ಹೊಂದದೆ ಇದ್ದುದರಿಂದ ರಿಜೆಕ್ಟ್ ಆಗಿವೆ. 45 ಜನರಿಗೆ ಸಂಬಂಧಪಟ್ಟ ಅರ್ಜಿಗಳು ಬೇರೆ ಬೇರೆ ಮಟ್ಟದಲ್ಲಿ ವಿಚಾರಣೆಯಲ್ಲಿವೆ. ಆದುದರಿಂದ ಈ ವಿಚಾರದಲ್ಲಿ ಕೂಡ ಮಾನ್ಯ ಸದಸ್ಯರು ಹೇಳಿದಂಥ ಮಾತು ಸತ್ಯಕ್ಕೆ ದೂರವಾದುದು ಎಂದು ಮಾತ್ರ ಹೇಳುತ್ತೇನೆ.

ಬೇರೆ ಒಂದೆರಡು ವಿಚಾರದಲ್ಲಿ ಕೂಡ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅದರಲ್ಲಿ ಮುಖ್ಯವಾದುದು ಸೇಲ್ಸ್‌ಟ್ಯಾಕ್ಸ್ ಮತ್ತು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ವಸೂಲಿ ವಿಚಾರದಲ್ಲಿ ಮತ್ತು ಸಾಮಾನ್ಯವಾಗಿ ಕರ ಎತ್ತುವಂಥ ವಿಚಾರದಲ್ಲಿ. ಆ ವಿಚಾರ ಅನುಷಂಗಿಕವಾಗಿ ಬಜೆಟ್ ಮೇಲೆ ನಡೆದ ಸಾಮಾನ್ಯ ಚರ್ಚೆಯಲ್ಲಿ ಬಂದಿದೆ ಮತ್ತು ನನ್ನ ಮರು ಭಾಷಣದಲ್ಲಿ ಅದರ ಮೇಲೆ ಬಂದಂಥ ಟೀಕಗಳಿಗೆ ಉತ್ತರವನ್ನು ಕೊಟ್ಟಿದ್ದೇನೆ, ನನ್ನ ಭಾಷಣದ ಜೊತೆಗೆ ಮಾನ್ಯ ಸದಸ್ಯರಿಗೆ ಹಂಚಿರುವಂಥ ಸಣ್ಣ ಪುಸ್ತಕದಲ್ಲಿ ಮೂರು ನಾಲ್ಕು ಮುಖ್ಯ ಮುಖ್ಯ ಕರಕ್ಕೆ ಸಂಬಂಧಪಟ್ಟ ಇಲಾಖೆಗಳ ಬೇಡಿಕೆ ಎಷ್ಟು, ವಸೂಲಿ ಎಷ್ಟು, ಬಾಕಿ ಇದ್ದಂಥ ಹಣವೆಷ್ಟು

ಎನ್ನುವುದನ್ನು ವಿವರವಾಗಿ ಕೊಟ್ಟಿದ್ದೇವೆ. ಅದನ್ನು ನೋಡಿದರೆ ಮತ್ತು ಅದರಲ್ಲಿ ನಮೂದಿಸಲಾದ ಕಾರಣಗಳನ್ನು ನೋಡಿದರೆ ಈ ವಿಚಾರದಲ್ಲಿ ಸರ್ಕಾರ ಬಹಳ ಚುರುಕಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳುವಂಥ ಟೀಕೆ ಕೂಡ ಅಷ್ಟೊಂದು ಸರಿಯಾದುದಲ್ಲ ಎಂದು ನಾನು ಹೇಳಬೇಕಾಗಿದೆ. ಅನೇಕ ಬಾಬುಗಳಲ್ಲಿ ಹಣ ಬಾಕಿ ಇದೆ, ನಿಜ. ಅದರಲ್ಲಿಯೂ ಕೆಲವು ಬಾಬುಗಳಲ್ಲಿ ಬಾಕಿ ಇದ್ದಂಥ ಹಣ ಕೆಲವು ವಿಶಿಷ್ಟ ಕಾರಣದಿಂದಾಗಿ ಬಾಕಿ ಇದೆ. ಉದಾಹರಣೆಗಾಗಿ ಎಕ್ಸೈಸ್ ಇಲಾಖೆಯಲ್ಲಿ ಅನೇಕ ಲಕ್ಷ ರೂಪಾಯಿಗಳ ಕಟ್ಟ್ಯಾಬಾಕಿ ಹೈದರಾಬಾದು ಕರ್ಣಾಟಕ ಪ್ರದೇಶಕ್ಕೆ ಸಂಬಂಧಪಟ್ಟಂತೆ ಇದೆ. ಆದರೆ ಆ ಪ್ರದೇಶ ಮೈಸೂರು ಸರ್ಕಾರದಲ್ಲಿ ಬಂದ ನಂತರ ಉಂಟಾದಂಥ ಬಾಕಿಯಲ್ಲ. ಹಿಂದೆ ಹೈದರಾಬಾದು ಸರ್ಕಾರದಲ್ಲಿದ್ದಾಗ ಆದದ್ದು. ಆ ಸರ್ಕಾರದ ಮೇಲೆ ಯಾವ ರೀತಿಯ ಟೀಕೆ ಮಾಡಲಿಕ್ಕೂ ಇಚ್ಛೆ ಪಡುವುದಿಲ್ಲ. ಆಗಿನ ಪರಿಸ್ಥಿತಿ, ಅಧಿಕಾರಿಗಳು, ಆಗಿನ ಕಾಯಿದೆ ಯಾವ ತರಹ ಇತ್ತು ಎನ್ನುವುದು ಇಲ್ಲಿ ನೇರವಾಗಿ ಸಂಬಂಧಪಟ್ಟ ವಿಚಾರವಲ್ಲ. ಆದರೂ ಇಷ್ಟು ಮಾತ್ರ ನಿಜ. ಅಲ್ಲಿ ಎಕ್ಸೈಸು ಕಂಟ್ರಾಕ್ಟರು ಏನೇನು ಬಾಕಿ ಇಟ್ಟುಕೊಂಡು ಕೂತುಕೊಂಡಿದ್ದಾರೆ, ಆ ಬಾಕಿ ವಸೂಲ್ಮಾಡುವುದಕ್ಕೆ ಸಾಧ್ಯವಿಲ್ಲದ ಬಾಕಿಯಾಗಿದೆ. ಯಾವುದನ್ನು ಸೆಕ್ಯೂರಿಟಿ ಎಂದು ಕೊಟ್ಟಿದ್ದಾರೆ ಆ ಜಮೀನೇ ಇಲ್ಲ, ಆ ಜಮೀನು ಇದ್ದರೂ ಕೂಡ ಅವರ ಹೆಸರಿನಲ್ಲಿಲ್ಲ. ಇಂಥ ಅನೇಕ ರೀತಿಯಾದ ಲೋಪದೋಷಗಳಿವೆ. ಅದಕ್ಕೆ ನಾವು ಜವಾಬ್ದಾರರಲ್ಲ. ಇದನ್ನು ಬಿಟ್ಟರೆ ಇನ್ನು ಬಹಳ ದೊಡ್ಡ ಮೊತ್ತದ ಬಾಕಿ ಇರುವಂಥದ್ದು ಸೇಲ್ಸ್‌ಟ್ಯಾಕ್ಸ್ ಇಲಾಖೆಯಲ್ಲಿ. ಅದಕ್ಕೆ ಕಾರಣವೇನು ಎಂದು ನಾನು ಹೇಳಿದ್ದೇನೆ. ಅದರಲ್ಲಿ ನಿಜವಾದ ಬಾಕಿ ಎಂದು ಹೇಳುವಂಥದ್ದು ಕೇವಲ 15-20 ಲಕ್ಷ ರೂಪಾಯಿಗಿಂತ ಹೆಚ್ಚು ಇಲ್ಲ. ಆದರೂ ಈ ಸಂದರ್ಭದಲ್ಲಿ ಇಷ್ಟು ಮಾತ್ರ ಹೇಳಲು ಬಯಸುತ್ತೇನೆ. ಸರ್ಕಾರ ಹೊಸ ಕರ ಹಾಕುವುದರಲ್ಲಿ ಮತ್ತು ಕರ ವಸೂಲ್ಮಾಡುವುದರಲ್ಲಿ ಎಷ್ಟು ಜಾಗರೂಕತೆಯಿಂದ ಕೆಲಸ ಮಾಡುತ್ತಿದೆ, ಅಷ್ಟೇ ಜಾಗರೂಕತೆಯಿಂದ ಹಿಂದಿನ ಕರವನ್ನು ವಸೂಲ್ಮಾಡುತ್ತದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಆದರೆ ಕೆಲವು ಸಂದರ್ಭಗಳಲ್ಲಿ ಕಠೋರವಾದ ಕ್ರಮ ತೆಗೆದುಕೊಳ್ಳುವಂಥದ್ದು ಸಾಧ್ಯವಾಗುವುದಿಲ್ಲ. ಉದಾಹರಣೆಗೆ ರೈತರ ಮೇಲೆ ಇರತಕ್ಕ ಸಾಲ. ಅದು ರೆವಿನ್ಯೂ ಕಂದಾಯವಾಗಲಿ ಅಥವಾ ಬೇರೆ ರೀತಿಯ ಯಾವುದೇ ಕರವಾಗಲಿ, ಕೊಟ್ಟಂಥ ಸಾಲದ ವಸೂಲಿಯಾಗಿಲ್ಲದಿರುವುದು ಮುಖ್ಯವಾಗಿ ನೈಸರ್ಗಿಕ ಪ್ರಕೋಪದ ಅಥವಾ ನೈಸರ್ಗಿಕ ಪರಿಸ್ಥಿತಿಯ ಕಾರಣದಿಂದ.

ಕೊನೆಯದಾಗಿ ಪಾನನಿರೋಧದ ವಿಚಾರದಲ್ಲಿ ಎರಡು ಮಾತನ್ನು ಉತ್ತರ ರೂಪವಾಗಿ ಹೇಳಬೇಕೆಂದಿದ್ದೇನೆ. ಮಾನ್ಯ ಅಧ್ಯಕ್ಷರೆ, ಪಾನ ನಿರೋಧದ ವಿಚಾರ ಪುನಃ ಪುನಃ ಈ ಸಭೆಯ ಮುಂದೆ ಅನೇಕ ಬಾರಿ ಬಂದಿದೆ ಮತ್ತು ಅದರ ಮೇಲೆ ಸಂಪೂರ್ಣವಾದ ರೀತಿಯಲ್ಲಿ ಚರ್ಚೆಯಾಗದೆ ಇದ್ದರೂ ಅನೇಕ ಸಂದರ್ಭಗಳಲ್ಲಿ ಚರ್ಚೆ ಸಾಕಷ್ಟಾಗಿದೆ. ಈ ಸಂದರ್ಭದಲ್ಲಿ ಪಾನನಿರೋಧದ ಗುಣ, ದೋಷ, ಇದರ ವಿಮರ್ಶೆ ಮಾಡತಕ್ಕದ್ದು ನನ್ನ ಉದ್ದೇಶವಲ್ಲ ಮತ್ತು ಆ ಗೊಡವೆಗೆ ನಾನು ಸದ್ಯಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರು ಪರಸ್ಪರ ವಿರೋಧವಾದ ವಿಚಾರವನ್ನು ಅಭಿಪ್ರಾಯಗಳನ್ನು ತಮ್ಮ ಭಾಷಣಗಳಲ್ಲಿ ವ್ಯಕ್ತಮಾಡಿದ್ದಾರೆ. ಕೆಲವು ಸದಸ್ಯರು ಸಂಪೂರ್ಣವಾಗಿ ಪಾನನಿರೋಧವನ್ನು ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ, ಇಡೀ ದೇಶದಲ್ಲಿ ಕಟ್ಟುನಿಟ್ಟಾಗಿ ಜಾರಿಯಲ್ಲಿ ತರಬೇಕೆಂದು ವಾದಮಾಡಿದರೆ ಇನ್ನು ಕೆಲವು ಸದಸ್ಯರು ಪಾನನಿರೋಧ ಸಂಪೂರ್ಣವಾಗಿ ವಿಫಲವಾಗಿದೆ, ಅಯಶಸ್ವಿಯಾಗಿದೆ, ಅದರಿಂದ ಸಮಾಜಕ್ಕೆ ಅನಿಷ್ಟ ಹೆಚ್ಚಾಗಿದೆಯೇ ಹೊರತು ಹಿತವಾಗಿಲ್ಲ, ಈ ಕಾರಣದಿಂದ ಪಾನನಿರೋಧವನ್ನು ಸಂಪೂರ್ಣವಾಗಿ ಕಿತ್ತೊಗೆಯಬೇಕು ಎಂಬುದಾಗಿ ವಾದಮಾಡಿದ್ದಾರೆ. ಇದರಿಂದ ಒಂದು ಮಾತು ಸ್ಪಷ್ಟವಾಗುತ್ತದೆ. ಈ ಪಾನನಿರೋಧದ ಬಗ್ಗೆ ಈ ಸಭೆಯಲ್ಲಿಯೇ ಆಗಲಿ ಅಥವಾ ರಾಜ್ಯ ಅಥವಾ ದೇಶವಲ್ಲಿಯೇ ಆಗಲಿ ಒಮ್ಮತ ಅಭಿಪ್ರಾಯವಿಲ್ಲವೆಂದು ಹೇಳುವಂಥಾದ್ದು. ಇದು ಕೇವಲ ಒಂದು ಆರ್ಥಿಕ ಅಥವಾ ಸಾಮಾಜಿಕ ವಿಚಾರವಾಗಿ ಉಳಿದಿಲ್ಲ. ಇದು ಕೇವಲ ಆರ್ಥಿಕ ಮತ್ತು ಸಾಮಾಜಿಕ ವಿಚಾರವಾಗಿದ್ದರೆ ನಾವು ಆಬ್ಜೆಕ್ಟಿವ್ ಆಗಿ ಅದರ ಎರಡು ಮಗ್ಗುಲನ್ನೂ ನೋಡಿ ಅದರಲ್ಲಿ ಹಿತವೂ ಅಥವಾ ಅಹಿತವೊ, ಅನಿಷ್ಟವೋ ಅಥವಾ ಇಷ್ಟವೋ, ಒಳ್ಳೆಯದೋ ಅಥವಾ ಕೆಟ್ಟದ್ದೋ ಎಂಬುದನ್ನು ವಿವೇಕದಿಂದ ವಿಮರ್ಶೆ ಮಾಡಿ ಒಂದು ನಿರ್ಣಯವನ್ನು ತೆಗೆದುಕೊಳ್ಳುವಷ್ಟು ಸುಲಭವಾಗುತ್ತಿತ್ತೋ ಆದರೆ ಅದು ಈಗ ಕೇವಲ ಅರ್ಥಿಕ ಮತ್ತು ಸಾಮಾಜಿಕವಾಗಿ ಉಳಿಯದೆ ಒಂದು ಭಾವನೆಯ ವಿಷಯವಾಗಿದೆ, ಎಮೋಷನಲ್ ಸೆಂಟಿಮೆಂಟಲ್ ಪ್ರಾಬ್ಲೆಂ ಆಗಿದೆ. ಎಲ್ಲಿಯವರೆಗೆ ಇದನ್ನು ಎಮೋಷನ್ನಿನಿಂದ ಎಂದರೆ ಭಾವಾತಿರೇಕದಿಂದ ಪ್ರತ್ಯೇಕವಾಗಿಮಾಡಿ ವಿಚಾರ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ವಿಚಾರದಲ್ಲಿ ಒಂದು ಸರಿಯಾದ ಮತ್ತು ಸ್ಪಷ್ಟವಾದ ನಿರ್ಣಯವನ್ನು ತೆಗೆದುಕೊಳ್ಳುವುದು ಸರ್ಕಾರಕ್ಕೆ ಕಷ್ಟವಾಗಬಹುದು. ಈಗ ಪಾನನಿರೋಧಕ್ಕೆ ನಮ್ಮ ಸಂಸ್ಕೃತಿಯಲ್ಲಿ ಸ್ಥಾನವೇನು, ನಮ್ಮ ಧರ್ಮದಲ್ಲಿ ಸ್ಥಾನವೇನು, ಅದರ ಬಗ್ಗೆ ಧಾರ್ಮಿಕ ಹಿನ್ನೆಲೆ, ಮತ್ತು ಸಾಂಸ್ಕೃತಿಕ ಹಿನ್ನೆಲೆ ಏನೆಂಬುದನ್ನು ನಾವು ಇವತ್ತು ನೋಡಬೇಕಾಗಿದೆಯೇ ಅಥವಾ ಕೇವಲ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಗಳಿಂದ ನೋಡಿದರೆ ಸಾಕೇ ಎಂಬುದರಲ್ಲಿ ಯಾವ

(SRI RAMAKRISHNA HEGDE)

ಒಂದು ಒಮ್ಮತ ಅಭಿಪ್ರಾಯವೂ ಇಲ್ಲ. ಇತಿಹಾಸದಿಂದ ನೋಡಿದರೆ ವೈದಿಕ ಕಾಲದಲ್ಲೂ ಮತ್ತು ಅದರ ನಂತರ ಕಾಲದಲ್ಲೂ ಮದ್ಯಸೇವನೆ ಮತ್ತು ಮಾದಕ ಪದಾರ್ಥಗಳ ಸೇವನೆ ಬಗ್ಗೆ ಅಷ್ಟೊಂದು ನಿಷ್ಠೂರವಾದ ಬಹಿಷ್ಕಾರವಿರಲಿಲ್ಲ. It was not tabooed ಮುಖ್ಯವಾಗಿ ಕಳೆದ 100 ವರ್ಷಗಳ ಕಾಲದಿಂದೀಚೆಗೆ ಅಂದರೆ, ಸುಮಾರು 40-50 ವರ್ಷಗಳ ಕೆಳಗೆ, ಅದರಲ್ಲಿಯೂ ಮಹಾತ್ಮ ಗಾಂಧೀಜಿಯವರು ನಮ್ಮ ರಾಜಕೀಯ ವೇದಿಕೆಯ ಮೇಲೆ ಬಂದಮೇಲೆ ಈ ಮದ್ಯಪಾನ ನಿರೋಧಕ್ಕೆ ನಮ್ಮ ನೀತಿಯ ಚೌಕಟ್ಟಿನಲ್ಲಿ ಒಂದು ಮಹತ್ವವಾದಂಥ ಸ್ಥಾನವನ್ನು ಕೊಟ್ಟಿದ್ದಾರೆ. ಅದು ಹೇಗೇ ಇರಲಿ, ಅದರಲ್ಲಿಯೂ ಕೂಡ ಸ್ವಲ್ಪ ಮಟ್ಟಿಗೆ ಭಿನ್ನಾಭಿಪ್ರಾಯ ಇರಬಹುದೆಂದು ನಾನು ಇಲ್ಲಿ ಹೇಳ ಬಯಸುತ್ತೇನೆ. ಒಟ್ಟಿನಲ್ಲಿ ಈ ವಿಚಾರವನ್ನು ನಾವು ಮೈಸೂರು ರಾಜ್ಯ ಮಟ್ಟಕ್ಕೆ ಮಾತ್ರ ಪ್ರತ್ಯೇಕವಾಗಿ ತೆಗೆದುಕೊಂಡು ನಿರ್ಣಯಮಾಡುವುದಕ್ಕೆ ಸಾಧ್ಯವಿಲ್ಲ. ಕಾಯಿದೆಯ ದೃಷ್ಟಿಯಿಂದ ಮೈಸೂರು ಸರ್ಕಾರಕ್ಕೇನೋ ಅಧಿಕಾರವಿದೆ. ಕಾನ್‌ಸ್ಟಿಟ್ಯೂಷನ್ನಿನಲ್ಲಿ ನಮಗೆ ಯಾವ ರೀತಿಯ ಪ್ರತಿಬಂಧಕವೂ ಇಲ್ಲ. ಇವತ್ತು ನಾವು ಸಂಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತರಬಹುದು ಅಥವಾ ಪಾನನಿರೋಧವನ್ನು ಕಿತ್ತುಹಾಕಬಹುದು. ಕೇಂದ್ರ ಸರ್ಕಾರಕ್ಕಾಗಲೀ ಅಥವಾ ಬೇರೆ ಯಾವುದಕ್ಕೇ ಆಗಲಿ ಇದನ್ನು ಪ್ರಶ್ನೆ ಮಾಡುವ ಅಧಿಕಾರವಿಲ್ಲವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆದರೂ ಇದನ್ನು ನಾವು ರಾಷ್ಟ್ರೀಯ ದೃಷ್ಟಿಯಿಂದ ನೋಡಬೇಕು. ಎಂಬುದಾಗಿ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದರಿಂದ ನಮ್ಮ ಆಗು ಹೋಗುಗಳ ಮತ್ತು ಇನ್ನೂ ಇತರ ರಾಜ್ಯಗಳ ಆಗು ಹೋಗುಗಳ ಹೊಂದಾಣಿಕೆ ಇದೆ. ಈಗ ಕೇಂದ್ರ ಸರ್ಕಾರದವರು ಅನೇಕ ಸಲ ಈ ವಿಚಾರದಲ್ಲಿ ನಿರ್ಣಯವನ್ನು ತೆಗೆದುಕೊಳ್ಳಬೇಕು ಎಂಬುದಾಗಿ ಹೇಳಿ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೂ ಇವತ್ತಿನವರೆಗೂ ಅವರು ಒಂದು ನಿರ್ಧಾರವಾದಂಥ ನಿರ್ಣಯವನ್ನು ಈ ಬಗ್ಗೆ ತೆಗೆದುಕೊಂಡಿಲ್ಲ. ಟೇಕ್‌ಚಂದ್ ಕಮಿಟಿಯ ವರದಿಯ ವಿಚಾರವಾಗಿ ಕೆಲವು ಸಲಹೆಗಳು ಇವತ್ತಿನ ಚರ್ಚೆಯಲ್ಲಿ ಪುನಃ ಪುನಃ ಬಂದುವು. ಈ ಟೇಕ್‌ಚಂದ್ ಕಮಿಟಿಯನ್ನು ಕೇಂದ್ರ ಸರ್ಕಾರದವರು ನೇಮಿಸಿದ್ದಲ್ಲ. ಬಹುಶಃ ಕೇಂದ್ರಸರ್ಕಾರಕ್ಕೆ ಪಾನನಿರೋಧದ ಮೇಲೆ ಇಂತಹ ಒಂದು ಕಮಿಟಿಯನ್ನು ನೇಮಿಸುವ ಅಧಿಕಾರವಿದೆಯೋ ಇಲ್ಲವೋ ಗೊತ್ತಿಲ್ಲ. ಇದು ಪ್ಲಾನಿಂಗ್ ಕಮಿಷನ್ನಿನವರು ನೇಮಿಸಿದಂತಹ ಒಂದು ಕಮಿಟಿ. ಆದರೆ ಈ ಕಮಿಟಿಗೆ ಕೊಟ್ಟಂತಹ ವ್ಯಾಪ್ತಿಯನ್ನು ದಯವಿಟ್ಟು ಮಾನ್ಯ ಸದಸ್ಯರು ನೋಡಬೇಕು. ಆ ವ್ಯಾಪ್ತಿಯಲ್ಲಿ ಪಾನನಿರೋಧ ರದ್ದಾಗಬೇಕೋ ಅಥವಾ ಉಳಿಯಬೇಕೋ ಎಂಬ ಅಂಶವೇ ಇಲ್ಲ. ಅಲ್ಲದೆ ಪಾನನಿರೋಧದ ಗುಣ ದೋಷ, ನೀತಿ ವಿಮರ್ಶೆ ಮಾಡತಕ್ಕ ಅಂಶವೂ ಕೂಡ ಅದರಲ್ಲಿಲ್ಲ. ಇದರಲ್ಲಿ ಇರತಕ್ಕ ತೊಂದರೆ ಏನು, ಆ ನೀತಿಯನ್ನು ಕಾರ್ಯಗತ ಮಾಡುವುದಕ್ಕೆ ಏನೇನು ತೊಂದರೆಗಳು ಬರುತ್ತವೆ ಅವನ್ನು ಕಾಯಿದೆಯಿಂದಾಗಲೀ ಅಥವಾ ಸಾಮಾಜಿಕ ಚಟುವಟಿಕೆಗಳಿಂದಾಗಲೀ, ಬೇರೆ ಯಾವ ರೀತಿಯಿಂದಾಗಲೀ ತೆಗೆದು ಹಾಕಬೇಕೆಂಬುದನ್ನು ಇದರಲ್ಲಿ ಶಿಫಾರಸು ಮಾಡಿದ್ದಾರೆ. ಈ ಕಮಿಟಿಯ terms of reference ಒಟ್ಟು ಏಳಿವೆ. ಆ ಏಳರಲ್ಲಿ ಕೂಡ ಇದರ ಮೂಲ ಭೂತವಾದ ತತ್ವಕ್ಕೆ ಸೇರಿದುದು ಒಂದೂ ಇಲ್ಲ. ಅವುಗಳು ಈ ರೀತಿ ಇವೆ:

(1) To make an assessment of the magnitude of illicit distillation and illicit sales and other abuses prevalent in both wet and dry areas;

(2) To suggest practical measures for reducing illicit traffic in liquor and combat other abuses and malpractices;

ಮೂರನೆಯದು ಬಹಳ ಮುಖ್ಯ. ಅದು ಈ ರೀತಿ ಇದೆ :

(3) To advice as to how better implementation of prohibition programme can be ensured through official and non-official agencies; This pre-supposes that prohibition has come to stay.

ನಾಲ್ಕನೆಯದು ಈ ರೀತಿ ಇದೆಃ

(4) To examine the existing legislation on prohibition and make suggestions for removing defects and securing effective enforcement. ಇದೂ ಕೂಡ ಅದೇ ಅರ್ಥವನ್ನು ಕೊಡುತ್ತದೆ.

ಐದನೆಯದು ಈ ರೀತಿ ಇದೆ :

(5) To examine the existing administrative set up in the State with particular regard to the personnel, recruitment, training and powers entrusted to them in their method.

ಇದೇ ರೀತಿ ಇನ್ನೂ ಎರಡು ಇವೆ. ಅವನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಇದರಿಂದ ಏನು ನನಗನ್ನಿಸುತ್ತದೆಂದರೆ directive principles ನಲ್ಲಿ ಆ ವಿಚಾರವಾಗಿ ಒಂದು ಮಾತು ಬಂದಿರುವುದರಿಂದ ಬಹುಶಃ ಬಹಿರಂಗವಾಗಿ ಇದನ್ನು ಚರ್ಚೆ ಮಾಡುವುದಕ್ಕೂ ಮತ್ತು ಅದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಕ್ಕೂ ಕೂಡ ಸ್ವಲ್ಪಮಟ್ಟಿಗೆ ಕಸಿವಿಸಿ ಕೇಂದ್ರಸರ್ಕಾರದಲ್ಲಿದ್ದ ಹಾಗೆ ಕಾಣುತ್ತದೆ. ಆದ್ದರಿಂದ ಇದನ್ನು ಬಿಡಿಸಬೇಕಾದರೆ ಬಹಳ ಕಷ್ಟ. ಬಹಳ ಗಡುಸಾದ ಪ್ರಶ್ನೆ. ಕಠಿಣವಾದ ವಿಚಾರವೂ ಹೌದು. ಮೈಸೂರು ಸರ್ಕಾರದವರು ಕೆಲವು ದಿವಸಗಳ ಹಿಂದೆ ಈ ಪ್ರೊಹಿಬಿಷನ್ ಆಕ್ಟ್ ಪಾಸ್ ಆದ ಮೇಲೆ ಅದರ ಬಗ್ಗೆ ಏನು ನಿಬಂಧನೆಗಳನ್ನು ಮಾಡಬೇಕು, ಏನು ರೂಲ್ಸನ್ನು ಮಾಡಬೇಕೆಂದು ಯೋಚನೆ ಮಾಡಿ ಒಂದು ಆಜ್ಞೆಯನ್ನು ಹೊರಡಿಸಿದರು. ಅದರ ಮೇಲೆ ಅನೇಕ ರೀತಿಯ ಟೀಕೆ ಟಿಪ್ಪಣಿಗಳು ಬಂದು, ವಿಮರ್ಶೆಯಾಗಿ ಬೇಕಾದಷ್ಟು ಇಂಟರ್‌ಪ್ರಿಟೇಷನ್ನುಗಳು ಬಂದುವು. ಆ ವಿಚಾರವಾಗಿ ನಾನು ಇಲ್ಲಿ ಹೆಚ್ಚಾಗಿ ಹೇಳುವುದಕ್ಕೆ ಬಯಸುವುದಿಲ್ಲ. ಆದರೆ ಈ ವಿಚಾರದಲ್ಲಿ ಯಾವುದೋ ಒಂದು ಸರಿಯಾದ ನಿರ್ದಿಷ್ಟವಾದ ಭಾವನೆಯನ್ನು ಇಟ್ಟುಕೊಳ್ಳದೆ ಜನತೆ ನೋಡಿದ ಹಾಗೆ ಕಾಣುತ್ತದೆ. ಅದರಿಂದಾಗಿ ಈ ಪ್ರೊಹಿಬಿಷನ್ ಪಾಲಿಸಿಯನ್ನು ಮತ್ತು ಪ್ರೊಹಿಬಿಷನ್ ಕಾಯಿದೆಯನ್ನು ಸಂಪೂರ್ಣವಾಗಿ ನೂರಕ್ಕೆ ನೂರರಷ್ಟು ಯಶಸ್ವಿಯಾಗಿ ಜಾರಿಗೆ ತರುವುದು ಬಹಳ ಕಷ್ಟವೆನ್ನುವುದನ್ನು ನಾವು ಒಪ್ಪಿಕೊಳ್ಳಲೇ ಬೇಕು. ಏತಕ್ಕೆಂದರೆ, ಮೊದಲನೆಯದಾಗಿ ಈ ನೀತಿ ಎಲ್ಲಿಯವರೆಗೆ ಇಡೀ ರಾಷ್ಟ್ರಾದ್ಯಂತ ಒಮ್ಮೆಯೇ ಜಾರಿಗೆ ಬರುವುದಿಲ್ಲವೋ ಅಲ್ಲಿಯವರೆಗೆ ಇದನ್ನು ಕಾರ್ಯಗತ ಮಾಡುವುದು ಬಹಳ ಕಷ್ಟವಾಗುತ್ತದೆ. ಎರಡನೆಯದಾಗಿ ಎಲ್ಲಿಯವರೆಗೆ ದೇಶಾದ್ಯಂತ ಎಲ್ಲಿಯೂ ಒಂದು ತೊಟ್ಟು country liquor Indian made or foreign liquor ತಯಾರು ಮಾಡಬಾರದೆಂದು ಆಜ್ಞೆ ಕೊಡುವುದಿಲ್ಲವೋ ಅಲ್ಲಿಯವರೆಗೆ ಇದನ್ನು ಜಾರಿಗೆ ತರುವುದು ಬಹಳ ಕಷ್ಟವಾಗುತ್ತದೆ. ಮೂರನೆಯದಾಗಿ ಎಲ್ಲಿಯವರೆಗೆ ಬೇರೆ ದೇಶದಿಂದ ಯಾರೇ ಆಗಲೀ ಯಾರೇ ಬರಲಿ heads of the state ಬರಲಿ, ಫಾರಿನ್ ವಿಜಿಟರ್ಸ್ ಬರಲಿ, ಟೂರಿಸ್ಟ್ಸ್ ಬರಲಿ, ಅವರಿಗೂ ಕೂಡ ಮದ್ಯವನ್ನು ಯಾವುದೇ ರೀತಿಯಿಂದಲೂ ಕೊಡುವುದಿಲ್ಲವೆಂದು ನಿರ್ಧಾರ ಮಾಡುವುದಿಲ್ಲವೋ ಅಲ್ಲಿಯವರೆಗೆ ಇದನ್ನು ಜಾರಿಗೆ ಕೊಡುವುದಕ್ಕೆ ಕಷ್ಟವಾಗುತ್ತದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಎಲ್ಲಿಯವರೆಗೆ ಸಮಾಜದಲ್ಲಿ ಮದ್ಯಪಾನದ ಬಗ್ಗೆ ಅಥವಾ ಮಾದಕ ವಸ್ತುಗಳ ಪೂರ್ಣ ವಿರುದ್ಧ ಅಭಿಪ್ರಾಯಬರುವುದಿಲ್ಲವೋ ಅಲ್ಲಿಯವರೆಗೆ ಇದನ್ನು ಜಾರಿಗೆ ತರುವುದು ಬಹಳ ಕಷ್ಟವಾಗುತ್ತದೆ. ಮೈಸೂರು ರಾಜ್ಯದಲ್ಲಿ ಪಾನನಿರೋಧವನ್ನು ಜಾರಿಗೆ ತರಬಹುದು. ಆದರೆ ಪಕ್ಕದ ರಾಜ್ಯಗಳಾದ ಆಂಧ್ರ ಅಥವಾ ಕೇರಳದಲ್ಲಿ ಜನ ಕುಡಿಯುತ್ತಿದ್ದರೆ ನಮ್ಮ ಜನರಿಗೆ ಯಾವ ದೃಷ್ಟಿಯಿಂದ ಕುಡಿಯಬೇಡಿ ಎಂದು ಹೇಳುವುದು ? ಇದು ಬಹಳ ಕಷ್ಟವಾಗುತ್ತದೆ. ಆ ವಿಚಾರದ ಬಗ್ಗೆ ನಮ್ಮ ಜನರಿಗೆ ನಿರ್ಬಂಧ ಮಾಡಿದ್ದೇವೆಂದು ಹೇಳುವುದು ಸಾಧುವಾದುದಲ್ಲ.

12-30 P.M.

ಇಲ್ಲಿ ಕುಡಿಯುತ್ತಾ ಇರುವವನು ಆಂಧ್ರಕ್ಕೆ ಹೋಗಿ ಕುಡಿಯುತ್ತಾನೆ. ಅಲ್ಲಿ ಇಲ್ಲದಿದ್ದರೆ ಕೇರಳಕ್ಕೆ ಹೋಗಿ ಕುಡಿಯುತ್ತಾನೆ. ಮತ್ತೊಂದು ಕಡೆಗೆ ಹೋಗಿ ಕುಡಿಯುತ್ತಾನೆ. ಆರಮ್ಡ್ ಫೋರ್ಸ್‌ನಲ್ಲಿ ಇರತಕ್ಕವರು, ವಿಮಾನ ದಳದಲ್ಲಿ ಇರತಕ್ಕವರು, ಸೈನ್ಯದಲ್ಲಿರತಕ್ಕವರು ನೌಕೆಯಲ್ಲಿರತಕ್ಕವರುಗಳಿಗೆ ಪ್ರೊಹಿಬಿಷನ್ ತರುವುದಕ್ಕಾಗುವುದಿಲ್ಲ. ಇದು ಪರಸ್ಪರ ವಿರೋಧಾ ಭಾಸವಾಗುತ್ತದೆ. ಮತ್ತು ಸೈನ್ಯದಲ್ಲಿ ದುಡಿಯತಕ್ಕವನು ಮನೆಗೆ ಬರುತ್ತಾನೆ. ಆಗ ಅವನಿಗೆ ಕುಡಿಯುವ ಚಟ ಇರುತ್ತದೆ. ಆಗ ಅವನು ಪಾನೀಯ ಎಲ್ಲಿ ಸಿಕ್ಕುತ್ತದೆ ಎಂದು ನೋಡುತ್ತಾನೆ. ಒಂದು ವೇಳೆ ಸಿಕ್ಕದಿದ್ದರೆ ಇನ್ನೊಂದು ಸಾರಿ ಬರುವಾಗ ಅದನ್ನು ಸೂಟ್‌ಕೇಸಿನಲ್ಲಿ ಹಾಕಿಕೊಂಡು ಬರುತ್ತಾನೆ. ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ನಮ್ಮ ದೇಶಕ್ಕೆ ವಿದೇಶದವರು ಬರುತ್ತಾರೆ. ಅಮೆರಿಕಾ ಪ್ರೆಸಿಡೆಂಟ್ ಬರುತ್ತಾರೆ, ಎಲಿಜಬತ್ ರಾಣಿ ಬರುತ್ತಾರೆ, ಬೇರೆ ಡಿಗ್ನಿಟರಿಗಳು ಬರುತ್ತಾರೆ, ಮತ್ತು ಟೂರಿಸ್ಟ್ ಬರುತ್ತಾರೆ. ಹಾಗೆ ಅವರು ಬಂದಾಗ ನಾವು ಮದ್ಯವನ್ನು ನಿಷೇಧಿಸಿದ್ದೇವೆ, ನಮ್ಮದು ನೀತಿಯುತವಾದ ದೇಶ ಎಂದು ಹೇಳುವುದಕ್ಕಾಗುತ್ತದೆಯೇ ? ಮದ್ಯಪಾನ, ಕೊಲೆಪಾತಕ ಸುಲಿಗೆ ಇವುಗಳನ್ನು ಸಮಾಜ ಎಷ್ಟರ ಮಟ್ಟಿಗೆ ನಿಷೇಧಿಸುತ್ತದೆಯೋ ಅಷ್ಟರ ಮಟ್ಟಿಗೆ

(ಶ್ರೀ ರಾಮಕೃಷ್ಣ ಹೆಗಡೆ)

ಕುಡಿಯುವುದೂ ಕೂಡ ಅಧರ್ಮ ಪಾಪದ ಕೆಲಸ ಎಂದು ನಿರ್ಧಾರ ಮಾಡುವುದಕ್ಕೆ ಎಲ್ಲಿಯವರೆಗೆ ಸಾಧ್ಯವಿಲ್ಲವೋ ಅಲ್ಲಿಯವರೆಗೂ ಇದನ್ನು ಯಶಸ್ವಿಯಾಗಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿದು ಕೊಳ್ಳಬೇಕು. ಆದ್ದರಿಂದ ಇದನ್ನು ಗಾಂಧೀಜಿಯವರು ಕೇವಲ ಒಂದು ಸಲಹೆಯೆಂದು ಹೇಳಿದ್ದಾರೆ. ಕಳೆದ ಕೆಲವು ವರ್ಷಗಳಿಂದ ನಮ್ಮ ಸಮಾಜದಲ್ಲಿ ಒಂದು ತರಹ ನೀತಿಯ ಸಲಹೆಯನ್ನು ಕೊಟ್ಟಿ ದ್ದಾರೆ. ಆದರೆ ಅದರಂತೆ ನಡೆಯುವುದಕ್ಕೆ ಅನೇಕರಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಉದ್ದೇಶ ರಾಷ್ಟ್ರೀಯ ದೃಷ್ಟಿಯಿಂದ ಇರಬೇಕು. ವ್ಯವಹಾರಿಕ ದೃಷ್ಟಿಯಿಂದ ಸಮಾಜದ ಸೋಷಿ ಯಲ್ ಕಾನ್‌ಷನ್ಸ್ ಎಂದು ಕರೆಯುತ್ತೇವೆ. ಈ ದೃಷ್ಟಿಯಿಂದ ನೋಡಿದರೆ ಈಗ ಸಮಾಜದಲ್ಲಿ ಸಮಾಜಕ್ಕೆ ಗೊತ್ತಾಗತಕ್ಕಂಥ ಯಾವುದೇ ಒಂದು ಅಪರಾಧ ಆದರೆ ಆಗ ಸಮಾಜದ ಒಂದು ಪ್ರಭಾವ ಅದರ ಮೇಲೆ ಬೀಳುತ್ತದೆ. ಈಗ ಶ್ರೀಮಾನ್ ಕೃಷ್ಣಾ ಅವರು ಶ್ರೀಮತಿ ಯಶೋಧರಾ ದಾಸಪ್ಪನವರ ಆರ್ಗ್ಯುಮೆಂಟನ್ನು ತಮ್ಮ ಬಾಯಲ್ಲಿ ಹೇಳುತ್ತಿದ್ದರು. ಕಳ್ಳತನ ಸುಲಿಗೆ ಮೊದಲಾದುವುಗಳಿಗೆ ಯಾವ ರೀತಿ ಶಿಕ್ಷೆ ಮಾಡುತ್ತಾರೆಯೋ ಅದೇ ರೀತಿ ಕುಡಿಯುವುದಕ್ಕೂ ಕಟುತರವಾಗಿ ಶಿಕ್ಷೆ ಮಾಡಬೇಕು. ಈಗ ಇಂಡಿಯನ್ ಪಿನಲ್‌ಕೋಡು ಮತ್ತು ಕ್ರಿಮಿನಲ್ ಪ್ರೊಸೀಜರ್ ಕೋಡ್ ದೇಶದಲ್ಲಿ ಇದ್ದರೂ ಕೂಡ, ಅಂಥಾ ಅಪರಾಧಿಗಳನ್ನು ಹಿಡಿಯುವುದಕ್ಕೆ ಪ್ರತ್ಯೇಕವಾದ ಸಿಬ್ಬಂದಿ ಇದ್ದರೂ ಕೂಡ ಕಳ್ಳತನ, ಸುಲಿಗೆ ಮತ್ತು ಕೊಲೆ ನಡೆಯುತ್ತಿವೆ. ಅದೇ ರೀತಿ ಪ್ರೊಹಿಬಿಷನ್ ಕಾಯಿದೆಯನ್ನು ಜಾರಿಗೆ ತಂದರೂ ಕೂಡ, ಅಪರಾಧ ಸ್ವಲ್ಪಮಟ್ಟಿಗೆ ನಡೆಯು ತ್ತಿದೆ. ಆದ್ದರಿಂದ ಅದು ಅಯಶಸ್ವಿ ಆಯಿತು ಎಂದು ಹೇಳುವುದು ಸರಿಯಲ್ಲ. ಈ ಬಗ್ಗೆ ನನಗೆ ಒಂದು ಸಂದೇಹ ಇದೆ. ಅದು ಏನೆಂದರೆ, ನಮ್ಮ ಸಮಾಜ ಯಾವ ರೀತಿ ಕಳ್ಳತನ ಕೊಲೆ, ಸುಲಿಗೆ ಇವುಗಳನ್ನು ಯಾವ ದೃಷ್ಟಿಯಿಂದ ನೋಡುತ್ತಿದ್ದಾರೋ ಅದೇ ದೃಷ್ಟಿಯಿಂದ ಮಧ್ಯ ಪಾನವನ್ನು ನೋಡುತ್ತಾರೆಯೇ? ಇದರ ಬಗ್ಗೆ ನನಗೆ ವಿಶ್ವಾಸವಿಲ್ಲ ಎಂದಲ್ಲ. ಸಮಾಜ ಇದು ಅಷ್ಟೇ ತಪ್ಪು, ಅಷ್ಟೇ ಅಪವಿತ್ರ, ಅಧರ್ಮ ಕೆಲಸ, ಅನೀತಿಯ ಕೆಲಸ ಎಂಬ ಭಾವನೆಯಿಂದ ನೋಡುತ್ತಿದ್ದರೆ ಇವೊತ್ತು ನಮ್ಮ ದೇಶದಲ್ಲಿ ಇಷ್ಟು ಪ್ರಮಾಣದಲ್ಲಿ ಕಳ್ಳ ಬಟ್ಟಿ ಸಾರಾಯಿ ನಡೆಯಲು ಸಾಧ್ಯವಾಗುತ್ತಿರಲಿಲ್ಲ. ಒಬ್ಬ ಕಳ್ಳ ಬಂದ ಎಂದ ಕೂಡಲೇ ಅವನನ್ನು ಹಿಡಿಯಬೇಕೆಂದು ಎಲ್ಲರೂ ಹೇಳುತ್ತಾರೆ. ಆದರೆ ಕಳ್ಳ ಬಟ್ಟಿ ತಯಾರಾಗುತ್ತದೆ ಎಂದು ಎಷ್ಟು ಜನ ಹೇಳುತ್ತಾರೆ? ಬಹುಶಃ ಇದು ಯಾವಾಗ ಯಶಸ್ವಿಯಾಗುತ್ತದೆ ಎಂದರೆ, ಜನರಲ್ಲಿ ಇದರ ಬಗ್ಗೆ ಸಂಪೂರ್ಣ ಶ್ರದ್ಧೆ ಬಂದಾಗ ಆಗುತ್ತದೆ. ಕಳ್ಳ ಬಟ್ಟಿ ತಯಾರಿಸುವವರನ್ನೂ ಬೂಟ್ ಲೆಗ್ಗರ್ಸ್‌ನ್ನು ಹಿಡಿಯತಕ್ಕಂಥ ಪೋಲೀಸ್ ಸಿಬ್ಬಂದಿ ಏನಿದೆ ಅವರಿಗೆ ಪಾನನಿರೋಧದಲ್ಲಿ ವಿಶ್ವಾಸವಿದೆಯೇ? ಒಮ್ಮೆ ಅವನು ಕಳ್ಳ ಬಟ್ಟಿ ಸಾರಾಯನ್ನ ತಯಾರುಮಾಡುವವರನ್ನೂ, ಬೂಟ್ ಲೆಗ್ಗರ್ಸ್‌ನ್ನ ಹಿಡಿದರೆ ಅದನ್ನ ಕೋರ್ಟಿನಲ್ಲಿ ವಿಚಾರಣೆ ಮಾಡತಕ್ಕಂಥ ಮ್ಯಾಜಿಸ್ಟ್ರೇಟರಿಗೆ ಇದರ ಬಗ್ಗೆ ವಿಶ್ವಾಸ ಇದೆಯೇ? ಇದರ ಬಗ್ಗೆ ವಾದ ಮಾಡುವ ವಕೀಲರಲ್ಲಿ ವಿಶ್ವಾಸ ಇದೆಯೇ? ಸಾಕ್ಷಿ ಹೇಳುವುದಕ್ಕೆ ಯಾರು ಬರುತ್ತಾರೆಯೋ ಅವರಲ್ಲಿ ಇದರ ಬಗ್ಗೆ ವಿಶ್ವಾಸ ಇದೆಯೇ? ಸಮಾಜದ ಒಂದು ಅಂಗವಾದ ಕೆಲವರಿಗೆ, ಸಮಾಜದ ಕೆಲವೊಂದು ವರ್ಗಗಳಲ್ಲಿ ಇದರ ಬಗ್ಗೆ ಸಂಪೂರ್ಣವಾಗಿ ಶ್ರದ್ಧೆ ಇದ್ದು ಎಲ್ಲಾ ಜವಾಬ್ದಾರಿಯೂ ನಮ್ಮ ಮೇಲೆ ಬೀಳುತ್ತದೆ ಎನ್ನುವ ವಿಶ್ವಾಸ ಅವರಿಗೆ ಇಲ್ಲದೇ ಹೋದರೆ ಎಷ್ಟೇ ಪ್ರಯತ್ನ ಮಾಡಿದರೂ ಇದನ್ನು ಯಶಸ್ವಿಯಾಗಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ನಾವು ತಿಳಿದುಕೊಳ್ಳಬಹುದು. ಪ್ರಾರಂಭದಲ್ಲಿಯೇ ನಾನು ಹೇಳಿದ್ದೇನೆ. ಇದನ್ನ ಭಾವನಾತ್ಮಕ ದೃಷ್ಟಿಯಿಂದ, ನೋಡುವುದು ಬೇಡ. ರಿಯಲಿಸ್ಟಿಕ್, ಸೋಷಿಯಲ್, ಎಕನಾಮಿಕ್ ಸಮಸ್ಯೆಯೆಂದು ನೋಡಬೇಕು. ಕೇವಲ ಭಾವಪರವಶರಾಗಿ ಒಂದು ನಿರ್ದಿಷ್ಟವಾದ ದೃಷ್ಟಿಯಿಂದ ತಪ್ಪು ಮಾಡಿದ್ದೇವೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ, ಗಾಂಧೀಜಿಯವರ ನಾನ್‌ವೆಜಿಟೇರಿಯನ್ನು ಆಹಾರವನ್ನೂ ತಿನ್ನಕೂಡದು ಎಂದು ಹೇಳಿದ್ದರು. ಅದಕ್ಕೆ ಈಗ ಅಷ್ಟು ಮಹತ್ವ ಕೊಡುತ್ತಿಲ್ಲ. ಮತ್ತು ತಂಬಾಕು ಸೇವಿಸಬಾರದು ಎಂದು ಹೇಳಿದ್ದರು, ಅದಕ್ಕೆ ಮಹತ್ವ ಕೊಡುತ್ತಿಲ್ಲ. ಕೇವಲ ಭಾವನಾತ್ಮಕ ದೃಷ್ಟಿಯಿಂದ ಈ ವಿಚಾರವನ್ನ ವಿಮರ್ಶೆ ಮಾಡುವುದಕ್ಕೆ ಸಾಧ್ಯವಿಲ್ಲ.

ಮತ್ತೊಂದು ವಿಚಾರವೇನೆಂದರೆ, ಟೇಕ್‌ಚಂದ್ ಕಮಿಟಿಯ ವರದಿಯನ್ನು ಮಾನ್ಯ ಸದಸ್ಯರು ಕೆಲವರು ಓದಿದ್ದಾರೆ. ಯಾರೂ ಸಂಪೂರ್ಣವಾಗಿ ಓದಿಲ್ಲ ಮತ್ತು ಓದದೇ ಇರತಕ್ಕ ಸದಸ್ಯರ ವಿಷಯದಲ್ಲಿ ನಾನು ಎರಡು ಮಾತುಗಳನ್ನು ಹೇಳುತ್ತೇನೆ. ಮದ್ರಾಸು ಮತ್ತು ಗುಜರಾತು ಈ ಎರಡು ರಾಜ್ಯಗಳಲ್ಲಿ ಸಂಪೂರ್ಣವಾಗಿ ಪಾನನಿರೋಧ ಇದೆ. ಮೊದಲು ಮಹಾರಾಷ್ಟ್ರದಲ್ಲಿ ಇವತ್ತು ಈಗ ಅವರು ಅದನ್ನ ತಿದ್ದುಪಡಿ ಮಾಡಿದ್ದಾರೆ. ಅದನ್ನ ತಡೆ ಹಿಡಿಯುವುದಕ್ಕೆ ಸಾಧ್ಯವಿಲ್ಲ. ಇಡೀ ದೇಶದಲ್ಲಿ ⅓ರಷ್ಟು ಜನ ವಾಸಿಸುವ ಪ್ರದೇಶದಲ್ಲಿ ಪಾನನಿರೋಧ ಅರ್ಥಂಬರ್ಧ ಜಾರಿ

ಯಲ್ಲಿದೆ. ಪಾನನಿರೋಧ ಜಾರಿಯಲ್ಲಿ ಇದ್ದಂತಹ ಪ್ರದೇಶಗಳಲ್ಲಿ ಸ್ವಲ್ಪ ಹೆಚ್ಚು ಯಶಸ್ಸು ಸಿಕ್ಕಿರುವಂತಹ ಪ್ರದೇಶಗಳಲ್ಲಿ ಏನು ಒಂದು ಸಾಮಾನ್ಯ ಅಭಿಪ್ರಾಯ ಇದೆ ಎನ್ನುವುದಕ್ಕೆ ತೇಕ್‌ಚಂದ್ ಕಮಿಟಿಯವರು ಕೂಲಂಕಷವಾಗಿ ವಿಚಾರ ಮಾಡಿ ಕೊಟ್ಟಂತಹ ಕಾರಣ ಈ ರೀತಿ ಇದೆ:

> "There is a greater relative success of prohibition laws in Gujarat and Madras than in Maharashtra and other States. The reasons appear to be: (i) a low propensity to drink among the population of Gujarat and Madras compared to some other areas; (ii) the hold of tradition and religion; (iii) a period of education and preparation preceding prohibition; and (iv) the existence of a large number of social workers of standing and responsibility."

ಇದರ ಅರ್ಥ ಏನೆಂದರೆ, ಒಂದು ಅನೀತಿ, ಕಟುತರವಾದ ಒಂದು ದೋಷ, ಒಂದು ಸಾಮಾಜಿಕ ದೋಷವಿದ್ದರೆ ಅದನ್ನು ನಿರ್ಮೂಲ ಮಾಡುವಂತಹ ಸಾಮಾಜಿಕ ಪ್ರಜ್ಞೆ ಬೆಳೆದು ಅದು ಸಮಾಜದ ಪ್ರಭಾವದಿಂದ ಆಗಬೇಕೇ ಹೊರತು, ಕೇವಲ ಸರ್ಕಾರದ ಕಾನೂನಿನಿಂದ ಆಗುವುದು ಸಾಧ್ಯವಿಲ್ಲ. ಈ ದೃಷ್ಟಿಯಿಂದ ನೋಡಿದರೆ, ಮೈಸೂರು ರಾಜ್ಯದಲ್ಲಿ ಸಾರ್ವಜನಿಕರು ಇಂತಹ ಪ್ರಯತ್ನ ಮಾಡಿದ್ದಾರೆಯೇ ಎಂದು ನಾನು ಕೇಳಬೇಕಾಗುತ್ತದೆ. ಪಾನನಿರೋಧವನ್ನು ತೆಗೆಯಬೇಕು ಎಂದು ಹೇಳತಕ್ಕಂಥಾ ವಾದವಲ್ಲಿರುವ ಬಹಳ ಮುಖ್ಯವಾದ ಒಂದು ಅಂಶ ಎಂದರೆ, ಇಲಿಸೀಟ್ ಡಿಸ್ಟಿಲೇಷನ್ ಅನ್ನು ಬಹಳ ಹೆಚ್ಚಾಗಿ ಮಾಡುವಂಥಾದ್ದನ್ನು ನಿಜವಾಗಿ ನೋಡಿದರೆ, ಇದರಿಂದ ಸಾಮಾಜಿಕ ಸ್ವಾಸ್ಥ್ಯ ಕೆಡುತ್ತದೆ, ದೈಹಿಕ ಸ್ವಾಸ್ತ್ಯ ಮತ್ತು ಮಾನಸಿಕ ಸ್ವಾಸ್ತ್ಯ ಕೆಟ್ಟು ಇದರ ದುಷ್ಪರಿಣಾಮಗಳು ಸಮಾಜದ ಮೇಲೆ ಸರ್ಕಾರದ ಮೇಲೆ ಆಗುತ್ತದೆ.

ಈ ದುಷ್ಪರಿಣಾಮಗಳೇನು ಎಂದರೆ, ಮೊದಲನೆದಾಗಿ ಕಾಯಿದೆಗಳಿಗೆ ಗೌರವ ಕೊಡದೆ ಇರತಕ್ಕದ್ದು. ಎರಡನೇ ದುಷ್ಪರಿಣಾಮ ಎಂದರೆ ಯಾರು ವಿಶೇಷವಾಗಿ ಕೆಲಸ ಮಾಡದೆ ಕಳ್ಳಭಟ್ಟಿ ಸಾರಾಯಿಯನ್ನು ಕದ್ದು ಮಾರಾಟ ಮಾಡುತ್ತಿದ್ದಾರೋ ಮತ್ತು ಜನರಿಂದ ಹೆಚ್ಚು ಹೆಚ್ಚಾಗಿ ಹಣವನ್ನು ತೆಗೆದುಕೊಂಡಿದ್ದಾರೋ ಅವರು ಇದರಿಂದ ಇನ್ನೂ ದುರ್ಮಾರ್ಗಕ್ಕೆ ಇಳಿಯುತ್ತಾರೆ. ಬ್ಲ್ಯಾಕ್ ಮಾರ್ಕೆಟಿಂಗ್ ಹೆಚ್ಚಾಗುತ್ತದೆ. ಹೀಗೆ ಬ್ಲ್ಯಾಕ್ ಮನಿ ಬರುವುದರಿಂದಾಗಿ ಇನ್‌ಫ್ಲೇಷನ್ ಎನ್ನುವುದು ಹೆಚ್ಚುತ್ತದೆ. ಮತ್ತು ಇದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇನು ಮೂರನೆಯದು ಏಂದರೆ, ಪೋಲೀಸು ಸಿಬ್ಬಂದಿ ಅಥವಾ ಯಾರು ಕಳ್ಳಬಟ್ಟಿ ಸಾರಾಯಿಯನ್ನು ಪತ್ತೆ ಮಾಡಬೇಕೆಂಬ ಜವಾಬುದಾರಿ ಹೊತ್ತಿರುತ್ತಾರೋ ಅವರಿಗೆ ಮತ್ತು ಕಳ್ಳಬಟ್ಟಿ ಸಾರಾಯಿ ಮಾಡುವ ವರ್ಗದವರಿಗೆ ಬೆಳೆಯುವ ಒಂದು ಸಂಬಂಧದಿಂದ ನಮ್ಮಲ್ಲಿ ಇನ್ನಿತರ ಅಪರಾಧಗಳೂ ಆಗುತ್ತವೆ. ಬೇರೆ ಅಪರಾಧಗಳ ಬಗ್ಗೆ ಪೋಲೀಸರಿಗೆ ಸಾಕಷ್ಟು ಗಮನ ಹೋಗುವುದಿಲ್ಲ. ಈ ಮೂರು ಕಾರಣಗಳ ಮೇಲೆ ಟೀಕೆಗಳನ್ನು ಮಾಡುತ್ತಾರೆ. ಈಗಲೂ ಕೂಡ ಈ ಕೆಟ್ಟ ಇಲ್ಲಿಸಿಟ್ ಡಿಸ್ಟಿಲೇಷನ್ನನ್ನು ಮಾಡುತ್ತಿದ್ದಾರೆ, ಮಾಡುತ್ತಿಲ್ಲ ಎಂದು ಹೇಳುವುದಿಲ್ಲ. ವೆಟ್ ಏರಿಯಾದಲ್ಲೂ ಇದು ಇದೆ. ನಾವು ಎಲ್ಲಿಯವರೆಗೆ ಸಂಪೂರ್ಣವಾಗಿ ಈ ಇಲ್ಲಿಸಿಟ್ ಡಿಸ್ಟಿಲೇಷನ್ನನ್ನು ತೆಗೆದು ಹಾಕಲು ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಪ್ರಾಹಿಬಿಷನ್ನನ್ನು ಸಂಪೂರ್ಣವಾಗಿ ಫಲಕಾರಿಯಾಗಿ ಮಾಡಲು ಸಾಧ್ಯವಾಗುವುದಿಲ್ಲ. ಅವೆಲ್ಲಾ ಹುರುಳಿಲ್ಲದ ವಾದಗಳಾಗುತ್ತವೆ. ನಿಜವಾಗಿಯೂ ನೋಡಿದರೆ ಪ್ರೊಹಿಬಿಷನ್ನು ಇಲ್ಲವೇ ಇಲ್ಲವೇನೋ ಎನ್ನುವಂತೆ ನಮಗೆ ಒದಗಿಸಿರುವ ತೇಕ್‌ಚಂದ್ ಕಮಿಟಿಯವರ ಅಂಕೆ ಸಂಖ್ಯೆಗಳಿಂದ ಚೆನ್ನಾಗಿ ಗೊತ್ತಾಗುತ್ತದೆ. ಈ ತೇಕ್‌ಚಂದ್ ಕಮಿಟಿಯ ರಿಪೋರ್ಟಿನ ಪುಟ 481 ರಲ್ಲಿ 'ಲಿಸಿಟ್' ಮತ್ತು 'ಇಲ್ಲಿಸಿಟ್' ಡ್ರಿಂಕಿಂಗ್ ಬಿಲ್ ಎನ್ನುವುದರಲ್ಲಿ ವಿವರವಾಗಿ ಹೇಳಿದ್ದಾರೆ. ಕಾಯಿದೆ ಪ್ರಕಾರ ಏನು ಕುಡಿಯುತ್ತಾರೆ ಅದಕ್ಕೆ ಒಟ್ಟು ಎಷ್ಟು ಖರ್ಚಾಗುತ್ತದೆ, ಕಾಯಿದೆಗೆ ವಿರೋಧವಾಗಿ ಎಷ್ಟು ಹಣ ಬರುತ್ತದೆ ಎನ್ನುವುದನ್ನು ನೋಡಿದರೆ ನಮ್ಮ ಇಡೀ ದೇಶದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಮೂರನೇ ಎರಡು ಭಾಗ ಜನಸಂಖ್ಯೆ ಇರತಕ್ಕ ಪ್ರದೇಶದಲ್ಲಿ ಎಲ್ಲೂ ಪ್ರೊಹಿಬಿಷನ್ ಇಲ್ಲ. ಮೂರನೇ ಒಂದು ಭಾಗ ಜನಸಂಖ್ಯೆ ಇರುವ ಪ್ರದೇಶದಲ್ಲಿ ಪ್ರೊಹಿಬಿಷನ್ ಇದೆ. ಎಲ್ಲಿ ಪ್ರೊಹಿಬಿಷನ್ ಇಲ್ಲವೋ ಅಲ್ಲಿ ಲಿಸಿಟ್‌ಗಳ ಬಿಲ್ ನೋಡಿದರೆ 94 ಕೋಟಿಯಷ್ಟು ಹಣ ಬರುತ್ತದೆ. ಮತ್ತು ಇಲ್ಲಿಸಿಟ್ ಲಿಕರುಬಿಲ್‌ಗಳಿಂದ ಸುಮಾರು 9 ಕೋಟಿಯಷ್ಟು ಬರುತ್ತದೆ. ಸಂಪೂರ್ಣವಾಗಿ ಪ್ರೊಹಿಬಿಷನ್ ಇರತಕ್ಕ ಪ್ರದೇಶದಲ್ಲಿ ಇಲ್ಲಿಸಿಟ್ ಲಿಕರುಗಳ ಬಿಲ್ಲುಗಳ ಮೊತ್ತ ಎಷ್ಟು ಎನ್ನುವುದು ಇಲ್ಲಿ ನಮಗೆ ಗೊತ್ತಾಗುವುದಿಲ್ಲ. ಇದರ ಬಗ್ಗೆ ಇಲ್ಲಿ ನಮೂದಿಸಿಯೂ ಇಲ್ಲ. ಆದರೆ ಇಲಿಸಿಟ್ ಲಿಕರುಗಳಿಂದ ಸುಮಾರು 43 ಕೋಟಿಯಷ್ಟು ಆಗುತ್ತದೆ ಎಂದು ಇಲ್ಲಿ ಗೊತ್ತಾಗುತ್ತದೆ. ಇದರಲ್ಲಿ ಮೂರನೇ ಎರಡು ಭಾಗ ಜನರಿರುವ ಪ್ರದೇಶಕ್ಕಿಂತ

(ಶ್ರೀ ರಾಮಕೃಷ್ಣ ಹೆಗಡೆ)

ಮೂರನೇ ಒಂದು ಭಾಗ ಇರತಕ್ಕ ಪ್ರದೇಶಗಳಿಂದ ಲಿಕರುಗಳ ವರಮಾನ ಸುಮಾರು 43 ಕೋಟಿಯಷ್ಟು ಬರುತ್ತೆ ಇನ್ನುಳಿದ ಎರಡು ಭಾಗಗಳಲ್ಲಿ ಕಾಯದೆ ಪ್ರಕಾರ ಕೊಡತಕ್ಕದ್ದು ಸುಮಾರು 94 ಕೋಟಿಯಷ್ಟು. ಆದುದರಿಂದ ನಿಜವಾಗಿಯೂ ಇಲ್ಲಿ ಪ್ರೊಹಿಬಿಷನ್ ಇದೆಯೇ ಎನ್ನುವ ಸಂದೇಹ ನಮಗೆ ಬಂದಿದೆ. ಇಲ್ಲಿಸಿಟ್ ಲಿಕರುಗಳ ಮಾರಾಟ ಮಾಡುವುದರ ಬಿಲ್ಲುಗಳು ಏನಿವೆ ಅದರ ಬಗ್ಗೆ ಸರಿಯಾದ ಅಂಕೆ ಸಂಖ್ಯೆಗಳು ಇಷ್ಟೇ ಎಂದು ನಂಬುವುದು ಬಹಳ ಕಷ್ಟ, ಇನ್ನೂ ಹೆಚ್ಚಾಗಿರಬೇಕು. ಇಂಥ ಸರಿಯಾದ ಲೆಕ್ಕಗಳೂ ಸಿಗುವುದೂ ಕಷ್ಟ. ಆದುದರಿಂದ ಇಲ್ಲಿರುವ ಅಂಕೆ ಸಂಖ್ಯೆಗಳನ್ನು ನೋಡಿದರೆ ಮನಸ್ಸಿಗೆ ಒಂದುತರಹ ವೇದನೆಯಾಗುತ್ತದೆ, ಮನಸ್ಸಿಗೆ ಒಂದು ತರಹ ನಿರಾಶೆಯಾಗುತ್ತದೆ. ಪ್ರೊಹಿಬಿಷನ್ ಏರಿಯಾ ಎಂದು ಕಳೆದ 25 ವರ್ಷಗಳಿಂದಲೂ ಜಾರಿಗೆ ತಂದಿದ್ದೇವೆ. ಮೂರನೇ ಒಂದು ಭಾಗದಲ್ಲಿ ಆಗುವ ಲಿಕರುಗಳ ಮಾರಾಟದ ಅಂಶವನ್ನು ನೋಡಿದರೆ ಇದರಲ್ಲಿ ಏನೋ ಒಂದು ದೊಡ್ಡ ದೋಷ ಇದೆ ಎನ್ನುವುದನ್ನು ನಾವು ಒಪ್ಪಿಕೊಳ್ಳ ಬೇಕಾಗುತ್ತದೆ. ಇದು ಹೇಗಾದರೂ ಇರಲಿ ಇದರ ವಿಚಾರವಾಗಿ ಇನ್ನು ಹೆಚ್ಚು ಆಳವಾಗಿ ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಮಾನ್ಯ ಸದಸ್ಯರು ಇದರ ಬಗ್ಗೆ ವೈರೂರು ರಾಜ್ಯದಲ್ಲಿ ಏನೇನು ಮಾಡುತ್ತೀರಿ ಎಂದು ಪುನಃ ಪುನಃ ಕೇಳುತ್ತಿದ್ದಾರೆ. ಇದಕ್ಕೆ ಆಗಲೇ ನಮ್ಮ ಮುಖ್ಯ ಮಂತ್ರಿಗಳೂ ಹೇಳಿದ್ದಾರೆ ಮತ್ತು ನನ್ನ ಹಿಂದೆ ಈ ಖಾತೆಯನ್ನು ವಹಿಸಿಕೊಂಡಿದ್ದ ನನ್ನ ಸ್ನೇಹಿತರೂ ಹೇಳಿದ್ದಾರೆ. ಇದರಲ್ಲಿ ಸರಕಾರದ ಪಾಲಿಸಿಯೇನು ಎನ್ನುವುದನ್ನು ಸ್ಪಷ್ಟ ಪಡಿಸಿದ್ದಾರೆ. ಪ್ರೊಹಿಬಿಷನ್ನನ್ನು ಅನೇಕ ವರ್ಷಗಳಿಂದ ಜಾರಿಯಲ್ಲಿ ತಂದಿದ್ದೇವೆ. ಇಷ್ಟು ವರ್ಷಗಳ ಅನುಭವದಿಂದ ದೇಶದಲ್ಲಿ ಸಾಮಾಜಿಕವಾಗಿ ಎಷ್ಟು ಬದಲಾವಣೆಯಾಗಿದೆ ಮತ್ತು ಈ ಕಾಯದೆಯಲ್ಲೇನಾದರೂ ದುಷ್ಪರಿಣಾಮ ಹಾಗೂ ತೊಡಕುಗಳೇನಾದರೂ ಆಗಿವೆಯೇ ಇವೆಲ್ಲವನ್ನೂ ಸಂಪೂರ್ಣವಾಗಿ ನೋಡಿ ಆಮೇಲೆ ಒಂದು ಆಖೈರು ತೀರ್ಮಾನವನ್ನು ತೆಗೆದುಕೊಳ್ಳುವುದೇ ನಮ್ಮ ಪಾಲಿಸಿ ಯಾಗಿದೆ. ಈ ಆಖೈರು ತೀರ್ಮಾನ ಇನ್ನು ಎಷ್ಟು ವರ್ಷಗಳಲ್ಲಾಗುತ್ತದೆ ಎಂದು ಕೇಳಿದರೆ ಅದಕ್ಕೆ ಉತ್ತರ ಕೊಡುವುದು ಕಷ್ಟ. ಕಾಯದೆ ದೃಷ್ಟಿಯಿಂದ ಇಂಡಿಯಾ ಸರ್ಕಾರದವರ ಮೋರೆ ನೋಡಿಕೊಂಡು ಅದರ ಮೇಲೆ ನಿರ್ಣಯವನ್ನೇನೂ ತೆಗೆದುಕೊಳ್ಳಬೇಕಾದ ಅಗತ್ಯವಿಲ್ಲ. ವ್ಯಾವಹಾರಿಕ ದೃಷ್ಟಿಯಿಂದ ನೋಡಿದರೆ ರಾಷ್ಟ್ರಕ್ಕೆ ಅನ್ವಯಿಸತಕ್ಕ ಒಂದು ನಿರ್ಣಯ ತೆಗೆದುಕೊಳ್ಳುವುದು ಅಗತ್ಯ. ಇದರ ಬಗ್ಗೆ ಮೂರು ನಾಲ್ಕು ವರ್ಷಗಳ ಬಡ್ಜೆಟ್ಟು ಮೇಲೆಯೂ ಚರ್ಚೆ ಮಾಡಿದ್ದೇವೆ ಎಂದು ಇಲ್ಲಿ ಮಾನ್ಯ ಸದಸ್ಯರು ಹೇಳಿದರು. ಅಲ್ಲದೆ ಅವರು ಇನ್ನೂ ಹೆಚ್ಚು ಹೆಚ್ಚು ಕರವನ್ನೇ ಹಾಕುತ್ತಿದ್ದೀರಿ ಎಂದು ಹೇಳಿದರು. ಕೆಲವು ರಾಜ್ಯಗಳಲ್ಲಿ ಎಂದರೆ ವೆಸ್ಟ್ ಬೆಂಗಾಲ್ ಬಿಹಾರ್, ರಾಜಾಸ್ತಾನ, ಈ ರಾಜ್ಯಗಳಲ್ಲಿ ಪಾನನಿರೋಧವಿಲ್ಲ; ಇದರಿಂದ ಅಲ್ಲಿನ ಹೆಚ್ಚು ಜನರು ಹಿಂದುಳಿದವರೂ ಹಾಗೂ ಬಡವರಾಗಿದ್ದಾರೆ. ಅಲ್ಲಿಯ ಮುಖ್ಯ ಮಂತ್ರಿಗಳು ಆ ಸರಕಾರದಲ್ಲಿ ಕಳೆದ 18 ವರ್ಷಗಳಿಂದಲೂ ಪಾನನಿರೋಧವನ್ನು ವಿರೋಧ ಮಾಡುತ್ತಲೇ ಬಂದಿದ್ದಾರೆ. ಪಾನ ನಿರೋಧವಿಲ್ಲಿರಬೇಕೆಂದು ಕೈ ಹಾಕಿರುವುದು ಎಂದರೆ, ಮಹಾರಾಷ್ಟ್ರ, ಮದರಾಸು ಹಾಗೂ ಗುಜರಾತ್. ಈ ಮೂರು ರಾಜ್ಯಗಳೂ ಸಾಂಪತ್ತಿಕ ದೃಷ್ಟಿಯಿಂದ ಉತ್ತಮಸ್ಥಿತಿಯಲ್ಲಿವೆ, ಈ ರಾಜ್ಯಗಳು ಆರ್ಥಿಕವಾಗಿ ನೋಡಲಿ, ಔದ್ಯೋಗಿಕವಾಗಿ ನೋಡಲಿ ಅಗ್ರಿಕಲ್‌ಚರ್ ವ್ಯವಸ್ಥೆಯನ್ನೇ ಬೇಕಾದರೂ ನೋಡಲಿ ಉನ್ನತಮಟ್ಟದಲ್ಲಿವೆ. ಈ ಮೂರು ರಾಜ್ಯಗಳಲ್ಲಿ ಓವರು ಡ್ರಾಫ್ಟ್ ಡ್ರಾ ಮಾಡುತ್ತಾರೆ ಎನ್ನುವ ಪ್ರಶ್ನೆಯೇ ಇಲ್ಲ. ಈ ಮೂರು ರಾಜ್ಯಗಳಲ್ಲಿ ಪ್ರೊಹಿಬಿಷನ್ನನ್ನು ಜಾರಿಗೆ ತಂದಾಗ ಇದರ ಆರ್ಥಿಕ ಶಕ್ತಿ ಏನಿತ್ತು ಎಂದು ಹೇಳುವಾಗ ನಾನು ಹೇಳುವುದನ್ನು ಇಲ್ಲಿ ಯಾರೂ ತಪ್ಪು ಅರ್ಥ ತಿಳಿದುಕೊಳ್ಳಬಾರದು. ಪ್ರೊಹಿಬಿಷನ್ ನಿಂದ ಆರ್ಥಿಕವಾಗಿ ನಮಗೆ ಹಾನಿಯಾಗುತ್ತದೆ. ಮತ್ತು ಕುಡುಕರಿಂದ ಬರುವ ಉತ್ಪನ್ನಗಳನ್ನು ತೆಗೆದುಕೊಂಡು ಅದನ್ನು ಸ್ಕೂಲುಗಳನ್ನು ಕಟ್ಟುವುದಕ್ಕಾಗಿ ಅಥವಾ ಮನೆಗಳನ್ನು ಕಟ್ಟುವುದಕ್ಕಾಗಿ ತೆಗೆದುಕೊಳ್ಳಬೇಕು ಎನ್ನುವುದು ನನ್ನ ಉದ್ದೇಶವಲ್ಲ. ಅನಾವಶ್ಯಕವಾಗಿ ಹೇಗೂ ದುಡ್ಡು ಹೋಗುತ್ತದೆ. ಅದುನಮಗೆ ಬಂದರೆ ಅದು 'ಇನ್‌ಸಿಡೆಂಟಲ್' ಅಷ್ಟೇ. ಆದುದರಿಂದ ನಾವು ಕೇವಲ ಈ ಬಾಬಿನಿಂದ ಆದಾಯ ಬರುತ್ತದೆ, ಪಾನವಿರೋಧವನ್ನು ತೆಗೆದುಹಾಕಬೇಕು ಎಂದು ನಾವು ಯಾವಾಗಲೂ ಮಾಡುವ ಯೋಚನೆಯಲ್ಲ ಎಂದು ಇಲ್ಲಿ ಪುನಃ ಪುನಃ ಹೇಳಲು ಬಯಸುತ್ತೇನೆ. ಇನ್ನು ಈ ನೀತಿಯಿಂದ ಒಳ್ಳೆಯ ಪರಿಣಾಮವಾಗಿದೆಯೇ ಅಥವಾ ದುಷ್ಪರಿಣಾಮವಾಗಿದೆಯೇ, ಇದರಲ್ಲಿ ಯಾವುದು ಹೆಚ್ಚು ಯಾವುದು ಕಡಿಮೆ ಎನ್ನುವುದನ್ನು ನಾವು ಭಾವನಾತ್ಮಕ ದೃಷ್ಟಿಯಿಂದಲ್ಲದೆ ವ್ಯಾವಹಾರಿಕ ದೃಷ್ಟಿಯಿಂದ ತೆಗೆದುಕೊಳ್ಳಬೇಕು. ಇದಕ್ಕಾಗಿ ಅವಸರಮಾಡುವುದು ಅನಾವಶ್ಯಕ. ಬಹುಶಃ ಒಂದು ಅಥವಾ ಒಂದೂವರೆ ವರ್ಷಗಳಿಂದ ನಮ್ಮ ಈ ವಿಧಾನಸಭೆಯಲ್ಲಿ ಹಾಗೂ ವಿಧಾನಪರಿಷತ್ತಿನಲ್ಲಿ ಇದರ ಚರ್ಚೆಯಾಗಿದೆ. ಇನ್ನೂ ಹೆಚ್ಚು ಚರ್ಚೆ ಮಾಡಲಿ. ಇದರ ಬಗ್ಗೆ ಚನ್ನಾಗಿ ಚರ್ಚೆ ಮಾಡಿ ದೇಶವೆಲ್ಲಾ ಇದನ್ನು ಯೋಗ್ಯವಾಗಿ ಬದಲಾವಣೆ ಮಾಡುವುದು ಅವಶ್ಯಕ ಎಂದು ಹೇಳುವಾಗ ಸೂಕ್ತವಾದ ನಿರ್ಣಯ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ಇಲ್ಲಿ ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರು ಸಮಯ ಮೀರಿ ನನಗೆ ಅವಕಾಶ ಕೊಟ್ಟುದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸಿ ಇಷ್ಟು ಹೇಳಿ ಈ ಸಭೆಯ ಮುಂದಿಟ್ಟಿರತಕ್ಕ ಬೇಡಿಕೆಗಳಿಗೆ ಸಭೆಯವರು ಮನ್ನಣೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ.—ಸ್ವಾಮೀ, 35 ಲಕ್ಷ ಪೆನ್‌ಷನ್ನು under ಸೋಷಿಯಲ್ ಸೆಕ್ಯೂರಿಟಿ ಸ್ಕೀಂಗಳಿಗಾಗಿ ಹೋದ ವರ್ಷ 1965-66 ರ ಬಡ್ಜೆಟ್ಟಿನಲ್ಲಿ 34 ಲಕ್ಷದಷ್ಟು ಒದಗಿಸಿದುದು ಸರಿಯಾಗಿ ವಿತರಣೆಮಾಡಿಲ್ಲ. ಎಂದು ಹೇಳುವಾಗ ಇದು ಸತ್ಯಕ್ಕೆ ದೂರವಾದ ಮಾತು ಎಂದರು. ಇದರ ಬಗ್ಗೆ ಅಧಿಕಾರಿಗಳು ಸರಿಯಾದ ಕ್ರಮ ತೆಗೆದುಕೊಳ್ಳಲಿಲ್ಲವೇ ಹೇಗೆ? ಇದಕ್ಕೆಲ್ಲಾ ಯಾರು ಹೊಣೆ?

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಹೇಳಿದಾಗ ಮಾನ್ಯ ಸದಸ್ಯರು ಇರಲಿಲ್ಲ ಎಂದು ಕಾಣುತ್ತದೆ. ಇದರ ಬಗ್ಗೆ ಸಾಕಾದಷ್ಟು ಪ್ರಚಾರವಾಗಿಲ್ಲ, ಇದು ಹೊಸ ಯೋಜನೆ, ಜನರಿಗೆ ತಿಳಿಯುವಂತೆ ಪ್ರಚಾರಮಾಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದೆ. ಇಲ್ಲಿಯವರೆಗೆ 215 ಜನರಿಗೆ ಕೊಡಲಾಗಿದೆ. ನಮ್ಮ ಸೆಕ್ರೆಟೇರಿಯೆಟ್ಟಿನಲ್ಲಿ 7 ದಿವಸಗಳಿಗೆ ಜಾಸ್ತಿಯಾಗಿ ಯಾವುದನ್ನೂ ಇಟ್ಟುಕೊಳ್ಳುವುದಿಲ್ಲ.

Mr. SPEAKER.—The question is :

"That the respective sums not exceeding the amounts mentioned in Demands Nos. 1, 3, 5, 34, 35, 36, 40, 41, 52 and 54 be granted to defray the charges which will come in course of payment during the financial yearending with 31st day of March 1967."

The motion was adopted.

As directed by the Chair, the motion for Demands for Grants as adopted by the House, are reproduced below :

DEMAND NO. 1.—TAXES ON INCOME OTHER THAN CORPORATION TAX.

4. Taxes on Income other than Corporation Tax.

"That a sum not exceeding Rs. 5,82,000 be granted to the Government to defray the charges which will come in course of payment during the financial year for the period ending 31st day of March 1967, in respect of 'Taxes on Income other than Corporation Tax'."

DEMAND NO. 3.—STATE EXCISE.

10. State Excise Duties.

"That a sum not exceeding Rs. 24,99,000 be granted to the Government to defray the charges which will come in course of payment during the financial year for the period ending 31st day of March 1967, in respect of 'State Excise Duties'."

DEMAND NO. 5.—SALES TAX ADMINISTRATION.

12. Sales Tax.

"That a sum not exceeding Rs. 54,79,000 be granted to the Government to defray the charges which will come in course of payment during the financial year for the period ending 31st day of March 1967, in respect of 'Sales Tax'."

DEMAND No. 34.—PENSIONS AND OTHER RETIREMENT BENEFITS.

65. Pensions and other Retirement Benefits.

"That a sum not exceeding Rs 2,89,74,000 be granted to the Government to defray the charges which will come in course of payment during the financial year for the period ending 31st day of March 1967, in respect of 'Pensions and other Retirement Benefits'."

DEMAND No. 35.—TERRITORIAL AND POLITICAL PENSIONS.

66. Territorial and Political Pensions.

"That a sum not exceeding Rs. 1,61,000 be granted to the Government to defray the charges which will come in course of payment during the financial year for the period ending 3st day of March 1967, in respect of "Territorial and Political Pensions'."

DEMAND No. 36.—PRIVY PURSES AND ALLOWANCES.

67. Privy Purses and Allowances of Indian Rulers.

" That a sum not exceeding Rs. 33,000 be granted to the Government to defray the charges which will come in curse of payment during the financial year for the period ending 31st day of March 1967, in respect of ' Privy Purses and Allowances of Indian Rulers '."

DEMAND No. 40.—COMMUTATION OF PENSIONS.

72. Commutation of Pensions.

" That a sum not exceeding Rs. 20,69,000 be granted to the Government to defray the charges which will come in course of payment during the financial year for the period ending 31st day of March 1967, in respectof ' Commutation of Pensions '. "

DEMAND No. 41.—MISCELLANEOUS COMPENSATIONS AND ASSIGNMENTS.

76. Other Miscellaneous Compensations and Assignments.

" That a sum not exceeding Rs. 1,12,02,000 be granted to the Government to defray the charges which will come in course of payment during the financial year for the period ending 31st day of March 1967, in respect of ' Other Miscellaneous Compensations and Assignments '."

DEMAND NO. 52.—COMMUTED VALUE OF PENSIONS.

120. Payments of Commuted Value of Pensions.

"That a sum not exceeding Rs. 20,69,000 be granted to the Government to defray the charges which will come in course of payment during the financial year for the period ending 31st day of March 1967, in respect of 'Payments of Commuted Value of Pensions'."

DEMAND NO. 54.—ADVANCES AND LOANS.

Q. Loans and Advances by State/Union Territory Governments.

"That a sum not exceeding Rs. 14,76,54,000 be granted to the Government to defray the charges which will come in course of payment during the financial year for the period ending 31st day of March 1967, in respect of 'Loans and Advances by State/Union Territory Governments'."

Mr. SPEAKER.—The House will now adjourn to meet at 1 P.M. on Monday, the 14th March 1966.

The House adjourned at Fifty-five Minutes past Twelve of the Clock to meet again at One of the Clock on Monday, the 14th March 1966.

WD 6513—GPB—500—10-6-66